

ಸಿವಿಜಿ ಇಂಡಿಯಾ • ಕುವೆಂಪು ೧೦೮ ನೆನಪು

54

# ಕಲ್ಲೇ ಕಲ್ಲೇ ಕಥೆ ಹೇಳು

ಡಾ. ಶಿರಗಾನಹಳ್ಳಿ ಶಾಂತನಾಯ್ಕ

ಸಿವಿಜಿ

ಕುವೆಂಪು 108 ನೆನಪು – 54

# ಕಲ್ಲೇ ಕಲ್ಲೇ ಕಥೆ ಹೇಳು

ಡಾ. ಶಿರಗಾನಹಳ್ಳಿ ಶಾಂತನಾಯ್ಕ

**ಸಿವಿಜಿ ಇಂಡಿಯಾ**
ಕಸ್ತೂರ್‌ಬಾ ಭವನ, ಗಾಂಧಿಭವನ ಆವರಣ
ಕುಮಾರಪಾರ್ಕ್ ಪೂರ್ವ, ಬೆಂಗಳೂರು – ೫೬೦ ೦೦೧

**Kalle Kalle Kathe Eyalu**
*By*
**Dr. Shiraganahalli Shantha Naik**
# L. 8 7th Cross, Opp. J.C. Polytechnic College
Manasagangothri, Mysore - 570 006.
Mobile : 9449021006

*Published by*
**CVG INDIA**
Kasturba Bhavana
Gandhi Bhavana Campus
Kumara Park East
Bangalore - 560 001
Phone : 080 - 22340799



First Impression : **2011**
Pages : iv + 112 = 116,   Price : Rs. **80/-**
1/8th Demmy
80 GSM Maplitho
ISBN : 978-93-81977-45-3
Cover Design by : **Rathod**


*Printed By*
**Shakthi Printers & Publishers**
No. 277, 5th Cross
Vidhana Soudha Extn., Laggere
Bangalore - 560 058
Phone : 080-28372643

ನನ್ನೆದೆಯ ಬಾನಿನಲಿ
ಧ್ರುವತಾರೆ ನೀನಿರಲು
ದಾರಿ ತಪ್ಪಿದರೇನು?
ದಿಕ್ಕು ತಪ್ಪೆನೊ ನಾನು,
ಜೀವಯಾತ್ರೆಯಲಿ!

ಗುರಿಯು ತಪ್ಪುವುದಿಲ್ಲ;
ಕಡೆಗೆ ಬರುಗೈಯಲ್ಲ!
ದೊರೆಕೊಳ್ಳುವುದು ಎಲ್ಲ,
ತುಂಬಿರಲು ನಂಬುಗೆಯು
ಹೃದಯಪಾತ್ರೆಯಲಿ!

– ಕುವೆಂಪು

ಸಂಪಾದಕರು
ಡಾ. ಬೈರಮಂಗಲ ರಾಮೇಗೌಡ
ಸಂಚಾಲಕರು
ಸಿವಿಜಿ ಚಂದ್ರು
ಗಿರಿಜಾ ಚಂದ್ರು





ನಿಲ್ಲು ನಿಲ್ಲಲೆ ನವಿಲೆ ನಿನ್ನ ಕಣ್ಣಗಳೇಸು
ಕಣ್ಣ ಬಣ್ಣಗಳೇಸು ಎಣಿಸಲಾರೆ!
ಎಲ್ಲ ರೂಪಿಸಿದವನು ಎಲ್ಲಿ ತಾನಡಗಿದನೆ
ತಾಳಲಾರದು ಜೀವ ಹೇಳಬಾರೆ
– ಮಧುರಚೆನ್ನ



# ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ

ಜಗತ್ತಿನ ಸಾಹಿತಿಗಳಲ್ಲಿಯೇ ಅಪರೂಪ ಎನಿಸುವಂಥ ಸಾಮಾಜಿಕ ಕಳಕಳಿಯನ್ನು ಕುವೆಂಪು ತಮ್ಮ ಸಾಹಿತ್ಯ, ಉಪನ್ಯಾಸ, ಭಾಷಣಗಳ ರೂಪದಲ್ಲಿ ಪ್ರಕಟಪಡಿಸಿದ್ದಾರೆ. ಬೇರೊಂದು ರಾಷ್ಟ್ರದಲ್ಲಿ ಇಲ್ಲದಷ್ಟು ಪ್ರಮಾಣದಲ್ಲಿ ಸಾಮಾಜಿಕ ಸಮಸ್ಯೆಗಳು, ಸಾಮಾಜಿಕ ಲೋಪದೋಷಗಳು, ಅನ್ಯಾಯ ವಂಚನೆಗಳು ತುಂಬಿಕೊಂಡ ಕೊಳಚೆ ಪ್ರದೇಶವಾಗಿರುವ ಈ ಮಹಾನ್ ಭಾರತದಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ವಿವೇಕಾನಂದ, ಬರ್ಟ್ರೆಂಡ್ ರಸೆಲ್, ಹಕ್ಸ್‌ಲೇ, ಇಂಗರ್‌ಸಾಲ್, ಸಾಕ್ರೇಟಿಸ್ ಮುಂತಾದ ವಿಚಾರವಾದಿಗಳಿಂದ ಸ್ಫೂರ್ತಿಪಡೆದು ಸ್ವತಂತ್ರಾಲೋಚನೆ ಮತ್ತು ಲೋಕಾನುಭವವನ್ನು ಮಥಿಸಿ ಬಂದ ಚಿಂತನೆಗಳಿಂದ ಸಾಹಿತ್ಯ ನಿರ್ಮಾಣಕ್ಕೆ ತೊಡಗಿದ ಕುವೆಂಪು ನಿರಂಕುಶಮತಿತ್ವವನ್ನು ತಮ್ಮ ಬದುಕಿನ ಉಸಿರಾಗಿಯೂ ಸಾಹಿತ್ಯದ ಸಂಜೀವಿನಿಯಾಗಿಯೂ ಮಾಡಿಕೊಂಡವರು. ಅವರ ದೃಷ್ಟಿಯಲ್ಲಿ ದೇವಸ್ಥಾನ ಎಂಬುದೊಂದು ಸ್ವಾತಂತ್ರ್ಯದ ಸಮಾಧಿ, ಭಕ್ತಿ ಎಂಬದು ವಂಚನೆಯ ಜಾಲ, ಪೂಜೆ ಎಂಬುದು ಮಂಗನ ಚೇಷ್ಟೆ, ಶಾಸ್ತ್ರದ ಆಚಾರವು ಮಾನವನ ಆತ್ಮದ ಕೊರಳಿಗೆ ಬೀಳುವ ನೇಣು. ಇವುಗಳೆಲ್ಲದರ ಲಾಭ ಪೂಜಾರಿಗೆ ಮಾತ್ರ, ಭಾರತೀಯರ ಜೀವನವನ್ನು ವಿರೂಪಗೊಳಿಸುತ್ತ, ಅದರ ಸತ್ವವನ್ನು ಒಣಗಿಸುತ್ತಿರುವ ಮೌಢ್ಯಮೂಲ ದುಷ್ಟಶಕ್ತಿಗಳೇ ಈ ಪುರಾಣ ಮತ್ತು ಶಾಸ್ತ್ರಗಳು.

ಅಲ್ಲಮಪ್ರಭು ೧೨ ನೇ ಶತಮಾನದಷ್ಟು ಹಿಂದೆಯೇ ಪುರಾಣವನ್ನು ಪುಂಡರಗೋಷ್ಠಿ ಎಂದೂ ವೇದವನ್ನು ಓದಿನ ಮಾತೆಂದೂ ಶಾಸ್ತ್ರವನ್ನು ಸಂತೆಯ ಸುದ್ದಿಯೆಂದೂ ತರ್ಕವನ್ನು ಟಗರಿನ ಹೋರಾಟವೆಂದೂ ಗುರುತಿಸಿದ್ದಾನೆ. ಅದಾಗಿ ೯೦೦ ವರ್ಷ ಕಳೆದಿದ್ದರೂ ನಮಗೆ ಕಿಂಚಿತ್ತೂ ಬುದ್ಧಿ ಬಂದಿಲ್ಲ, ವಿವೇಕ ಮೊಳೆತಿಲ್ಲ. ಈ ಶಾಸ್ತ್ರ ಪುರಾಣಗಳು ಸಾಮಾನ್ಯ ಜನತೆಯ ಬದುಕನ್ನು, ರಕ್ತವನ್ನು ಹೀರುತ್ತಿರುವ ಜಿಗಣೆಗಳು. ಸ್ವಪ್ರತಿಷ್ಠೆಗಾಗಿ ಸ್ವಾರ್ಥಕ್ಕಾಗಿ ಆಚಾರ್ಯರು ಪುರೋಹಿತರು ಸೃಷ್ಟಿಸಿದ ಅರ್ಥಹೀನವೂ ಅನರ್ಥಕಾರಿಯೂ ಆದ ಶಾಸ್ತ್ರಗಳು ದೇಶದ ಪ್ರಗತಿಗೆ ಕಂಟಕವಾಗಿವೆ, ವೈಚಾರಿಕ ವಿಕಾಸಕ್ಕೂ ವೈಜ್ಞಾನಿಕ ಮನೋಧರ್ಮದ ಬೆಳವಣಿಗೆಗೂ ಅಡ್ಡಿಯಾಗಿವೆ. ಇವುಗಳನ್ನು ಬೇರುಸಹಿತ ಕಿತ್ತೊಗೆಯದೆ ಸಮಾಜಕ್ಕೆ ಕ್ಷೇಮವಿಲ್ಲವೆಂದು ಕುವೆಂಪು ಗರ್ಜಿಸಿದ್ದಾರೆ.

ಹಳೆ ಎಲೆ ಉದುರಿ ಹೊಸ ಚಿಗುರು ಅರಳುವುದು ಜೀವಂತವೃಕ್ಷದ ಆರೋಗ್ಯದ ಲಕ್ಷಣವಾಗಿರುವಂತೆ ರಾಷ್ಟ್ರದ ಸಂಸ್ಕೃತಿಯ ಆರೋಗ್ಯದ ದೃಷ್ಟಿಯಿಂದ ಹಳೆಯ ಮೌಢ್ಯದ ಕೊಳೆಯಲ್ಲ ಕೊಚ್ಚಿಹೋಗಿ ವಿಜ್ಞಾನಬುದ್ಧಿ ಅವತರಿಸಬೇಕಾದುದು ಅತ್ಯವಶ್ಯ. ಮೌಢ್ಯತೆಗೂ ಬಡತನಕ್ಕೂ ನೇರ ಸಂಬಂಧವಿರುವುದರಿಂದ ಮೌಢ್ಯತೆಯನ್ನು ಹೊರದೂಡುವುದರ ಜೊತೆಗೇ ಅನೈಕ್ಯದ, ಪ್ರತ್ಯೇಕತೆಯ, ವೈಷಮ್ಯದ ಸಂಕೇತಗಳಾಗಿರುವ, ಜೀರ್ಣವ್ಯವಸ್ಥೆಯ ಪ್ರತೀಕಗಳಂತಿರುವ, ಅವೈಜ್ಞಾನಿಕತೆಯ ಕತ್ತಲಕೋಣೆಯಾಗಿರುವ, ವಿಜ್ಞಾನದ ಬೆಳವಣಿಗೆಗೆ ಅಡ್ಡಗಾಲಾಗಿರುವ, ಮತಿಸ್ವಾತಂತ್ರ್ಯಕ್ಕೆ ಅಡಚಣೆಯಾಗಿರುವ ಗುಡಿ ಚರ್ಚು ಮಸೀದಿಗಳನ್ನು ತಿರಸ್ಕರಿಸಿ ಮನುಜಮತವನ್ನು ಅನುಸರಿಸಿದಾಗ ಮಾತ್ರ ಲೋಕಕಲ್ಯಾಣಸಾಧಕವಾದ ನವೋನವ ಸಂಸ್ಕೃತಿ ವಿಕಾಸಗೊಳ್ಳುತ್ತದೆಂದೂ ವಿಶ್ವದೆಲ್ಲೆಡೆ ಶಾಂತಿ ನೆಲಸುತ್ತದೆಂದೂ ಕುವೆಂಪು ಪ್ರವಾದಿಯಂತೆ ನುಡಿದಿದ್ದಾರೆ. ಸಂಸ್ಕೃತಿಯ ಹೆಸರಿನಲ್ಲಿ, ಮತದ ಹೆಸರಿನಲ್ಲಿ, ಧರ್ಮದ ಸೋಗಿನಲ್ಲಿ, ಪೂರ್ವಿಕರ ಪ್ರಾಚೀನ ವೈಭವಗಳ ಕರ್ಮಕಾಂಡವನ್ನು ಮತ್ತೆ ಜೀರ್ಣೋದ್ಧಾರ ಮಾಡಿ ಪ್ರತಿಷ್ಠಾಪಿಸುವ ಸ್ವಾರ್ಥತಾಮೂಲವಾದ ಕುರುಡುನೆಪದಲ್ಲಿ, ಅವಿವೇಕತೆಯ ಮೌಢ್ಯಗಳಿಗೆ ವಿಚಾರದ ಚಿನ್ನದ ನಕಲಿ ಮುಲಾಮು ಹಚ್ಚಿ ಜನರನ್ನು ದಿಕ್ಕುತಪ್ಪಿಸುವ ವಂಚನೆಯ ಮಹೋದ್ಯೋಗ ನಿರ್ಲಜ್ಜೆಯಿಂದ ನಡೆಯುತ್ತಿರುವುದನ್ನು, ಅಧ್ಯಾಪಕ ಅಧಿಕಾರಿ, ಮಂತ್ರಿ ಮಠಾಧಿಪತಿ, ವ್ಯಾಪಾರಿ ಶ್ರಮಜೀವಿ, ಕೂಲಿ ಕಳ್ಳ ಎಲ್ಲರಲ್ಲಿಯೂ ಎಲ್ಲೆಲ್ಲಿಯೂ ಅವೈಜ್ಞಾನಿಕತೆ ಅವಿಚಾರತೆಗಳು ವ್ಯಾಪಿಸಿ ವರ್ಧಿಸುತ್ತಿರುವುದನ್ನು ಕಂಡು ಕುವೆಂಪು ಸಂಕಟಪಟ್ಟಿದ್ದಾರೆ. ತರುಣರಲ್ಲಿ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿಗಳನ್ನು ಪ್ರಚೋದಿಸುವುದಕ್ಕಾಗಿ ಮತೀಯ ಮತ್ತು ಸಾಮಾಜಿಕ

ಅಂಧಶ್ರದ್ಧೆ – ಅಂಧಾಚಾರಗಳಿಂದ ಅವರನ್ನು ಪಾರುಮಾಡುವುದಕ್ಕಾಗಿ ಕುವೆಂಪು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಚಳುವಳಿಯನ್ನೇ ಹೂಡಿದ್ದಾರೆ; ಮತಾಂಧತೆ, ಮತಭ್ರಾಂತಿ, ಮತದ್ವೇಷ, ಮತಸ್ವಾರ್ಥತೆ, ಜಾತೀಯತೆ, ಪುರೋಹಿತ ಸಂಸ್ಕೃತಿಗಳು ಪೈಶಾಚಿಕ ನೃತ್ಯದಲ್ಲಿ ತೊಡಗಿರುವುದನ್ನು ಕಂಡು ಕೋಪೋದ್ರಿಕ್ತರಾಗಿ ತಮ್ಮ ಭಾಷಣ, ಬರಹಗಳಲ್ಲಿ ಸಾತ್ವಿಕ ಕ್ರೋಧವನ್ನು ವ್ಯಕ್ತಪಡಿಸಿದ್ದಾರೆ.

ಮೂಢ ಸಂಪ್ರದಾಯಗಳ ವಿರುದ್ಧ ಮನೆಯಿಂದಲೇ ಪ್ರಾರಂಭವಾಗುವ ಕುವೆಂಪು ಅವರ ಪ್ರತಿಭಟನೆ ತಾಯಿಯ ತಿಥಿಯ ಸಂದರ್ಭದಲ್ಲಿ ಜರುಗುತ್ತಿದ್ದ ಅರ್ಥಹೀನ ಹೇಯ ಕಂದಾಚಾರಗಳಿಗೆ ಮಣಿಯದೆ ಬುಸುಗುಟ್ಟುವುದರಲ್ಲಿ ಪ್ರಕಟವಾಗುತ್ತದೆ. ಎಡೆಯಲ್ಲಿಟ್ಟಿದ್ದ ಹೆಂಡ ಮಾಂಸಗಳನ್ನೆಲ್ಲಾ ತೆಗೆದು ಮಣೆಯ ಮೇಲೆ ಭಗವದ್ಗೀತೆಯ ಪುಸ್ತಕ ಮತ್ತು ವಿವೇಕಾನಂದರ ಫೋಟೋ ಇಟ್ಟರೆ ಮಾತ್ರ ತಾಯಿಗೆ ಶಾಂತಿ ಕೋರಿ ಧೂಪ ಹಾಕುವುದಾಗಿ ಹಿರಿಯರಿಗೆ ತಿಳಿಸುತ್ತಾರೆ. ತಾಯಿ ಪ್ರೇತವಾಗಿ ತಿಥಿಯ ದಿನ ಬರುತ್ತಾರೆಂಬ ನಂಬಿಕೆಯುನ್ನು ತಿರಸ್ಕರಿಸುತ್ತಾರೆ. ಒಕ್ಕಲಿಗ ಸಮಾಜದಲ್ಲಿ ಬೇರುಬಿಟ್ಟುಕೊಂಡಿದ್ದ ಮೂಢಸಂಪ್ರದಾಯಗಳನ್ನು, ಗೌಡರ ಅಜ್ಞಾನವನ್ನು, ಆ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು ಶೂದ್ರರನ್ನು ಸುಲಿಗೆ ಮಾಡುತ್ತಿದ್ದ ಜೋಯಿಸರ ವಂಚನೆ, ಕುಯುಕ್ತಿಗಳನ್ನು ಬಯಲುಮಾಡುತ್ತಾರೆ. ದೆಯ್ಯದ ಹರಕೆ, ಸತ್ಯನಾರಾಯಣ ಪೂಜೆ, ತಿರುಪತಿ ಧರ್ಮಸ್ಥಳಗಳ ಯಾತ್ರೆ, ವಿಭೂತಿ, ಚೀಟಿ, ವ್ರತ, ಮಂತ್ರ, ತಂತ್ರ ಮೊದಲಾದ ಕಂದಾಚಾರಗಳನ್ನು ಲೇವಡಿ ಮಾಡುತ್ತಾರೆ. ಇಂತಹ ಅನ್ಯಾಯ ವಂಚನೆಗಳ ನಿರ್ಮೂಲನೆ ಹಾಗೂ ಸಮಸ್ಯೆಗಳ ಪರಿಹಾರ ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯನ ಕರ್ತವ್ಯವಾಗಬೇಕೆಂದೂ ಎಚ್ಚೆತ್ತ ಸಾಹಿತಿಯ ಪ್ರಯತ್ನವಾಗಬೇಕೆಂದೂ ನೊಂದವರ ಕಣ್ಣೀರೊರಸದ, ಬೆಂದ ಹೃದಯಗಳಿಗೆ ಸಾಂತ್ವನದ ತಂಪೆರೆಯದ, ಅನ್ಯಾಯ ಅಸಮಾನತೆ ಸುಲಿಗೆಗಳನ್ನು ಖಂಡಿಸದ ಸಾಹಿತಿ ಧರೆಗೆ ಭಾರವಾಗುತ್ತಾನೆಂದೂ ಕುವೆಂಪು ದೃಢವಾಗಿ ನಂಬಿದ್ದರು ಮತ್ತು ಸಂದರ್ಭ ಬಂದಾಗಲೆಲ್ಲ ಸ್ಪಷ್ಟಮಾತುಗಳಲ್ಲಿ ಹೇಳುತ್ತಿದ್ದರು.

ಕುವೆಂಪು ಸಾಮಾನ್ಯವಾಗಿ ಅಂತರ್ಮುಖಿಯಾದರೂ ಜಗತ್ತಿನ ವಿದ್ಯಮಾನಗಳನ್ನು ಸಾಕ್ಷೀಭೂತರಾಗಿ ವೀಕ್ಷಿಸುತ್ತಿದ್ದರು, ಸಮೀಕ್ಷಿಸುತ್ತಿದ್ದರು. ನಾಡಿನ ಪರಿಸ್ಥಿತಿ ಹದಗೆಟ್ಟಾಗ, ಕೈಮೀರಿದಾಗ, ಭ್ರಷ್ಟಾಚಾರ ಅತ್ಯಾಚಾರಗಳು ಹತೋಟಿ ಮೀರಿದಾಗ ಅವರು ಮೌನವನ್ನು ಸೀಳಿ ಹೊರಬಂದು ಬಿರುಗಾಳಿಯಾಗಿ ಸಿಡಿಲಾಗಿ ಅಪ್ಪಳಿಸುತ್ತಿದ್ದರು. ಹದಗೆಟ್ಟ

ವ್ಯವಸ್ಥೆಯನ್ನಾಗಲೀ, ಭ್ರಷ್ಟ ರಾಜಕಾರಣಿಗಳನ್ನಾಗಲೀ ಅವರಂತೆ ಕಟುಮಾತಿನಿಂದ ಖಂಡಿಸುವ ಸಾಹಿತಿಯಾಗಲೀ, ದೇಶಪ್ರೇಮಿಯಾಗಲೀ, ಸುಧಾರಕರಾಗಲೀ ಕಾಣಸಿಗರು. ಬೆಂಗಳೂರು ವಿಶ್ವವಿದ್ಯಾಲಯ ಘಟಿಕೋತ್ಸವ ಭಾಷಣದಲ್ಲಿ ಅವರು "ಸತ್ಯಂ ವದ ಧರ್ಮಂ ಚರ ಮೊದಲಾದ ನೀತಿ ಸೂಕ್ತಿಗಳನ್ನು ಸಾಮೂಹಿಕವಾಗಿ ಯಾಂತ್ರಿಕವಾಗಿ ಉಚ್ಚರಿಸಿ ಪ್ರತಿಜ್ಞೆಮಾಡಿದ ನಿಮ್ಮಂಥ ಲಕ್ಷಾಂತರ ಪದವೀಧರರೇ ಇಂದು ರಾಜಕೀಯರಂಗದಲ್ಲಿ, ಆರ್ಥಿಕರಂಗದಲ್ಲಿ, ಆಡಳಿತರಂಗದಲ್ಲಿ, ಶಿಕ್ಷಣರಂಗದಲ್ಲಿ ನಿರ್ಲಜ್ಜೆಯಿಂದ ಪಾಪಮಯ ಭ್ರಷ್ಟಾಚಾರಗಳಲ್ಲಿ ತೊಡಗಿ ದೇಶವನ್ನು ದುರ್ಗತಿಗೆ ಒಯ್ಯುತ್ತಿರುವುದನ್ನು ನೆನೆದರೆ ಬದುಕು ಬೆಬ್ಬಳಿಸಿ ಹದುಗುವಂತಾಗುತ್ತದೆ" ಎಂದು ವಿಷಾದದಿಂದ ಗರ್ಜಿಸಿದ್ದುಂಟು.

ಅನಕ್ಷರಸ್ಥರೇ ಅಧಿಕ ಸಂಖ್ಯೆಯಲ್ಲಿರುವ ಈ ದೇಶದಲ್ಲಿ, ರಾಜರನ್ನು ಪ್ರತ್ಯಕ್ಷ ದೇವರೆಂದು ಪುರೋಹಿತರನ್ನು ಭೂಸುರರೆಂದು ಆರಾಧಿಸಿದ ಈ ದೇಶದ ನಾಡಿನಾಡಿಗಳಲ್ಲಿ ಮತಮೌಢ್ಯ ಎಂಬ ನಿತ್ಯರೋಗ ಐದು ಸಾವಿರ ವರ್ಷಗಳಿಂದ ಸರ್ವವ್ಯಾಪಿಯಾಗಿದ್ದು ವರ್ಗ, ವರ್ಣ, ಮತ, ಜಾತಿ, ಪಂಥ, ಪಂಗಡ ಎಂಬ ನೂರಾರು ಭೇದಗಳಿಂದ ನರಳುತ್ತಿದೆ. ಇಲ್ಲಿ ನಡೆದಿರುವುದು ಪ್ರಜಾತಂತ್ರದ ನಾಟಕ ಮಾತ್ರ. ಜಾತಿ, ಮತ, ಹೆಂಡ, ದುಡ್ಡು ಇವೇ ಓಟರುಗಳು. ಓಟು ಕೊಡುವ ಪ್ರಜೆ ಬರಿಯ ನಿಮಿತ್ತ ಮಾತ್ರ. ನಾಲ್ಕಾರು ಜನ ಯಾತಕ್ಕೂ ಹೇಸದ ಖದೀಮರು ಸೇರಿ ಯಾವ ಉಪಾಯದಿಂದಾದರೂ ಕಾಳಸಂತೆಯ ಕಪ್ಪುಹಣವೋ ಕಳ್ಳಸಾಗಾಣಿಕೆಯ ಹಳದಿ ಹಣವೋ ಅಂತೂ ಹೆಚ್ಚು ಹಣ ಒಟ್ಟುಮಾಡಿದರಾಯ್ತು, ನಮ್ಮ ಚುನಾವಣೆಗಳಲ್ಲಿ ಗೆಲ್ಲಬಹುದು ಎನ್ನುವ ಕುವೆಂಪು ಅವರ ಮಾತು ಖದೀಮ ಮಾರ್ಗಗಳಲ್ಲಿ ಬ್ರಹ್ಮಾಂಡಭ್ರಷ್ಟಾಚಾರ ನಡೆಸಿ ಸೆರೆಮನೆಗಳಲ್ಲಿ ನೆರಳು ಕಂಡುಕೊಳ್ಳುತ್ತಿರುವ ಕೇಂದ್ರದ, ವಿವಿಧ ರಾಜ್ಯಗಳ ಮಂತ್ರಿ - ಅಧಿಕಾರಿಗಳನ್ನು ನೋಡಿದರೆ ಇವತ್ತಿಗೂ ಎಷ್ಟೊಂದು ಪ್ರಸ್ತುತ ಎನ್ನಿಸದಿರದು.

ಸುಮಾರು ತೊಂಬತ್ತು ವರ್ಷಗಳಷ್ಟು ಸುದೀರ್ಘ ಕಾಲ ಬದುಕಿ, ಅರ್ಧಶತಮಾನಕ್ಕೂ ಹೆಚ್ಚು ಕಾಲ ಸಾಹಿತ್ಯ ರಚನೆಯಲ್ಲಿ ತೊಡಗಿ, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ದುಡಿದ ಕುವೆಂಪು ಬರಹವೆಂಬ ಸಾಂಸ್ಕೃತಿಕ ಪ್ರತಿರೋಧದ ಅಸ್ತ್ರದ ಮೂಲಕ ಶೂದ್ರರ, ದಲಿತರ ಅನುಭವಗಳಿಗೆ ಒಂದು ಆಕಾರ ಕಲ್ಪಿಸಿಕೊಡಲು ಪ್ರಯತ್ನಿಸಿದವರು. ಸೃಜನ ಹಾಗೂ ಸೃಜನೇತರ ಬರಹಗಳೆರಡರಲ್ಲೂ ಎಲ್ಲವನ್ನೂ ಒಳಗೊಳ್ಳುವ ದೃಷ್ಟಿಕೋನ ಮತ್ತು ಎಲ್ಲವನ್ನೂ ಪ್ರಶ್ನಿಸುವ ಬಂಡುಕೋರ ಗುಣಗಳಿಂದಾಗಿ ತಮಗೆ

ಸಮಕಾಲೀನರಾಗಿದ್ದ ನವೋದಯ ಹಾಗೂ ಪ್ರಗತಿಶೀಲ ಸಾಹಿತಿಗಳ ಮೇಲೆ ಮಾತ್ರವಲ್ಲದೆ ನಂತರ ಬಂದ ನವ್ಯ ಹಾಗೂ ಬಂಡಾಯ, ದಲಿತ ಸಾಹಿತ್ಯದ ಮೇಲೂ ಪ್ರಭಾವ ಬೀರಿದವರು. ೨೦.೦೪.೧೯೭೪ ರಲ್ಲಿ 'ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ವನ್ನು ಉದ್ಘಾಟಿಸಿ ಕುವೆಂಪು ಮಾಡಿದ ಭಾಷಣ 'ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ' ಕರ್ನಾಟಕ ಸಂಸ್ಕೃತಿಯ ಸಂದರ್ಭದಲ್ಲಿ ಅತ್ಯಂತ ಮಹತ್ವದ ಒಂದು ಘಟನೆ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ತಿರುವನ್ನು ತಂದ ಉಪನ್ಯಾಸ. ೦೭.೦೨.೧೯೭೩ ರಲ್ಲಿ ದಲಿತ ನಾಯಕ ಬಿ. ಬಸವಲಿಂಗಪ್ಪನವರು ಮೈಸೂರಿನಲ್ಲಿ ಮಾಡಿದ ಭಾಷಣದಲ್ಲಿ ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಹೇಳಿದ್ದರಿಂದ ಉಂಟಾಗಿದ್ದ ಗಂಭೀರ ಪರಿಸ್ಥಿತಿಗೂ ಕುವೆಂಪು ಕಹಳೆನಾಂದಿಯಲ್ಲೇ ಉತ್ತರ ಕೊಟ್ಟರು. "ಬೂಸಾ ಸಾಹಿತ್ಯ ಎಂದು ಯಾವುದನ್ನು ಕರೆಯುತ್ತೇವೆಯೋ ಅದು ಪ್ರಪಂಚದ ಎಲ್ಲಾ ಸಾಹಿತ್ಯದಲ್ಲಿಯೂ ಇರುತ್ತದೆ. ಸುಮಾರು ಮುಕ್ಕಾಲಿನ ಪಾಲಿನ ಮೇಲೆ ಇರುವುದು ಬೂಸಾ ಸಾಹಿತ್ಯವೇ. ಯಾವುದನ್ನು ನೀವು ಪ್ರಥಮ ದರ್ಜೆಯದು, ಮಹತ್ವದ್ದು ಎಂದು ಹೇಳುತ್ತೀರೋ ಅದೆಲ್ಲಾ ಒಂದು ಕಾಲುವಾಸಿ ಇದ್ದರೆ ನಮ್ಮ ಪುಣ್ಯ" ಎಂದು ಕುವೆಂಪು ವಿವರಣೆ ಕೊಟ್ಟ ಮೇಲೆ ಯಾವುದು ದೋಷವೆಂದು ಪರಿಗಣಿತವಾಗಿತ್ತೋ ಅದು ಸಾಮಾನ್ಯ ಗುಣವೆಂಬ ತಿಳುವಳಿಕೆ ತಂದಿತು ಮತ್ತು ಪ್ರಕ್ಷುಬ್ಧ ವಾತಾವರಣವನ್ನು ತಿಳಿಗೊಳಿಸಿತು.

ಯಾವುದೇ ನಿಟ್ಟಿನಿಂದ ಪರೀಶೀಲಿಸಿದರೂ ಅರ್ಥಮಾಡಿಕೊಂಡರೂ ಹೊಸಗನ್ನಡ ಸಾಹಿತ್ಯ ಸಂದರ್ಭದ ಯುಗನಿರ್ಮಾಪಕ ಶಕ್ತಿಯೂ ಅಸದೃಶ ಸಾಂಸ್ಕೃತಿಕ ನಾಯಕ ಬರಹಗಾರರೂ ಆಗಿರುವ ಕುವೆಂಪು ಅವರನ್ನು ನಮ್ಮೊಳಗೆ ಅಳವಡಿಸಿಕೊಳ್ಳಬೇಕಾದ ಜರೂರು ಹಿಂದೆಂದಿಗಿಂತ ಈಗ ಹೆಚ್ಚಾಗಿದೆ ಎನ್ನುವುದು ನಿಚ್ಚಳವಾಗಿ ವೇದ್ಯವಾಗುತ್ತದೆ. ಕುವೆಂಪು 'ನೂರೆಂಟು ನೆನಪು' ಮಾಲಿಕೆಯ ಲೇಖಕರು ಮತ್ತು ಈ ಪುಸ್ತಕಗಳ ಓದುಗರು ಈ ಆಶಯವನ್ನು ಅರ್ಥಮಾಡಿಕೊಂಡು ಪ್ರಯತ್ನಶೀಲರಾಗಲಿ ಎನ್ನುವುದು ನನ್ನ ವಿನಮ್ರ ನಿವೇದನೆ.

ಹದಿಮೂರು ವರ್ಷಗಳ ಹಿಂದೆ ಉತ್ಸಾಹ, ಆಸೆ, ಭರವಸೆಗಳೊಂದಿಗೆ ಕನ್ನಡ ಕಥಾಲೋಕವನ್ನು ಪ್ರವೇಶಿಸಿದ ಶಿರಗಾನಹಳ್ಳಿ ಶಾಂತನಾಯ್ಕ 'ಗುಡ್ಡಜ್ಜ', 'ಕೊಂಯ್ಯ ಮತ್ತು ಧೋತ್ರ' ದ ನಂತರ ಇದೀಗ 'ಕಲ್ಲೇ ಕಲ್ಲೇ ಕಥೆ ಹೇಳು' ಎನ್ನುವ ಮೂರನೇ ಸಂಕಲನವನ್ನು ಪ್ರಕಟಿಸುತ್ತಿದ್ದಾರೆ.

ಕಥೆ ಎನ್ನುವುದು ಸ್ಮೃತಿಪಟಲದಲ್ಲಿ ಹೆಪ್ಪುಗಟ್ಟಿದ ಹಿಮದಂತೆ ಘನೀಭೂತವಾಗಿ ಕುಳಿತಿರುತ್ತದೆ, ಭಾವದ ಕಾವು ತಾಕಿದೊಡನೆ ಅದು ಅಕ್ಷರರೂಪಿ ಹನಿಯಾಗಿ ತೊಟ್ಟಿಕ್ಕುತ್ತದೆ. ಅದು ಅನೇಕ ಸಾರಿ ಕಥೆಗಾರನೊಬ್ಬನ ಒಳಕುದಿತವಾಗಿರುತ್ತದೆ. ಬಹುಕಾಲ ಆ ಕುದಿಯನ್ನು ಒಳಗಿಟ್ಟುಕೊಳ್ಳಲಾಗದ ಕಥೆಗಾರ ಅದನ್ನು ಹೊರಹಾಕಲು ಪ್ರಯತ್ನಿಸಿದಾಗ ಅದು ಕಥೆಯಾಗುತ್ತದೆ. ಜೀವನಸಾರವನ್ನು ಕಸಿಮಾಡಿ ಅನುಭವದ ಪಡಿಪಾಟಲನ್ನು ಹೊರಹಾಕುವಲ್ಲಿ ಯಶಸ್ವಿಯಾದರೆ ಅಲ್ಲೊಂದು ಕಥೆ ಅವತರಿಸುತ್ತದೆ. ಸಣ್ಣ ಕಥೆಯ ಹುಟ್ಟುವಿಕೆಗೆ ಸಂಬಂಧಿಸಿದಂತೆ ಒಬ್ಬೊಬ್ಬ ಕಥೆಗಾರರದೂ ಅಲ್ಪಸ್ವಲ್ಪ ವ್ಯತ್ಯಾಸದಿಂದ ಕೂಡಿದ ಅಭಿಪ್ರಾಯಗಳಿವೆ. ಅದೇನಾದರೂ ಇರಲಿ, ಶಾಂತನಾಯ್ಕರಿಗೆ ಅವರ ಕಥೆಗಳನ್ನು ವಿಮರ್ಶಾವಲಯ ಸರಿಯಾದ ರೀತಿಯಲ್ಲಿ ಪರಿಗಣನೆಗೆ ತೆಗೆದುಕೊಳ್ಳದಿರುವ ವಿಚಾರದಲ್ಲಿ ಕೊಂಚ ಅಸಮಾಧಾನವಿದೆ. ಸಂವೇದನೆಯ ಹಿನ್ನೆಲೆಯಲ್ಲಿ ಕಥೆಗಳನ್ನು ಚರ್ಚೆಗೊಳಪಡಿಸುವಾಗ ಅದು ಯಾರ ಬಳಿಗೋ ಬಂದು ನಿಂತುಹೋಗುತ್ತದೆ. ಅವರನ್ನೇ, ಅವರ ಕಥೆಗಳನ್ನೇ ಮತ್ತೆ ಮತ್ತೆ ಉಲ್ಲೇಖಿಸುವುದು ವಿಮರ್ಶಕರ ಪಕ್ಷಪಾತ ಮನೋಭಾವವನ್ನು ತೋರಿಸುತ್ತದೋ, ಸೀಮಿತ ಜ್ಞಾನವನ್ನು ಸೂಚಿಸುತ್ತದೋ, ಹೊಸಬರನ್ನು ಅಷ್ಟು ಸುಲಭವಾಗಿ ಸ್ವೀಕರಿಸಬಾರದೆನ್ನುವ ಧಾರ್ಷ್ಟ್ಯವನ್ನು ತೋರುತ್ತದೋ– ಅಂತಿಮವಾಗಿ ಅನ್ಯಾಯದ ಖಡ್ಗ ಎರಗುವುದು ಹೊಸ ಕಥೆಗಾರನ ಮೇಲೆಯೇ. ಈ ಸಂಕಲನದಲ್ಲಿರುವ ಹದಿನಾರು ಕಥೆಗಳನ್ನು ಲಂಬಾಣಿ ಸಂವೇದನೆ ಮತ್ತು ಅದಕ್ಕೆ ಪೂರಕವಾದ ಬದುಕಿನ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದಲ್ಲಿ ಕಥೆಗಾರನ ಶ್ರಮಕ್ಕೆ ನ್ಯಾಯ ದೊರೆತಂತಾಗುತ್ತದೆ. 'ಕಲ್ಲೇ ಕಲ್ಲೇ ಕಥೆ ಹೇಳು' ಸಂಕಲನವನ್ನು 'ಕುವೆಂಪು ನೂರೆಂಟು ನೆನಪು' ಮಾಲಿಕೆಯಲ್ಲಿ ಪ್ರಕಟಿಸಲು ಕೊಟ್ಟ ಡಾ. ಶಿರಗಾನಹಳ್ಳಿ ಶಾಂತನಾಯ್ಕ ಅವರಿಗೆ ಕೃತಜ್ಞತೆಗಳು.

ವಿಶ್ವಮಾನವ ಕುವೆಂಪು ಅವರನ್ನು ಅವರ ಜನ್ಮದಿನದ ಸಂದರ್ಭದಲ್ಲಿ ಪ್ರೀತಿ, ಅಭಿಮಾನ, ಗೌರವಗಳಿಂದ ಸ್ಮರಿಸಿಕೊಳ್ಳುವ ಅನುಕರಣೀಯ ಮಾದರಿಯಾಗಿ ಒಂದು ನೂರ ಎಂಟು ಕೃತಿಗಳನ್ನು ಪ್ರಕಟಿಸುವ ಸಾಹಸಕ್ಕೆ ಮುಂದಾಗಿರುವ ಸಿವಿಜಿ ಇಂಡಿಯಾ ಪ್ರಕಾಶನದ ಗೆಳೆಯ ಸಿವಿಜಿ ಚಂದ್ರು ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

**– ಡಾ. ಬೈರಮಂಗಲ ರಾಮೇಗೌಡ**

## ಕಥಾಸಂಕಲನದೊಳಗೆ .....

ಕಥೆ ಎಲ್ಲೊ ಸ್ಮೃತಿಪಟಲದಲ್ಲಿ ಕರಗದ ಹಿಮದಂತೆ ಘನಿ ಭೂತಗೊಂಡಹಿಮದಂತೆ ಒಳಗೊಳಗೆ ತಣ್ಣಗೆ ಕೊರೆಯುತ್ತಿರುತ್ತದೆ. ಸರಿಯಾದ ಸಮಯಕ್ಕೆ ಭಾವದ ಕಾವು ತಾಕಿದೊಡನೆ ಅಕ್ಷರದೋಪಾದಿಯಲ್ಲಿ ಹನಿ ಹನಿಯಾಗಿ ತೊಟ್ಟಿಕುತ್ತದೆ. ಬದುಕಿನ ಒಳಾಂತರಾಳದಲ್ಲಿರಬಹುದಾದ ಕುದಿಯನ್ನು ಕತೆಗಾರ ಹೊರಹಾಕಲು ಹವಣಿಸುತ್ತಾನೆ. ಬದುಕಿನ ಅವಲೋಕನವೇ ಪ್ರಧಾನ ಪಾತ್ರವಾಗಿದ್ದು. ವಿವಿಧ ಆಯಾಮಗಳು ಅವನನ್ನು ಎಡಬಿಡದೆ ಕಾಡುತ್ತವೆ. ಅವನ ಸುತ್ತಲ್ಲ ಜಗತ್ತಿನ್ನ ವಿಸ್ಮಯದಿಂದ ಕಂಡುಂಡು ಕತೆಬರೆಯುತ್ತಾನೆ. ಕತೆಕಲ್ಪನೆಯಲ್ಲಿ ಹುಟ್ಟಿದ್ದೆ ಆದರೆ ಅದು ಬದುಕನ್ನು ಪ್ರತಿಬಿಂಬಿಸುವಲ್ಲಿ ಸೋಲುತ್ತದೆ. ಯಾವುದೋ ಲೋಕದಲ್ಲಿ ನಡೆಯುವ ವ್ಯವಹಾರಕ್ಕೂ ಕತೆಗೂ, ಕತೆಗಾರನಿಗೂ ಸಂಬಂಧವಿರುವುದಿಲ್ಲ. ಜೀವನಸಾರವನ್ನು ಕಸುಕಿತ್ತು ಅನುಭವಿಸಿ ಅನುಭವದ ಪಡಿಪಾಟಲನ್ನೆ ಹೊರಹಾಕುವಲ್ಲಿ ಯಶಸ್ವಿಯಾಗುತ್ತಾನೆ. ಕತೆ ಹುಟ್ಟುವ ಸನ್ನಿವೇಶ, ಸಂದರ್ಭ, ಪಾತ್ರಗಳು, ಒಟ್ಟೊಟ್ಟಿಗೆ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

'ಕಲ್ಲೇ ಕಲ್ಲೇ ಕತೆ ಹೇಳು' ನನ್ನ ಮೂರನೇಯ ಕಥಾ ಸಂಕಲನ. ತೊಂಬತ್ತೆಂಟರ ಆಸುಪಾಸಿನ 'ಗುಡ್ಡಜ್ಜ' 2004–05ರ ಆಸುಪಾಸಿನ 'ಕೊಂಯ್ಯ ಮತ್ತು ಧೊತ್ರ' ಸಮಕಾಲೀನ ಕತೆಗಾರರ ತಲೆ ಮೇಲೆ ಹೊಡೆದಂತವು ಆದರೆ ಕೇಂದ್ರಿಕೃತ ಹಿತಾಸಕ್ತಿಯಲ್ಲಿ, ಸಾಹಿತ್ಯ ರಾಜಕಾರಣ ಜಾತಿವಾರು ಲೆಕ್ಕಚಾರದಲ್ಲಿ ಎಲ್ಲೂ ರೆಜಿಸ್ಟರ್ ಆಗಲೇ ಇಲ್ಲ. ಹಾಗಂತ ನನಗೇನು ನಿರಾಶೆಯಿಲ್ಲ ಮತ್ತು ನಾನೇನು ದೊಡ್ಡ ಕತೆಗಾರ ಅಂತಲೂ ಹೇಳ

ಬಯಸುವುದಿಲ್ಲ. ನನ್ನ ಲಂಭಾಣಿಸಂವೇಧನೆಗಳು, ಅದಕ್ಕೆ ಪೂರಕವಾದ ಅನೇಕ ಬದುಕುಗಳು ಬಹುದಿನಗಳಿಂದ ಕಾಡಿದ, ನಿದ್ದೆ ಕೆಡಿಸಿದ ಕೆಲವು ಸನ್ನವೇಶಗಳು, ಕತೆಗಳಾಗಿ ರೂಪಗೊಂಡು ಸಿವಿಜಿ ಅವರ ಮಡಿಲಲ್ಲಿವೆ. ಅದನ್ನು ಅನುಭವಿಸಿರೆ ನನ್ನ ಆಶಯಇಡೇರಿದಂತೆ ಇಲ್ಲಿ ಬರುವ ಸನ್ನಿವೇಶ ಪಾತ್ರಗಳು ಯಾರು, ಯಾವ ಸ್ಥಳಕ್ಕೆ ಸಂಬಂಧಿಸಿದಲ್ಲಿ ಯಾವ ವ್ಯಕ್ತಿಗೂ ಅನ್ವಯವಾಗುವುದಿಲ್ಲ. ಅವು ಬದುಕಿನ ತದ್ರೂಪವೇ ವಿನಃ ಯಥಾವತ್ತೂ ಕಾಪಿಯಲ್ಲ.

**ಡಾ. ಶಿರಗಾನಹಳ್ಳಿ ಶಾಂತನಾಯ್ಕ**

6–1–2012


ಮೈಸೂರು

# ಪರಿವಿಡಿ

## ೧. ಹನ್ಮಜ್ಜನೂ – ಎಕ್ಕಡವಿಲ್ಲದೂರೋ?

ಕರಿಮ್ಯೆ ಹರಿದ ಬಟ್ಟೆ ಬಿಳಿಕೂದಲು ಹರೆಯವನ್ನು ಅದುಮಿ ಮುಪ್ಪಿನ ಮೆರಗು ನೀಡಿತ್ತು ಹನ್ಮಜ್ಜನಿಗೆ. ದೊಡ್ಡೋರಿಗೆ ಹನ್ಮ, ಹನ್ಮಂತನಾದ್ರೆ, ಚಿಕ್ಕೋರಿಗೆಲ್ಲಾ ಹನ್ಮಜ್ಜ. ಹತ್ತಮ್ಯೆಲಿ ದೂರದಿಂದ ಹರಿದ ಗೋಣಿ ಚೀಲದಲಿ ರಂಕ್ಕಿ, ಗಲ್ಲೆಬಾನಿ, ಉಳಿ, ಹತೋಡ ಹಾಕ್ಕೊಂಡು ವರ್ಷಕ್ಕೊಂದೆರಡೊ, ಮೂರದಪ ನಮ್ಮೂರಿಗೆ ಟೆಂಟಹಾಕ್ತಿದ್ದ. ಆದ್ರ ಒಂದ ವಿಪರ್ಯಾಸ ಅಂತಂದ್ರ 'ತಿರ್‍ಕೊಂಡ ಬಂದೊರ ಮನಿಯಾಗ ಬೇಡಾಕಹ್ಪಾದ್ರಂತ' ಅನ್ನೊ, ಗಾದೆ ಮಾತ್ನಂಗೆ. ಸಂಡಣಿಗಿ ತಾಂಡದಲ್ಲಿರೊ ಕೂಲಿ ಮಾಡೋ ಮಂದಿ ಚಪ್ಪಲಿ ಹೊಲಿಯಾಕ ಆಟೊಂದು ದೂರದಿಂದ ಅದೇನೇನೋ ಕನಸಗಳನ್ನು ಹೊತ್ಕಂಡ ಬರ್ತಿದ್ನೊ, ನಾಕಾಣೆ. ಸಂಡಣಿಗಿ ತಾಂಡದಿಂದ ಹತ್ತಮ್ಯೆಲಿ ದೂರದ ಬುಕ್ಕಾಟ್ನಳ್ಳಿಯ ಮಾದರಕೇರಿಯಿಂದ ಬರ್ತಿದ್ದ. ಬುಕ್ಕಾಟ್ನಳ್ಳಿ ಜಮೀನೆಲ್ಲಾ ಚಾನಲ ನೀರ ಹಾದು, ಬತ್ತ, ಶೇಂಗಾ, ತೆಂಗು, ಕಬ್ಬಿನ ಗದ್ದೆಗಳಿಂದ ಕಂಗೊಳಿಸ್ತಿದ್ರುವೆ, ಹನ್ಮಜ್ಜನ ಸಂತಾನಕ ಮಾತ್ರ ದಟ್ಟದಾರಿದ್ರ ಕಾಡ್ತಿತ್ತು.

ಸಂಡಣಿಗಿ ತಾಂಡದ ಮಂದಿ ತಾವೆ– ಸುತ್ತಲ ಹಳ್ಳಿಯ ಕೂಲಿ ಮಾಡಕೆ ಕಲ್ಲುಮುಳ್ಳು ತುಳ್ಕಂತ ಬರಗಾಲಿಂದ ನಡದ ಕೆಲ್ಸ ಮಾಡಿ ಅವ್ವ ಅಪ್ಪ ಅಂದು ಕಲಬೆರಕಿ ಕಾಳ ತಂದು ಜೀವನ ಸಾಗಸ್ತಿರೋ ಹೊತ್ನಾಗ ಯಾರ ಎಕ್ಕಡ ಹೊಲಿಯಾಕ ಬರ್ತಿದ್ದ? ಹನ್ಮಜ್ಜ ಅನ್ನೋದೆ ಒಂದ ಸವಾಲಾಗಿತ್ತು. ಸಂಡಣಿಗಿ ತಾಂಡದಾಗ ಮಂದಿ ಕಾಲ್ಮಾರಿ ಮಕ ನೋಡಿರಾಕಿಲ್ಲ ಹತ್ತ ಹರದಾರಿ ನಡದ್ರುನುವೆ ಬಳ್ಳಾರಿ ಜಾಲಿನೋ, ಇಕ್ಕಜಾಲಿ



ಚೆಂದಪ್ಪನ ಮುಳ್ಳು, ಮೂರ್ಕುಂಡಿಯ ಮಿಂಡ್ರಿಗುಟ್ಟೋನ ಮುಳ್ಳ ತುಳಿದು ತಗಿಯಾಕು ಟೇಮಿಲ್ಲದೆ ಅಣಿ ಬೆಳದು ಪಾದ ಪೂರ್ತಿ ಇಡದೆ ಕುಂಟ್ಕಂಡ ಅಡ್ಡಾಡೋ ಜೀವ್ಲಾನಾಯ್ಕ, ಅವನ ತಮ್ಮ ಡೇಬರ, ಹಿಂದ್ಲೋಣಿ ಕಿಮ್ನನಾಯ್ಕ ತಮ್ಮ ಬಡತನಕ್ಕ ಹಿಡಿಶಾಪ ಹಾಕ್ತಿದ್ರು.

ಊರಿಂದ ನಾಕ ದಿಕ್ಕಗಳ ಯಾವ ಹಾದಿಗ ಹ್ವಾದ್ರುವೆ ಕಾಲ್ದಾರಿ, ಹೊಲಗಳಿಂದ ನುಗ್ಗಿದ ನೀರು ಮಣ್ಣಕೊರದು ಕೊರ್ಕಲ ಮಾಡಿ ಅಡ್ಯಾಡಕ ಆಗದಂಗ ಮಾಡಿದ್ರಾಗೆ ಅಡ್ಡಾಡಬೇಕು ಸಾಲ್ದಕ್ಕೆ ಚೋಟುದ್ದದ ಮೂರಮೂಲಿ ಮುಳ್ಳ ಕಾಲಕಿತ್ತಿಡ್ತಿದ್ದಂಗೆ ಹಿಮ್ಮಡಿಗ ಚುಚ್ಚಿ ತೊಟ್ಟ ರಕ್ತ ತರ್ತಿತ್ತು. ಜೋಳದ ಸುಕದಂತ ಚೆಂದಪ್ಪನ ಮುಳ್ಳ, ಬಾರಿಮುಳು, ಕಾರಿಮುಳು, ಹಿಕಜಾಲಿ, ಹೆಜ್ಜಾಲಿ ಮುಳ್ಳಗಳ ಜಾಡಿನಲ್ಲಿ ಎಷ್ಟೆ ಎಚ್ಚರಿಕೆಯಿಂದ ಕಾಲಿಟ್ರುನುವೆ ಚುಚ್ಚದೆ ಇರ್ತಿರಲಿಲ್ಲಾ. ಸಂಡಣಗಿ ತಾಂಡದ ಕೆಲಮಂದಿ ಕಾಲಗಳಂತು ಹಳೆಗ್ವಾಡಿಗ ಮಳಿ ಹೊಡ್ದಂಗ ಆಗಿದ್ವು. ಬದಕೆ ದೊಡ್ಡ ಸವಾಲಾಗಿರೊ ಹೊತ್ನಾಗ ಎಡೆಳ್ಳಿ ಗೌಡ್ರಂಗೆ ಚರssಮರss ಸದ್ದಮಾಡೋ ದನದಚರ್ಮದ ಎಕ್ಕಡ ಹಾಕ್ಕೋಳಾಕ ಆದೀತ. ಎಡೆಳ್ಳಿ ಸಂಬೆಗೌಡ್ರು ತಾಂಡಕ ಬಂದ್ರ, ಊರಾನ ಪಿಳ್ಳಿಪಿಚ್ಕ ಎಲ್ಲಾ ನೆರಕಿ ಹಿಂದಿಂದ್ಲೆ ಬಚ್ಚಿಟ್ಕಂಡು ಅವರ ದೌಲತ್ತನ್ನ ನೋಡ್ತಾ ಇದ್ರು. ಒಳ್ಳೆ ಮರಿ ಆನಿ ಹಂಗೆ ಧಮ ಧಮ ನಡದ್ರೆ ಅವರಿಂದೆ ಆಳು ಸರ್ಪ ಕರಿಬಣ್ಣದ ಕೊಡಿ ಹಿಡ್ಕಂಡು ಮಾರದೂರ್ದಾಗೆ ಅವರಿಗ ನೆಳ್ಳ ಮಾಡ್ತಾ ನಡಿಬೇಕು. ಇಲ್ಲಿಕ್ರ ಗೌಡ್ರು ಮಕ ಮುಸಡಿ ನೋಡ್ದಂಗೆ, 'ಯಾಕ್ಲೆಮಗ್ನ ಹಲ್ಲ ಬಂದಾವೇನ' ಅಂತೇಳಿ ಬಾಯಿಗ ಬಂದಿದ್ದನ ತಗಿತಿದ್ರು. ತಾಂಡದ ಮಂದಿ, ಗೌಡ್ರ ಕಾಲು ಮತ್ತ ಮೈ ನೋಡಿ, ಬೆಕ್ಕಸ ಬೆರಗಾಗಿ ಬಾಯಿಬಿಟ್ಕಂಡ ನೋಡ್ತಿದ್ರು.

ಯಾರಾರು ಕೂಲಿಗ ಹೋಗದೆ ಕಾಲಸರಿ ಇಲ್ಲಾಂದ್ರೆ "ಹೂಂ ತಂದಕೊಡ್ರಪ್ಪ ಎಡೆಳ್ಳಿ ಸಂಬೆಗೌಡ್ರ ಜೋಡು ಕಾಲಪಾಡಿಲಂತೆ, ಮಂದಿ ಆಡ್ಕೊಳ್ಳೊರು. ಅವರ ಹಣಿ ಬರಾನ ಆಟು. ಕಲ್ಲು-ಮುಳ್ಳ ತುಳ್ಕಂತ ದುಡದ ತಿನ್ನೊದು ಆಟೇಯ. ಆದ್ರ ಎಕ್ಕಡನೆ ಇಲ್ಲದಿರೊ ಊರಾಗ ಹನ್ಮಜ್ಜಂದೇನ ಕೆಲ್ಸ ಅಂತ ತಿಳಿಯದಾಗಿತ್ತು. ತಾಂಡೇ ದುರ್ಗವ್ವನ ಗುಡಿ ಪಕ್ಕದ ಗಾರಿಕಟ್ಟೆ ಮೇಲಿನ ಗುದ್ದಮ್ಮನ ಬೇನ್ಮರದ ನೆಳ್ಳಾಗ ಚರ್ಮದ ತುಂಡು, ಹಳೆ ಟೈಯರು, ಚರ್ಮಕೋಯ್ಯಾಕ ರಂಕಿ, ಹರ್ತ ಕಮ್ಮಿಯಾದ್ರ ಉಜ್ಜಿಕೊಳ್ಳಕ್ಕೊಂದು ಮುಗಿಲಗ ಮಕಮಾಡಿರೋ ನಯವಾದಕಲ್ಲು. ಕಲ್ಲಿಗೊಮ್ಮೆ ರಂಯಿಂತ ಉಜ್ಕಂಡು ಹರ್ತ ಮಾಡ್ಕಂತಿದ್ದ. ಸಾಮಾನೆಲ್ಲ ಜೊಡಸ್ಕಂಡು ಮುಂಜಾನೆನೆ ಕೆಂಪಮ್ಮನಂಗಡಿಗ ಹೋಗಿ, ಹ್ವಾದಸಲ ಚಾಕುಡ್ಕಂಡ ಸಿಗಸಿದ ತೆಂಗಿನ ಚಿಪ್ಪನ, ಮುಂದಿನ ನೆರಕಿಯಿಂದ ತಕ್ಕಂಡು, ನೀರಾಕಿ ಒಮ್ಮೆ ತ್ವಳದು, ಕೆಂಪಮ್ಮ ಕಿತ್ಲಿಯಿಂದ ಹನಿಕಿಸಿದ, ಹಾಲಿಲ್ಲದ

ಬೆಲ್ಲದ ಪಾನಕದಂತ ಚಾ ಕುಡಿದು ಹಟ್ಟಿನಾಯ್ಕನ ಮನಿ ಮುಂದಿನ ಜಗಲಿ ಕೆಳಗ ಕುಂತ್ಕಂಡು "ಅಪ್ಪಾರ, ಬೆಳಿ ಪಡದಾವೇನ್ರಿ?" ಅಂತೇಳಿ ಹಟ್ಟನಾಯ್ಕನ ಮಾರಿ ನೋಡ್ತಿದ್ದಾ. "ಏನ ಪಾಠ ಬಿಡ ಹನ್ಮಪ್ಪ, ಅವನವ್ವನ ಹಿರೇಪುಷ್ಯ ಅರ್ಧ ಮಳಿ ಕೈಕೊಟ್ಟಿದ್ಕ, ಬಿಳಿಕಸ ಬಿದ್ದು ಜ್ವಾಳ ಎಲ್ಲಾನು ಹಾಳಾಗಹ್ವಾತು. ಇರೋ ತುಂಡ ಜಮೀನ್ಯಾಗ, ರಾಗಿನೂ ಬೆಳಿಯಾಕೆ ಆಗವಲ್ದು" ಹೊಟ್ಟಿಯೊಳಗಿನ ಸಂಕಟಾನ ಹೊರಗ ಹಾಕ್ತಿದ್ದನಾಯ್ಕಪ್ಪ. "ಛೇ ಹಿಂಗ್ಯಾಕಾತ್ರಿ ಅಪ್ಪಾರ, ಈ ಮಳಿರಾಯನು ಬಡವರ ಬಾಳಿನ ಕೂಡ ಛಲೋ ಆಟನಡ್ಸ್ಯಾನ ನೋಡ್ರಿ". ಅವರ ಕಷ್ಟದಾಗ ತಾನೂ ಭಾಗಿ ಅಂತ ತೋರಿಸಿಕೊಳ್ತಿದ್ದ. ನಾಯ್ಕವ್ವ ತಂದ ಸುರದ ಜ್ವಾಳದ ನುಚ್ಚನ್ನ ಮಣ್ಣಿನ ಮಡಕಿಯೊಳಗಸುರ್ಕಂಡು. ಮುಂದಿನ ಮನಿಗ ಹೊಕ್ಕಿದ್ದ. ದೂರ ನಿಂತ್ಕಡೆ "ಅವ್ವಾರ, ಹನ್ಮಜ್ಜ ಬಂದೀನ್ರೀ" ಒದರ್ತಿದ್ದ. ಮನಿಯಾಗಿಂದ ಹೊರಗ ಬಂದ ಹೆಂಗಸು "ಹುಡ್ರೆಲ್ಲ ಉಂಡಹ್ವದ್ರು, ನಾಳೆ ಬಾ ಹನ್ಮಜ್ಜ" ಅಂದ್ರ, "ಯಾಕ ಆಗ್ವಲ್ದಬಿಡವ್ವ, ಎಲ್ಲಾ ಶಿವನಿಚ್ಛೆ" ಅಂದವನೆ, ಅವನುಳ್ಕೊಂಡಿರೊ ಜಾಗಕಬರ್ತಿದ್ದ.

ಸಂಜಿ ಮುಂದ, ಇಳಿಹೊತ್ತಿಗಾಗ್ಲೆ ಸಾಬೂಬನ ಹೆಂಡದ ಕತ್ತಿ ಬರೋದಾರಿ ಕಾಯ್ತಿರೋ, ಜಿನಗ, ತಂಬೂರನಾಯ್ಕ, ಬೊಬಾನಾಯ್ಕ ರನ್ನನೋಡಿ, ಅವರ ಕುಂತ ಜಾಗದಿಂದ ಐವತ್ತಡಿ ದೂರ ತಂತ್ಕಂಡೆ, "ಕಂಬೂರಣ್ಣ ಒಂದ ಕೊರಿಬೀಡಿ ಇದ್ರ ಬಿಸಾಕು." ಹಲ್ಲಗಿಂಜುತ್ತಿದ್ದಾ. "ಇಕ್ಕಾಳಪ್ಪ ಮೋಟ ಬೀಡಿ ಐತೆ" ಅಂತೇಳಿ ಅವನೆ ತುಟಿಗಿಟ್ಟು ಬೆಂಕಿ ಹಚ್ಚಿ ಅವನ ಕಡೀಗ ಬೀಸಾಕ್ತಿದ್ದ.

ಸಾಬೂಬನ ಕತ್ತಿ, ಲಚ್ಕೂ ಪಚ್ಚು ಅಂತ, ಒಂದುವರಿ ಕೇಸ ಹೆಂಡ ಹೇರ್ಕಂಡ ಬರೋದ್ರಾಗ ಕೌಳಾಗಿ ಹೊಕ್ಕಿತ್ತು. ಹೆಂಡಕ್ಕಂತ ಬಂದು ಹಿಂದೋದ ಹೆಂಗಸರೆಲ್ಲಾ ಸಿಗುತ್ತೋ ಇಲ್ಲಾಂತ ತುಡಗಿಲೆ ಬಂದು, ನೆರಕಿಹಿಂದ ಕಳುವಿಲೆ ಕುಡ್ಕಂಡು ಸೀರಿಸೆರಗಿಂದ್ಲೆ ಒರಸ್ಕಂತ, "ಥು, ಹಾಟಗಳ್ಳ, ಆಗ್ಲೆನೀರ ಹಾಕ ಬಿಟ್ಟಾನ ನೋಡ" ಅಂತೇಳಿ, ಸಾಬೂಬನಿಗೆ ಹಿಡಿಶಾಪ ಹಾಕ್ತ ಮನೀಗ ಹೋಗದ್ದನ್ನ ದೂರದಲ್ಲೇ ಕುಂತು, ಎಲ್ಲಾ ಮಂದಿ ಕುಡುದು ಬಾಟಲಿಯೊಳಗ ಉಳಿದ 'ಘಸಿ' ಹೆಂಡಕ್ಕ ಕಾಯ್ಕಂಡ ಹನ್ಮಜ್ಜ, ಬರೋ ಹೋಗೋ ಮಂದಿನೆಲ್ಲಾ ಮಾತಾಡಸೋನು. ಮಂದಿ ಕುಡದು ಕ್ಯಾಕರಿಸಿ ಉಗಳೋದನೆ ದಿಟ್ಟಸಿ ನೋಡ್ತಿದ್ದ. ಊರಾಗ ಹೋಗಿ ಕಡದ ಕಿಸಿಯೋದಾರು ಏನೈತಿ ಅಂತೇಳಿ, ಮಂದಿ ಏಳೋಮಟಾನು ಕುಂತಿದ್ದು, ಸಾಬೂಬ ಹೇಳಿದ ಸಣ್ಣಾಪುಟ್ಟ ಕೆಲ್ಸಗಳನೆಲ್ಲಾ ಮಾಡಿ ಅವನ ಕೊಟ್ಟ ಬುರಗ ಬುರುಗು ಘಸಿ ಹೆಂಡ ಕುಡದು, ಅವರೂರಾಗ ಆಡಿದ ಹೇಮ್ರೆಡ್ಡಿ ಮಲ್ಲಮ್ಮ ನಾಟಕದ ಹಾಡನ್ನ ಹಾಡ್ಕಂತ, ಕೆರಿ ಏರಿ



ತಡಾಯಿತ್ತಿದ್ದ. "ನಾಲಗಿಕೆಟ್ಟ ಕೆರಹಿಡದೈತಿ, ಯಾರ ಮನಿಯಾಗ ಮಾಂಸದ ಸಾರ ಮಾಡ್ಯರ, ಅವರ ಮನಿಗ ಹೋಗಿ ಕೇಳನ" ಒಬ್ಬನೆ ಜೋರಾಗ ಮಾತಾಡ್ಕಂಡು, ಎಲ್ಲಾ ಮನಿ ಮುಂದ ನಿಂತು ವಾಸನಿ ಹಿಡಿತಿದ್ದ, ಹಿಂದಲ ಓಣಿ ಕಡಿಂದ ನುಗ್ಗಿ ದೊಡ್ಡನಾಯಕ ಮನಿ ಕಡಿಂದ ಮೇಗಳ ಓಣಿಗ ಹೊಂಟ. ಅಂವ ಮಾಡ್ತಿರೋ ರೀತಿ ಕಂಡ ನಾಯಿ, ತನಗ ಪ್ರತಿಸ್ಪರ್ಧಿಯಾದಾನಂತ 'ಬೌ' ಅಂತು "ಹಚ್ಚಲೇ ಬೇವರ್ಸಿ, ಯಾಕೆ ಹೆಂಗೈತಿ ಮೈಯಾಗ. ಯಾರು ಏನನ್ನೊ ಖಬರಿಲ್ಲೇನ ನಿನಗ." ಅಂದವನೆ ಒಂದು ತರ್ಕಕ್ಕಿಳಿದ "ಇವನವ್ವನ ನಾಯಿ ಇಲ್ಲೇ ಬಾಲ ಅಲ್ಲಾಡಸ್ಕೊಂತ ನಿಂತೈತಿ ಅಂದ್ರ ಸುತ್ತಮುತ್ತ ಕರಾಮತ್ತ ಐತೆ." ಅಂದ್ಕೊಳತನೆ, ನಾಯಿ ಹಿಂದಿಂದ ನಡದ. ನಾಯಿ ಸೀದ ಮುಂದಲ ಓಣಿಯ ದೊಡ್ಡಮನಿ ನಾಗನಾಯ್ಕನ ಅಂಗಳಕ ಹೋಗಿ ಕುಂಯ್ ಅಂತು, "ಅಲೆಲೆ, ಇಲ್ಯೆತೇನು, ನಮ್ದ ಮನಿ ಬಿಡು" ಅಂದ್ಕೊಂತನೆ, "ಅವ್ವಾರ, ಹನ್ಮಜ್ಜ ಬಂದೀನ್ರೀ". ಒಂದ ಸಲ ಗುಡಿಸಲ ಹಿಂದಿಂದ ಕೂಗಿ........... ಪೂರ್ವಕ ಊಟ ಮಾಡ್ತಾರಂತ ಗೊತ್ತಾಗಿ ಕಣದ ದೊಡ್ಡ ಬಾಗಲ ತಗದು ಅವರ ಪ್ರತಿಕ್ರಿಯೆಗೂ ಕಾಯದೆ ಒಳಗನುಗ್ಗಿದ. "ಹಾಕ್ರ ಅತ್ಲಾಗ," ನಾಗನಾಯ್ಕ ಹೆಂಗಸರಿಗ ಹೇಳಿದ. "ಭಾಳ ದಿನಾತ್ರಿ ಒಳಗೊಳಗ ಜಡ್ಡಬಂದು ನಾಲಗಿ ರುಚಿನ ಕೆಟ್ಟೈತಿ." ಒಂದೆಲ್ಡ ಚೂರಿದ್ರ ಉದರಿಸ್ರೀ ಅವಾರ "ಅವನೊಡಲಾಳದ ಇಂಗಿತ ತೊಡಿಕೊಂಡ. ದೊಡ್ಡ ಕುಟುಂಬ. ಚೂರ ಚೂರ ಹಂಚಿ ಉಳದಿದ್ದ ಒಂಚೂರ ಮಾಂಸ ತನ್ನ ತಟ್ಟೆಯೊಳಗ ಹಾಕ್ಕೊಂಡಿದ್ದ, ಯಜಮಾನಿ, ಫಕ್ಕೀರಜ್ಜಿ ಹನ್ಮಜ್ಜನ ಮಾತ ಕೇಳಿ, "ಅಯ್ಯೋ ಪಾಪ" ಅನ್ನಿದೆ, ಕಟ್ಟಿಗೆ ಸೌಟಿಂದ ತಗದು ಅವನ ಸಾರಿಗ ಸೇರಿದ್ಲು. "ಹಾಂ, ಇದ್ರಾಗ ಬಿಡ್ರವ್ವ, ಹೆಸರಿಗೇನೈತ್ರಿ" ಅಂದ, "ಬಿಸಿಮುದ್ದಿ ಐತಿ ಇಕ್ಕ ಉಣಂತ" ಒಂದ ಜ್ವಾಳದ ಮುದ್ದಿ ಇಟ್ಲು. "ಹಾಂ, ದೇವರು ಒಳ್ಳೆದ ಮಡ್ಲವ್ವ" ಅಂದವನ ಹಿಂದಕ ತಿರುಗಿ, ಅವನ್ನಡಕ ಬಂದ ಮುದ್ದಿ ಮುಂಜಾನಿವ ಎಲ್ಡರೊಟ್ಟಿಯನ್ನ ಅದೇ ಸಾರಿಂದ ನೆಂಚ್ಕೊಂಡ, ಹೊಡದವನೆ ಒಂದ ಚರಗಿ ನೀರ ಕುಡದು ಕಟ್ಟಿಗ ತಲಿಕೊಟ್ಟ ಮಕ್ಕೊಂಡ.

ಒಂದವಾರಾದ್ರು, ಒಂದ ಜೋಡಿ ಎಕ್ಕಡ ಬರ್ಲಿಲ್ಲಾ, ಹನ್ಮಜ್ಜಗೇನು ಚಿಂತೆ ಇಲ್ಲ, ಮನಿಮುಂದ ಹ್ವಾದ್ರ ಯಾರು ಇಲ್ಲಾಂತ ಹೇಳಂಗಿಲ್ಲ. ಇರೋದ್ರಲ್ಲಿ ಆಟ ಕೊಡ್ತಾರ, ಹೆಂಗೊ ನಡಿತೈತಿ ಅಂತ, ಅದೂ ಗೊತ್ತು ಸಂಡಣಿಗಿ ತಾಂಡದಲ್ಲಿ ಜೋಡ ಮೆಟ್ಕೊಳ್ಳೋ ಜನಾ ಇಲ್ಲಂತ. ತಾಂಡದ ಮಂದಿ ಜೋಡ ಹಾಕ್ಕೊಂಡ ಊರಿಗ ಬಂದಿರೋದನ್ನ ನೋಡಿದ್ದೆ. ಅದ್ಯಾವದೋ ಊರಿಗ ಕೊಟ್ಟದ್ದ ಸಾಮ್ಕಿ ಅನ್ನೋಳು, ಗಂಡನ್ನ ಬಿಟ್ಟು

ಪ್ಯಾಟಿಸೇರ್ಕಂಡ್ಲು, ಆ ಸಾಬಿ ದೊಡ್ಡ ಮಾಲಿಕ ಅವನ ಹೇಣ್ತಿಗ ಕೊಟ್ಟ ಸೌವಲತ್ತು ಸಾಮ್ಮಿಗ ಕೊಟ್ಟಿದ್ದ. ವರ್ಷಕ ಒಂದದಪ ಊರಿಗ ಬರೊ ಸಾಮ್ಮಿ, ಅವಳ ಮಕ್ಕಳು ಮಾತ್ರ ಕಾಲಮಾರಿ ಮೆಟ್ಕಂಡ ಬರ್ತಿದ್ರು, ಊರಾನಮಂದಿ, ಬೆಪ್ಪಾಗಿ ಅವರನ್ನ ನೋಡ್ತಿದ್ದು. ಸಾಲಿಗ ಹೋಗು ದೊಡ್ಡ ಹುಡ್ರುವೆ, ಉದ್ದನೆ ಪ್ಯಾಂಟ ಸಿಗಸ್ಕಂಡ ಬಂದ್ರು ಬರಿಗಾಲು. ಅದ್ಯಾರೋ ದೊಡ್ಡಸಾಹೇಬ ಆಗ್ಯಾನಂತ ಅಂವ ಊರ ಬಿಟ್ಹೋನು ವಾಪಾಸ ಬರದೆ ವರ್ಷಗಳೇ ಆದ್ವಂತೆ ಅಂವ್ಕಾ ಜೋಡಮೆಟ್ಟಿರ ಬೇಕು ಅಂತ ತಾಂಡದಮಂದಿ ಊಹೆಗಳು, ಅವರನ್ನ ಬಿಟ್ರೆ, ಪ್ಯಾಟಿಕಂಡ ದಲ್ಲಾಳಿ ದುರುಮುನಾಯ್ಕ, ಯಾರೋ ಕಿತ್ಹೋಗಿರೊ ಜೋಡನ್ನ ಬಿಟ್ಟ ಹೋಗಿದ್ರಂತೆ ಅವನ್ನ ಹಂಗೆ ಎತ್ಕಂಡು ತಂತಿ ಸುತ್ಕಂಡು ಎಡಳ್ಳಿ ಸಂಬೆಗೌಡ್ರಂಗೆ ನಡೀತಿದ್ದ ತಾಂಡದಾಗೆ.

"ಲೇ, ಪ್ಯಾಟ್ಯಾಗ, ಬೀದಿಯೊಳಗ ಬಿದ್ದಿರ್ತವಂತ್ಲೆ ಮೆಟ್ಟಗಳು" ಆಟ ಮುಗಿಸಿ ಹರಟೆ ಹೊಡಿಯಾಕ ನಿಂತಿದ್ದ ಪಡ್ಡೆ ಹುಡುಗರ ವಿಚಾರಗಳು. "ಅದೆಂಗಲೇ" ಒಬ್ಬ. "ಲೇ ಮಿಂಡ್ರಿ ಮಗನೆ, ಅಲ್ಲೇನು ನಮ್ಮಂತ ಕೂಳಿಗಗತಿ ಇಲ್ಲದಂತೋರ ಅದಾರೇನು?" ತಾಂಡ ನಾಯಕನ ಹಾಗಿರೋ ಕೊಟ್ರಿ ಎಲ್ಲಾ ಬಲ್ಲೋನಂಗೆ ವಾದ ಮುಂದಿಟ್ಟ.

"ಅಂದ್ರ ಎಲ್ಲಾರೂ ಹೊಟ್ಟಿ ತುಂಬ ತಿಂತಾರೇನಲೆ". ಸಿಂಗನ ಅಳಲು. "ಹೌದು" ಅಂದ ಪಾಂಡಿ. "ಛೇ ನಮ್ಮಪ್ಪನೂವೆ ಸಾವುಕಾರನಾಗಿದ್ದು, ಪಟ್ಟಣದಲ್ಲಿದಿದ್ದರೆ, ನಾನು ಒಂದ ಜೋಡಿ ಮೆಟ್ಟ ಹಾಕೊಂಡು ಏನಾರು ಆದ್ರ ಈ ಮುದುಕ ಹನ್ಮಜ್ಜಂತಾವ ಮಾಡಿಸ್ತಿದ್ದೆ ನೋಡ್ರಲೇ" ಜಿನುಗ ಮಾತ್ನಲೆ ಸಾವುಕಾರರ ದೌಲತ ತೊರ್ಸಾಕ ಪ್ರಯತ್ನಿಸಿದ. ಹುಡ್ರಮಾತ ಕೇಳ್ಕಂಡ ಹನ್ಮಜ್ಜ, ಒಂದಸಲನಕ್ಕು, "ಸಿಂಗಪ್ಪ ಬಾ ಇಲ್ಲಿ" ಕರದ, ಹುಡುಗರ ದಂಡೆ ಅವನ್ನಡಕ್ಕ ಮಾಡ್ಕಂಡು, ಅವನು ಹೇಳಬಹುದಾದ ಗಹನವಾದ ವಿಚಾರ ಕೇಳಾಕ ಕುತೂಹಲದಿಂದ ಕಾದ್ರು. "ಪ್ಯಾಟಿ ಅಂದ್ರೆ ಬೋ ದೊಡ್ಡದು, ಅಲ್ಲಿ ಮಂದಿ ಬಸ್ಸು ಕಾರು, ಜೀಪು, ಸೈಂಕಲ್ಲು ತಗೊಂಡ ಅಡ್ಡಾಡ್ತಾರ. ಅದೇನ ದೊಡ್ಡದೊಡ್ಡಮನಿಗಳು, ಕಾಲಾಗೆ ಬುಡ್ಡಿಸ್ ಬಂದವೇ ಅಂತೀನಿ" ಅವನ ಮಾತಿನ ತಡೆಯೊಡ್ಡಿದ, ಪಾಂಡಿ, "ಐ ಬುಡ್ಡಿಸ್, ಅದೆಂಗಿರುತ್ರಪ್ಪ ಬುಡ್ಡಿಸ್". "ಐ, ಬೋ ಅವಸರ ನೋಡು ಪಾಂಡಪ್ಪ ನಿಂಗೆ ಅದನ್ನೆ ಹೇಳ್ತಿವ್ನಿ ವಸಿತಡ್ಕಳ್ರೀ. ಈಗ ಇದು ಎಕ್ಕಡ ಅಂದ್ಕೊಳ್ರಿ" ಮುಗಿಲ ನೋಡ್ತಿರೊ ಚರ್ಮಾತೊರ್ಸಿದ ಇದ್ರಮ್ಯಲೇನು ಚರ್ಮ ಕಟ್ಟರ್ತಾರೆ, ಈ ಕಾಲಿದೆಯಲ್ಲ ಪೂರ ಒಳಗ ಹ್ವಾದಮ್ಯಾಲೇ ಲೇಸ ಕಟ್ತಾರೆ, ಕಾಲು ಹೂವಿನಂಗಿರುತ್ತೆ".

ಹುಡುಗರದಂಡು, ಕನಸಿಗ ಜಾರಬೇಕು ಆಟ್ರಲ್ಲಿ ಯಾರೋ ದೊಡ್ಡೋರ ಬಂದು. "ಲೇ ಬೇವರ್ಸಿಗಳ ಆಟ ಆಡೋದ ಬಿಟ್ಟ ನೀವೆನ್ರಲೇ ಮಾಡ್ತಿದ್ದಿರಿಲ್ಲಿ, ಓಡ್ರಿ" ಗದರಿದ ನಂತರ, ಓಟಕಿತ್ತು,

ಹದಿನೈದು ದಿನ, ಸೋಮವಾರದಿಂದ ಮುಂದಿನದು ಬಿಟ್ಟು ಅದರ ಮುಂದಿನದಂತ ಲೆಕ್ಕಹಾಕಿ, ಊರಾಗ ಸುತ್ತಿ ಯಾರಾರು ಬಂದಾರೇನಂತ ಕಾದ, ಯಾರು ಬರದಕ್ಕ ಹಳಹಳಸ್ತಾ, ಆಟರಾಗಿ, ಜ್ವಾಳ, ಹಿಟ್ಟು, ಬ್ಯಾಳಿ ಸೇರ್ಸಿ ಗಂಟಕಟ್ಕೊಂಡು ಹರಕುಗೋಣಿ ಚೀಲದಲ್ಲಿ ಕಟ್ಕಂಡು ವಾಪಾಸು ತನ್ನೂರಿಗ ನಡದ ಬಿಡ್ತಿದ್ದ ಹನ್ಮಜ್ಜ. ನಾನು ದಾವಣಗೇರಿ ಹರಪನಳ್ಳಿ ದಾರವಾಡ ಸೇರಿ ಓದುಮುಂದವರ್ಸಿದೆ. ಬಡತನದ ನಡುವೆಯ ಸಳನಳಸುವ ಕನಸುಗಳನ್ನ ನೆಪ್ಪ ಮಾಡಿಕೊಳ್ಳುತ್ತಾ, ನಮ್ಮಸ್ಕೂಲ ಹುಡ್ರು–ಹುಡುಗಿಯರು ಹಾಕ್ಕೊಂಡ ಬರೋ ಚಪ್ಪಲಿ, ಬೂಟಗಳನ್ನ ನೋಡಿ ಸಿಂಡ್ರೇಲಾಳಂತೆ ಕನಸು ಹೆಣಿತಿದ್ದೆ ಅದರ ಮುಂದೆ ಕಾಲ ಅದೆಷ್ಟ ದೂರ ಸರದಿತಂದ್ರ ಹನ್ಮಜ್ಜ ನನ್ನ ನೆನಪಲ್ಲಿ ಮುಸುಕ ಮುಸುಕಿನ ನೆನಪು. ಗಾರಿಕಟ್ಟೆ ಪಕ್ಕ ಬೋರಬಂತು, ಅದು ಕೆಟ್ಟು ಕಾಲಗಳೇ ಆದವು, ಗಾರಿಕಟ್ಟಿ ಹೊಡದು ಹೋಗಿ ಜಮಾನಗಳೇ ಆದವು, ಊರ ನಡುವಿನ ಬೇವಿನ ಮರ ಸಿಡ್ಲುಬಡದು ಒಣಗಿಹೋತು, ಈಗ ತಾಂಡದ ತುಂಬ ಮಂದಿಕಾಲಾಗ ಜೋಡದಾವ ಹೆಂಗಸರು, ಗಂಡಸ್ರು ಮಕ್ಕಳು, ಚಪ್ಪಲಿ ಇಲ್ಲದೇ ಆಚೆಗೆ ಬರೋದೇ ಇಲ್ಲ ಅವು ಹರದರೆ ಮಂದಿ ಹೊಲ್ಸಾಕ ಪಟ್ಟಣಕ್ಕೆ ಹೊಕ್ಕಾರ. ಈ ಕಾರ್ಯಕ್ಕೆ ಬರ್ತಿದ್ದ ಹನ್ಮಜ್ಜ ಮಾತ್ರ ಈಗಿಲ್ಲ. ಅವನೇನಾದ ಅವನ ಮಕ್ಕಳು ಸಂಸಾರ ಎಲ್ಲಾ ಅಸ್ಪಷ್ಟ. ಆದರೆ ಅಜಾನುಬಾಹು ಹರಕು ಅಂಗಿ, ಹರಕು ಪಂಚೆ, ಬಿಳಿ ತಲೆಯ ಮುದುಕ ನನ್ನ ನೆನಪಿನಾಳದಲೆಲ್ಲೋ ನನ್ನ ಕುಟುಕುತ್ತಿದ್ದ.

❖

# ೨. ಬೆತ್ತಪ್ಪನ ಮಗ ಜುಲ್ಪನೂ

ಒಲಿಯೊಳಗಿಂದ ಬೂದಿಯನ್ನ ತಗೊಂಡು ಮನಿಯೊಳಗಿದ್ದ ಒಂದು ಒಡಕು ಸಿಲಾವರಿ ಪಾತ್ರಿ, ಎಲ್ಡು ಸಿಲಾವರಿ ತಾಟು, ಒಂದ ಗಲಾಸುತಗೊಂಡು ಗುಡಸಿಲಿಂದ ದೂರ ಮೈತೊಳಿಯಾಕ, ಮೀನು ತಿಕ್ಕಕಂತ ಇಟ್ಟಿದ ಕಲ್ಲಿನ ತಾವ ಒಯ್ದು ಇಟ್ಟ ಜುಲ್ಪಾ. ಸಾಲಿಕಲ್ತಿದ್ದ ಅವರಣ್ಣ  ಇರೂಪ, ಅದೇನೊ ಕಲ್ತು ಬಂದು ಒಂದ ನೌಕರಿ ಹಿಡಿದು ದುಡಿಯಾಕ ಹತ್ತಿದ್ದ. ಒಂದೆಲ್ಡು ತಿಂಗಳು ನೌಕರಿ ಮಾಡಿದ, ಪಾಪ ಅವನಿಗೂ ಊರಿಗೂ ದೂರದ ದ್ಯಾವೂರ ಪಟ್ಣಕ್ಕೂ ಅಡ್ಡಾಡಿ ಬ್ಯಾಸರ ಬಂತು. “ಯಪ್ಪ ನಾ ಎಟ ದಿನ ಹಿಂಗ ಅಲ್ಲಿಂದ ಇಲ್ಲಿ ಅಡ್ಡಾಡಲಿ” ಅಂದಿದ್ದ ಇರೂಪ, ಅವನಪ್ಪ ಬೆಸ್ತಪ್ಪಗ ತಲಿಬುಡಾ ಏನೂ ತಿಳಿಲಿಲ್ಲಾ. ಸುಕ್ರಿ ಅವನವ್ವ ಎಲ್ಲಾನೂ ತಿಳದಿತ್ತು. “ನಿಮಗ ಅದೇನು ತಿಳಿಯಾಣಲ್ಲಾ ಹುಡಗ ವಯಸ್ಸಿಗ ಬಂದಾನ ಎಲ್ಲಾರ ಒಂದ ಒಳ್ಳೆ ಹುಡುಗಿಯನ್ನ ನೋಡ್ರಿ” ಅಂದ್ಲು “ನಾವಂದ್ರ ಹಳ್ಳಿಯೋರು ನಮ್ಮ ಮನಿಗ ತಕ್ಕಂತ ಹುಡಗಿ ಕೂಡ ಮದ್ವಿ ಮಾಡಿದ್ರಾತು ಕೊಡಟ್ಟಿ ಪಂಕನ ಮಗಳು ಪಾಡದಾಳಂತ ಬೇಕಾರ ನೋಡಿ ಬರಾನು” ಅಂದ ಬೆಸ್ತಪ್ಪ. ಅವನ ಅವ್ವ ಅಪ್ಪ ಇಬ್ರೂ ಏನೂ ಕಲಿಯದ ಹಳ್ಳಿ ಹುಡುಗಿಯರನ್ನ ಆರಿಸಿಕೊಂತ ಹೊಂಟಿರೋದನ್ನ ಮನಗಂಡ ಇರೂಪ, “ನೋಡ ಕುಂದೂರ ನಾ ಕಲ್ತವನು, ನನ್ನ ಕೂಡ ಬಾಳ್ವಿ ಮಾಡಾಕಿ ಕಲ್ತಿದ್ರಪಾಡು, ನೀನೆ ಒಂದ ಮಾತು ಅಪ್ಪಗ ಹೇಳ ಬಿಡು” ಅಂದಿದ್ದ. ಕುಂದೂರ ಬೆಸ್ತಪ್ಪನ ಕೂಡ ಬೆಸ್ನಾಗಿದ್ದ, ಊರಿನ ಎಲ್ಲಾ ಕಾರಭಾರದಾಗ ಅವನದೇ ಮುಂಚಿನ ಸ್ತಾನ ಹಂಗಾಗಿ ಅವನಿಗ



ಹೇಳಿದ್ರ ಸುದ್ದಿ ಹೆಂಗಾನ ಹೋಗಿ ಅವರಪ್ಪಗ ಮುಟ್ಟತೈತಿ ಅಂತ ಇರೂಪ ಮನಗಂಡಿದ್ದ. ಸುತ್ತಲಹಳ್ಳಿಯೊಳಗೆಲ್ಲಾ ತಮ್ಮ ಕುಲದಾಗ ಕಲ್ತಿರೋ ಹುಡುಗಿ ಸಿಗದಕ್ಕ ಬೆಸ್ತಪ್ಪ ಪೇಚಾಡ ತೊಡಗಿದ. ಇರೂಪ ಪ್ರತಿದಿನ ದ್ಯಾವೂರ ಪಟ್ಟಣಕ್ಕ ಬಸ್ಸ ಹತ್ತಾಕ ಬರ್ತಿದ್ದು ಬೆಂಗ್ಳೂರೊಳಗ ಕಲ್ತಹೆಣ್ಣು ಅದಾಳಂತ ಗೊತ್ತಾಗಿದ್ದೆ ವಾಸನಿ ಹಿಡಿದು ಹೊಂಟೆ ಬಿಟ್ಟ.

ಸಿಲಾವರಿ ಡಬರಿ ಅರ್ದ ನೆಗ್ಗಿತ್ತು, ಒಂದ ಸಣ್ಣ ಕಲ್ಲು ತಗೊಂದು ಪಟಾ ಪಟಾಂತ ಹೊಡೆದು ತಳ ಸರಿಮಾಡಿದ. ಕೈ, ಕಾಲು, ಹರದ ಅಂಗಿ ಎಲ್ಲಾನೂ ಮಸಿಆತು, ಆದ್ರೂ ಚಿಂತಿ ಮಾಡದೆ, ಬೂದಿಯನ್ನ ರಾಗಿ ಹುಲ್ಲೊಳಗ ಹಾಕ್ಕೊಂದು ಗಸಾಗಸಾ ತಿಕ್ಕ ತೊಡಗಿದ. ಅವನ ಪಕ್ಕದ ಮನಿ ಪಾರೊತಿ "ಎಲ್ಲಾ ಕೂಲಿಗ ಹೋಗ್ಯಾರ ಮನಿಯೊಳಗಿರೊದು ಜುಲ್ವಾ ಒಬ್ಬನೆ ಈಗ ಅವನ ಕೂಡ ಆಟ ಆಡಿ ಹೋಗೀನಿ, ಅವನ್ಯಾಕ ಪಾತ್ರಿ ತಿಕ್ಕಾಕ ಹತ್ಯಾನ?" ಕುತೂಹಲದಿಂದ, ಬೇಲಿದಾಟಿ, "ಅಯ್ಯ ಜುಲ್ವಾ ಪಾತ್ರಿ ತಿಕ್ಕಾಕ ಹತ್ಯಾನ" ಅಂತ ಕೂಗಿದ್ಲು. ಜುಲ್ವಾ, ಮಾತಾಡದೆ, ಜೋರಾಗಿ ಉಜ್ಜ ತೊಡಗಿದ. ಸಿಲವರೆಲ್ಲಾ ಸುಟ್ಟು ಅರ್ಧದ ಮಟ ಕರಕಲಾಗಿತ್ತು. ಒಳಭಾಗದಾಗ ಮುದ್ದಿ ಕೂಡ್ಸಿದ್ದು ಗಟ್ಟಿಹಂಗೆ ಅಂಟ್ಕೊಂಡಿತ್ತು. "ಯಾಕೋ ಜುಲ್ವಾ ನೀ ತೊಳಿಯಾಕ ಹತ್ತಿ" ಅಂದ್ಲು "ಯಾಕಿಲ್ಲ ಬಿಡೆಸುಮ್ಕೆ ಕುಂದ್ರೊದೇನು ಅಂತೇಳಿ ಮಾಡಾಕ ಹತ್ತೀನಿ, ಎಲ್ರೂ ಕೆಲ್ಸಕ ಹೊಗ್ಯಾರ. ಬರೋದು ತಡ ಅಕೈತಿ, ಯಾಕ ಮಾಡಿದ್ರೇನು? "ನಿಜಾನ ಮರೆಮಾಚಿ ಏನೋ ಒಂದ ಹೇಳಿ ಸಾಗ ಹಾಕಾಕ ನೋಡಿದ." "ಹಂಗೆಲ್ಲಾ ಪಾತ್ರಿ ಗಂಡ ಮಕ್ಕಳು ತೊಳಿಬಾರ್ದು, ನೀ ಹುಡುಗ ಅಲಾ?" ಕೇಳಿದ್ವು 'ಹೂಂ' ಆದ್ರೇನಾತು ಅಂದ, "ಹುಡುಗಿಯರಿಗಷ್ಟೇ ಅದು ಬರೋದು ನೋಡಲ್ಲಿ ನಿನ್ನ ಮಾರಿ ಮಸಿಯಾಗಿರೋದು". ಅಂದ್ಲು "ಇರ್ಲಿ ಮನಿಗೋಗು, ಅವರ ಬರೋದ್ರಾಗ ನಾ ಪಾತ್ರಿ ತೊಳದು ಕಸ ಹೊಡದು, ಬಾಗಲಿಗ ನೀರ ಹಾಕಿ ನೀರ ತುಂಬಿ ಇಡಬೇಕು" ಅಂದ. ಪಾರೋತಿಗ ತಡಿಯಾಕ ಆಗದೆ ಕೇಳಿದ್ಲು. ಯಾರ ಬರ್ತಾರ, ನಿಮ್ಮ ಮನಿಗ ಅಂದ್ಲು. "ಎ ಯಾರಿಲ್ಲ ಬಿಡು" ಅಂತ ತಿಕ್ಕೋದನ್ನ ನಿಲ್ಲಿಸಿದವನೆ, ನೀರ ಹಾಕಿ ತೊಳಿಯ ತೊಡಗಿದ. ಅಂವ ಹೊಗ್ತಿದ್ದ ಸಾಲಿ ಮೇಷ್ಟ್ರು ಪಾಪಣ್ಣ ಬರ್ತಿರೋದನ್ನ ನೋಡಿದವನೆ, ಓಡಿ ಬಂದ. ಪಕ್ಕದ ಮನಿಯೊಳಗಿಂದ ಪಾರೋತಿ ಅವ್ವ ಕರದಿದ್ಕ, ಓಡಿದ್ಲು. ಎರಡು ತಾಟಗಳನ್ನು ಸರಿಮಾಡಿದ. ಬೂದಿಯಿಂದ ತಿಕ್ಕಿದ, ಅವನ ಸಾಲಿ ಗೆಳೆಯ ಚೌಕ, "ಲೇ ಇಲ್ಲಿದಿಯೇನು" ಎಟ ಹುಡಕಾಕ ನಿನಗ, ನಡಿ, ಗಾಲಿ ತಂದೀನಿ ತಗೊಂದು ಏರಿಮ್ಯಾಲ ಓಡಾನು" ಅಂದ "ಇಲ್ಲಪ್ಪ ನಾ ಬರಂಗಿಲ್ಲ ಇವತ್ತು ನನಗೆ

ಕೆಲ್ಸ ಐತಿ ನೀನಾ ಓಡು" ಅಂದವನೆ, ತಟ್ಟಿಯನ್ನ ತಿಕ್ಕಿ ನೀರುಹಾಕಿ ತೊಳದ. "ಯಾಕಲೆ ಈ ಕೆಲ್ಸ ಮಾಡಾಕ ಹತ್ತಿ, ನಿಮ್ಮವ್ವ ಬರಂಗಿಲ್ಲೇನು" ಅಂದ "ಇಲ್ಲೋಲೆ ನಮ್ಮವ್ವ ನಮ್ಮ ಇರೂಪಣ್ಣ ನಮ್ಮ ಸಾಲಿ ಕಲ್ತ ಅತ್ತಿಗಿ ಎಲ್ಲಾರೂ ದ್ಯಾವೂರಿಗ ಹೋಗ್ಯಾರ, ಮಧ್ಯಾಹ್ನ ಸಿದ್ನಿಂಗ ಬಂದ ಹೇಳಿದ ನಮ್ಮ ಸಾಲಿ ಕಲ್ತ ಅತ್ತಿಗೆ ನಮ್ಮ ಮನಿಗ ಬರಾಕ ಹತ್ಯಾಳಂತ". ಅವನಿಗ ಆಗ್ತಿರೊ ಖುಷಿಯನ್ನ ವ್ಯಕ್ತಪಡಿಸಾಕ ಆಗದೆ ಒಬ್ಬನೆ ಖುಷಿ ಪಡತೊಡಗಿದ. "ಭಾಳ ಪಾಡದಳಾಂತಲೇ ನಮ್ಮ ಕಲ್ತ ಅತ್ತಿಗಿ ಬೆಳ್ಳಗ ಕೊಕ್ಕರೆ ಹಂಗ," ವರ್ಣನೆ ಸುರುಮಾಡಿದ. ಚೊಕ್ಕ ಸುಮ್ಮನೆ ಬಾಯಿ ಬಿಟ್ಕೊಂಡು ಎಲ್ಲಾನೂ ಕೇಳತೊಡಗಿದ. ಅವನಿಗೂ ಕುತೂಹಲ ತಡಿಯಾಕ ಆಗಲೇ ಇಲ್ಲಾ "ಏಟೊತ್ತಿಗ ಬರ್ತಾರಂತ, ನಾನು ಬರಬಹುದೇನಲೆ ನೊಡಾಕ." ಅಂದ ಯಾರಿಗೂ ಬಿಡಂಗಿಲ್ಲಾ ನೀನೊಬ್ಬನೆ ಬಾ ಮಗನೆ ಮತ್ತ ಯಾರನ್ನಾರ ಕರ್‍ಕೊಂಬಂದ್ರ ಬಿಡಂಗಿಲ್ಲ ನೋಡಪ" ಅಂದ. ಚೊಕ್ಕಗ ಅವನ ಗೆಳತನ ಮಾಡಿದ್ದು ಸಾರ್ಥಕ ಅನಿಸಿತು. "ನಾ ಒಂದ ರೌಂಡ ಹೋಗಿ ಬರ್ತಿನಿ." ಅಂದವನೆ "ಬಡ್ರ ಬಡ್ರ. ಬುರ್ರ್, ಬುರ್ರ್" ಅಂತ ಬಾಯಿಯಿಂದ ಸೌಂಡ ಮಾಡ್ತಾ ಓಡಿದ. ಜುಲ್ವಾ ತಾಟುಗಳನ್ನ ತೊಳದು ಇಟ್ಟಿದ್ದ. "ಇನ್ನು ಕಸ ಹೊಡಿಬೇಕು ನೀರ ತರಾಕು," ಗಡಬಡಸಿ ಎದ್ದವನೆ, ಬರ್ಲತಗೊಂಡು ಪರ್‌ಪರಂತ ಅಂಗಳ ಗುಡಸ ತೊಡಗಿದ ಸೊಂಬೇರಿ ಜುಲ್ವಾ ಅಂಗಳ ಗುಡಿಸಾಕ ಹತ್ತಿದ್ದನ್ನ ನೋಡಿದ ಬಾವಿ ಕಟ್ಟೆ ಪಕ್ಕದ ಗಂಗಜ್ಜಿ, "ಯಾಕ್ಲ ಜುಲ್ವಾ ಭಾರಿ ಜ್ಞಾನ ಬಂದೈತಿ, ಕಸ ಹೊಡಿಯಾಕತ್ತಿ". ಅಂದ್ಲು "ಮಾತಾಡಕ ಟೇಮಿಲ್ಲಬೇ, ಇವತ್ತು ನಮ್ಮ ಮನಿಗ ನಮ್ಮ ಇರೂಪಣ್ಣನ ಕಲ್ತ ಹೇಣ್ತಿ ಬರ್ತಾಳ" ಅಂದ. "ಅದೆಂಗ್ಲ ಹೆಂಡ್ರ ಆಕ್ಕಾಳು, ಅವನದು ಮದ್ವಿನೆ ಆಗಿಲ್ಲಾ" ಆಶ್ಚರ್ಯದಿಂದ ಕೇಳಿದ್ಲು. "ಆಗ್ಲಿಲಾಂದ್ರ ಏನಾತು ಈಗ ಆಕ್ಕಾನಲ್ಲ". ಅಂತ ಅವನಿಗೆ ವ್ಯಾಳೆ ಇಲ್ಲ ಅನ್ನೊಹಂಗ ಪರ ಪರಾಂತ ಕಸ ದುಂಡಗ ಮಾಡಿದವನೆ ದೊಡ್ಡ ಪುಟ್ಟಿತಂದು ತುಂಬಿ, ತಿಪ್ಪಿಗ ಹಾಕಿ ಬಂದ ಅವಸರದಿಂದ್ಲೆ ಬಾವಿ ಕಡೀಗ ಹೊಂಟ, ಸಿದ್ಲಿಂಗನ ಹೇಣ್ತಿ ಥಾವರಿ, "ಏನೊ ಜುಲ್ವಾ, ನಿಮ್ಮ ಅತ್ತಿಗಿ ಬರಾಕ ಹತ್ಯಾಳಂತ ನಮ್ಮ ಮನಿಯೋರ ಹೇಳಾಕ ಹತ್ತಿದ್ರು, ಅದೇನ ಕಾಲ ಬಂತು ಅಂತೀನಿ, ಮದ್ವಿಗ ಮುಂಚೆನೆ ಹುಡಗಿ ಹುಡಗನ ಮನಿಗ ಬರೋದಂದ್ರ ಏನು? ಹುಬ್ಬೇರಿಸಿದ್ಲು ಅವಳ ಯಾವ ಮಾತನ್ನು ಕೇಳಿಸಿಕೊಳ್ಳದೆ, ಗಡಗದ ಮ್ಯಾಲ ಹಗ್ಗ ಬೀಸಾಕಿ ನೀರು ಸೇದಿಕೊಂಡವನೆ ಮನಿಕಡೀಗ ಓಡಿದ ಬಾವಿಕಟ್ಟಿಮ್ಯಾಲ ಬಹಳ ಹೊತ್ತಿನ ತನಕ ಚರ್ಚೆ ಜಾರಿ ಇತ್ತು. ಪಾರಿಮ್ಯಾಲ ಬೆಳ್ಳಿಟ್ಕೊಂಡು ಹೆಂಗಿಸರೆಲ್ಲಾ ಘನಗಂಭೀರ ಚರ್ಚೆ ಮಾಡ್ತಿದ್ರು. ಜುಲ್ವಾ ಯಾರೇನಂತಾರಂತ ತಲಿಗ ಹಚ್ಕೊಳದೆ, ಕಲ್ತಿರೋ ನಮ್ಮ ಅತ್ತಿಗಿ ನಮ್ಮ ಮನಿಗ



ಬರ್‍ತಾಳ, ಹ್ಯಾಂಗಿರಬಹುದು ಅಂತೇಳಿ ಕಲ್ಪಿಸಿಕೊಂಡು ಖುಷಿ ಪಡತೊಡಗಿದ.

ಕುಂತಲ್ಲಿ ಕುಂದ್ರಂಗಾಗವಲ್ದು, ನಿಂತಲ್ಲಿ ನಿಂದಂಗ ಆಗವಲ್ದು ಅತ್ತಿಂದ ಇತ್ತ ತಿರಗ ತೊಡಗಿದ, ಊರ ಹುಡ್ರು ಈಗ ಸುದ್ಧಿ ತರ್‍ತಾರ, ಆಗ ಸುದ್ಧಿ ತರ್‍ತಾರಂತ ಚಡಪಡಿಸತೊಡಗಿದ. ದನಗಳು ಬರಾಕ ಹತ್ತಿದ್ದು. ವಾರದ ಹಿಂದ ನಾಗಿ ಎಮ್ಮಿ ಇದಿದ್ದ ಹೆಣ್ಣಗರು ಹಿಡದು ಹಾಲ ಕುಡಿತೈತಿ ಅಂತೇಳಿ ಕಣ್ಣಿಹಾಕಿದ. ಗೂಳಿಹಂಗ ನುಗ್ತಿದ್ದ ಡೋರಿ ಆಕಳನ ಗದರಿಸಿ, “ಎ ನಿನ್ನವ್ವನ ಹ್ಯಾಂಗ ನುಗ್ತಿ, ಬಾ” ಅಂದವನೆ ಗೂಟಕ ಕಟ್ಟಿ ಎತ್ತಿನ ಗೊಂದ್ಲಾಗಿಂದ ಸೊಪ್ಪಿದಂಟುಗಳನ್ನ ತಗದು ಹಾಕಿದ. ಕೂಲಿಗ ಹೋಗಿದ ಅವನ ಅಕ್ಕ ಚೌಡಿ ಹುಲ್ಲಿನ ಹೊರಿ ಹೊತ್ಕೊಂಡೊ ಬಂದಿದ್ದನ್ನ ನೋಡಿ. “ಯಕ್ಕ ಈಗ ಬಂದೆ ಆಟು ಕೋಡಿ ಸರದವರಿಗ ಹೋಗಿ ಅವ್ವ ಬಂದ್ಲೇನಂತ ನೋಡಿ ಬರ್‍ತೀನಿ” ಅಂತ ಆಕಿ ಉತ್ತರಕ್ಕೂ ಕಾಯದೆ ಓಟಕಿತ್ತ. ಕತ್ಲು ಆವರಿಸತೊಡಗಿತ್ತು, ಜಿಕ್ ಜಿಕ್ ಜಿರುಂಡಿ ಸದ್ದಿನೊಳಾಗ ದೂರದಿಂದ ಯಾರ ಮಾತು ಸ್ಪಷ್ಟವಾಗಿ ಕೇಳಿಸ್ತಿರಲಿಲ್ಲಾ. ಮುಸ್ಸಂಜಿ ಕತ್ಲಾಗ ಬಿಂಗೂರು ದಾರಿಯಲ್ಲಿ ಯಾರಾದ್ರು ಬರಾಕ ಹತ್ಯರೆನಂತ ನಿಂತಿದ್ದ ಜುಲ್ಪಾನನ್ನ ಕಂಡ ಕೆಂಚಣ್ಣೊರ ಪಾಂಡು, “ಯಕೋ ತಮ್ಮ ಜುಲ್ಪಾ ಇಲ್ನಿಂತಿ” ಅಂದ, “ಏನೂ ಇಲ್ಲಣ್ಣ ನಮ್ಮವ್ವ ದೇವೂರ ಪ್ಯಾಟೀಗ ಹೋಗಿದ್ಲು ಇನ್ನೂ ಬರ್ಲಿಲ್ಲಾ” ಅಂದ “ನಿಮ್ಮವ್ವ ನಿಮ್ಮಣ್ಣ ಇರೂಪ ಬರಾಕ ಹತ್ಯಾರ” ಅಂದ ಜುಲ್ಪಾ ಮೈಯೆಲ್ಲಾ ಕಿವಿಯಾಗಿಸಿ ಮತ್ಯಾರಾದಾದ್ರು, ಹೆಸರ ಹೇಳ್ತಾನೇನಂತ ಕೇಳಿದ, “ನಮ್ಮವ್ವ ಅಣ್ಣ” ಅಂತ ರಾಗ ಎಳದ, “ಹೂ ನೋ, ಹಿಂದ ಅದಾರ.” ಅಂದ ತನ್ನ ಅತ್ತಿಗಿ ಸುದ್ದಿ ಹೇಳದ ಪಾಂಡು ಬಗ್ಗೆ ಅನುಮಾನದಿಂದ, “ಅಲ್ಲಣ್ಣ ನಮ್ಮತ್ತಿಗಿ” ಅಂದ, ಯಾರೂ ಎಲ್ಲಾ ಇಬ್ಬರೆ ಇದ್ರು, ನಮ್ಮೂರಿನ ಸಿಂಧಿ, ರಾವಿ ಬೋವಿ ಮತ್ಯಾರ್‍ಯಾರೋ ಇದ್ರು ಅಂತ ಹೇಳಿ ಮಾವಿನ ಮರದ ಹಾದಿಯೊಳಗ ಮನ ಕಡಿಗ ಹೊಂಟ. ಜುಲ್ಪಾಗ ನಿರಾಶೆಯಾಯಿತು, ಮೆಲ್ಲಗ ಮನಿ ಕಡೀಗ ಹೊಂಟ, ಅವನಕ್ಕ ದೀಪ ಹಚ್ಚಿ ಕೊಲಾಣಿ ಸಪ್ಪನ್ನ ಆರಿಸತಿದ್ಲು, “ಬಂದ್ಲೇನೋ ಅವ್ವ” ಅಂದ್ಲು “ನಂಗೇನ ಗೊತ್ತು” ಅಂದ. “ಯಾಕೊ ಭಡಕೌ ಅವ್ವನ ನೋಡಿ ಬರ್‍ತೀನಂತ ಹೋಗಿದ್ದಲ್ಲೋ, ಏನಾತು.” ಅಂತ ಕಸಬರಗಿ ಅಂಡ ತಗೊಂಡು ಓಡಿದ್ಲು “ಏ ಬರಾಕ ಹತ್ಯಾಳಂತ ಸುಮ್ಕಿರು” ಅಂದವನೆ ಹೊರಗ ಓಡಿದ ಅವನಿಗಾಗೆ ಕಾದು ನಿಂತಿದ್ದ ಚೊಕ್ಕ. ‘ಎ’ ಅಂತ ಸನ್ನಿ ಮಾಡಿದ. ‘ಏನಲೇ’ ಅಂದ ಜುಲ್ಪಾ. “ಬರ್ಲಿಲೇನಲೇ ನಿಮ್ಮ ಕಲ್ತಿರೋ ಅತ್ತಗಿ.” ಅಂತ ಮೆತ್ತಗ ಕೇಳಿದ, “ ಏ ನಿನ್ನವ್ವನ ಹಿಂಗ್ಯಾಕ ಗುಸ್ ಪುಸ್ಸ್ ಅಂತಿ ಇನ್ನು ಬಂದಿಲ್ಲಾ, ನೋಡಬೇಕು ಅಂಡ.

ತಲಿಮ್ಯಾಲಿಂದ ಗಂಟ ಇಳಿಸಿದ್ಲು ಪ್ರೇಮವ್ವ, ಕಾಲಗ ಹಾಕ್ಕೊಂಡಿದ್ದ ಕರಿ ಬೂಟು ಕಳಚಿದ ಇರೂಪ, "ಲೇ ಜುಲ್ಪಾ ನೀರ ತಾರಲೆ" ಅಂದ. ಅವನ ಮಾತ್ರ ಹಿಂದ ಯಾರಾರು ಅದಾರೇನಂತ ನೋಡ್ತಿದ್ದ. ಚೊಕ್ಕ ಗೊಂದ್ಲಿ ಪಕ್ಕದಾಗ ನಿಂತಿದ್ದ. ಪಾರೋತಿ ಅವಸರದಿಂದಲೇ ಓಡಿ ಬಂದಿದ್ಲು. ಇಡಿ ಊರಿನ ಹುಡ್ರೆಲ್ಲಾ ಒಬ್ಬೊಬ್ಬರಾಗೆ ಬಂದು ಬಾಗಲದಾಗ ತುಂಬಿಕೊಂಡಿದ್ರು. ಗಂಗಜ್ಜಿ, ಎಲ್ಲಿ ದಾರಿ ಬಿಡ್ರೋ ಹುಡ್ರ, ಎನ ಬೆಲ್ಲ ಹಂಚಾಕ ಹತ್ಯಾರೇನು, ಈ ಹುಡ್ರದ ಎಲ್ಲಿಗ ಹೊದ್ರು ಇದ್ದೆ ಇರ್ತೈತಿ ನೋಡ", ಅಂತ ಗದರಿಸಿ ಮುಂದ ಹೋದ್ಲು. ಪ್ರೇಮವ್ವ, ಇರೂಪಗ ಮಂದಿ ಬರಾಕ ಹತ್ತಿರೋದು ಏನೂ ಅಂತ ತಿಳಿಯಲೇ ಇಲ್ಲಾ "ಬಾರಬೇ ಇತ್ಲಾಗ ತಗೊ ಗೋಣಿಚೀಲ" ಅಂದ ಇರೂಪ ದೊಡಮನಿ ಸಾವಿತ್ರಿ, ಹಿಂದ್ಲೂರ ಬಸವಿ ಮ್ಯಾಗಲೋಣಿ ನಂಜುಂಡಿ, ಇಡಿ ಗುಡಿಸಲ ತುಂಬ ತುಂಬಿಕೊಂಡ್ರು, ಜುಲ್ಪಾ, ಮೂಲಿಯೊಳಗ, ತಾನು ಬೆಳಗಿ ಜಳ ಜಳ ಮಾಡಿದ ಸಿಲಾವರಿ ಪಾತ್ರಿಯನ್ನ ದಿಟ್ಟಿಸಿ ನೋಡ್ತಾ ಕುಂತ್ತಿದ್ದ. ಸಿದ್ನಿಂಗನ ಹೇಣ್ತಿ ಥಾವರಿ, 'ಸರಿರಲೋ' ಅಂತ ಎಲ್ಲಾರನ್ನೂ ಸರಸಿ ಮುಂದಕ ನುಗ್ಗಿದ್ಲು. "ಪ್ರೇಮವ್ವೆಲ್ಲಿ ಸರಿರಲೋ ಎನ ಹುಡ್ರು ಅಂತೀನಿ. ನಿಮ್ದು ಎನ್ಯೆತ್ರಲೋ ಹೋಗ್ರಿ ಅತ್ಲಾಗ" ಅಂತ ಯಾರನ್ನೊ ನೂಕಿದ್ಲು. ಇಡಿ ಊರಿಗೆ ಯಡಮುಂಡ ಜಿನ್ನ ನೂಕಿಸಿಕೊಂಡು ಸುಮ್ಮನಿದ್ದಾನ. "ಏ ಥಾವರಿ ನಿಂದ ಏನೈತಿ, ಹೋಗ ಬಾ ಸಿದ್ನಿಂಗ ಬರ್ತಾನಿಗ ಹೆಂಡಕುಡ್ಕೊಂಡು ಮುದ್ದಿ ಕೋಲು ತಗೊಂತಾನ" ನೋಡಂದ. "ಎ ನಡಿರಿ ನಡಿರಿ ಹೊರಗ" ಅಂತ ಜುಲ್ಪಾನ ಅಕ್ಕ ಎಲ್ಲರನ್ನೂ ಹೊರಗ ಓಡಿಸಿದ್ಲು. ಮುದಿಕಿಯರು ಹೆಂಗಸರು ಇಡಿ ಮನಿ ತುಂಬಿಕೊಂಡಿದ್ರು, ಪ್ರೇಮವ್ವಗ ಆಶ್ಚರ್ಯ ಆತು, ಗಂಗಜ್ಜಿ "ಏನಾತಬೇ ನಮ್ಮ ಜುಲ್ಪಾ ಏನಾರು" ಅಂತ ಕೇಳಿದ್ಲು. ಏನೂ ಇಲ್ಲ ಪ್ರೇಮವ್ವ, "ನಿನ್ನ ಕಲ್ತ ಸೊಸಿ ಬರ್ತಾಳಂತ ಯಾರೊ ಅಂದ್ರು ಅದಕ್ಕ ನೋಡಿ ಹೋಗಾನಂತ ಬಂದ್ವಿ" ಅಂದ್ಲು. ಇರೂಪ, ಗಂಗಜ್ಜಿ ಮಾರಿನೋಡಿ ಮೀಸಿಯೊಳಗ ನಕ್ಕ, "ಯಾರಂದ್ರಬೇ ಏನಕಿತಿ ಅಂತೀನಿ" ಅಂತ ಇಡಿ ಪ್ರಕರಣ ಮುಚ್ಚಾಕ ನೋಡಿದ ಇರೂಪ. ನಮ್ಮ ಸಿದ್ನಿಂಗ ಮಧ್ಯಾಹ್ನ ಬಂದು ನಿಮ್ಮ ತಮ್ಮ ಜುಲ್ಪಾಗ ಹೇಳಿದ್ನಂತ ಮುಂಡೇದು ಖುಷಿಯಿಂದ ಊರಾಗ ಜೇಗದಾಡಿ ಸುದ್ದಿ ಮುಟ್ಟಸ್ಯೆತಿ ಅಂದ್ಲು ಥಾವರಿ ಸಿದ್ನಿಂಗನ ಹೇಣ್ತಿ. ಇರೂಪ ಜುಲ್ಪಾನ ಕಡಿ ನೋಡಿದ, ಜುಲ್ಪಾ ಪಾರೋತಿ ಕಡಿಗ ನೋಡಿದ. "ಆ ಸುಳ್ಳ ಸಿದ್ನಿಂಗಂದೇನು ಮದ್ವಿ ಮುಂಚೆ ಹುಡಗಿ ಹುಡಗನ ಮನಿಗ ಬಂದಾಳೇನು, ನಮ್ಮ ಮನಿ ತನದಾಗ ಅಂಥದು ನಡಿಯೋದಿಲ್ಲ ಬೀಡು" ಅಂದ್ಲು. "ದ್ಯಾವೂರಾಗ

ಸಿದ್ನಿಂಗು, ಊರಿಗ ಬರ್ತಾಳ ಅಂದಿದ್ದೆ ಅವನು ಇವತ್ತೆ ಬರ್ತಾಳಂತ ಹೇಳಿದ್ನೇನು, ಎಂಥ ಹುಚ್ಚ ಸಿದ್ನಿಂಗ ಇರ್ಬೇಕಂತೀನಿ. "ಅಂತ ಜೋರಾಗಿ ನಗತೊಡಗಿದ ಸೇರಿದ ಮಂದಿ ಗಾಂಬಾದ್ರು", ನಡಿರೆ ನಮ್ಮವ್ವ ಆ ಸಿದ್ನಿಂಗನ ಮಾತಕಟ್ಕೊಂಡು ನಾವು ಒಳ್ಳೆ ಕೆಲ್ಸ ಬಗಸಿ ಬಿಟ್ಕೊಂಡ ಬಂದಿವಲ್ಲಾ" ಅಂತೇಳಿ ವಾಪಾಸು ಮನಿಗ ಹೊಂಟ್ರು. ಜುಲ್ಪಾ ಮಾತ್ರ, ಒಲಿಯೊಳಗ ಬೆಂಕಿ ಉರದು ಬೂದಿಯಾಗೋದನ್ನ ನೋಡ್ತಾ ಒಂದೆರಡ ಗಂಟೆ ಮುಂಚೆ, ಕಂಡ ಕನಸನ್ನ ನೆನಪ ಮಾಡಿಕೊಳ್ಳತೊಡಗಿದ.

❖

## ೩. ಹೋರಾಟದ ಕೊನೆಗೊಂದು ದಿನ

ಹಳ್ಳದಿಂದ ಜಾಲಿ ಕಡದು, ದೆವ್ವನಂತ ಹೊರಿ ಕಟ್ಟಿದ ಬೀಮ್ಲಗ ಒಂದು ಮಿನಿಟು ಸಂಶಯಬಂತು, "ಹೊರಿ ಎನೋ ದೆವ್ವನಂತಾಗೈತಿ ಆದ್ರ ಹೊರೋದು ಹ್ಯಾಂಗ". ಮನಸಗಟ್ಟಿ ಮಾಡಿ ಹೆಗಲಮ್ಯಾಲ ಎತ್ತಿ, ತೆಲಿಮ್ಯಾಲ ಹಾರಸೋ ಮುಂದ ತಲಿಮ್ಯಾಲಿನ ಹರಕ ಪಂಜಿ ತುಂಡು ನೆಲಕ್ಕ ಬಿತ್ತು. "ಇದ್ದೋಳೆ ಕಾಡತೈತಿವನವ್ವನ" ಅಂದವನ ಬಿಗಿಯಾಗಿ ಸುತ್ತಿ. ಜೋರಾಗಿ ಕ್ಯಾಕರಿಸಿದಾಗ, ಗಂಟಲಾಗ ಸಿಕ್ಕೊಂಡಿದ ಕಫ, ಬಾಯಾಗ ಬಂತು ಜೊತಿಗ ಒಂದು ಸಲ ಸೂರ್ ಅಂತ ಮೂಗನೂ ಎಳದ, ಇದ್ದ ಸಂಬಳ ಬಾಯಾಗ ಬಂತು. ಉಗಳುವುರೋ ನುಂಗುವುದೋ ತಾಕಲಾಟದಾಗ, ಮತ್ತೊಂದ ಸಲಾ ಹೊರಿ ಅಲಗಾಡಿಸಿ ಬಾಯಾನ ಹೊಲಸು ಉಗಳಿದವನ ಎತ್ತಿ ತಲಿಮ್ಯಾಲ ಇಟಕೊಂಡು ನಾಕ ಮೈಲಿ ದೂರದ ಹರನಳ್ಳಿಗ ನಡ್ದ. ದೇಹದ ಎಲ್ಲಾ ಭಾಗದಾಗೂ ನೀರು ಹನಕಾಕತ್ತಿತ್ತು. ಗೋಣು ಹಿಡಕಂಡಂಗ ಆಗಿತ್ತು. ಆದ್ರೂ ಅನಿವಾರ್ಯ ಹೊರಲೇ ಬೇಕು ಇಲ್ಲಂದ್ರ ಹೆಣ್ತಿ ಮಕ್ಕಳು ತಣ್ಣೀರ ಬಟ್ಟಿ ಕಟಕೋ ಬೇಕಾಕತೈತಿ ಅಂತ ಗೊತ್ತಿತ್ತು.

ಧೇನ್ಯನ ಮನಿ ದಾಟತ್ತಿದ್ದ ಭೀಮ್ಲನ ಕಣ್ಣು ಗುದ್ದವ್ವನ ಗುಡಿ ಗಾರಿ ಕಟ್ಟಿಮ್ಯಾಲ ಕುಂತಿದ್ದ ಮಂದಿ ಕಡಿ ಹೊತು. ಯಾಕ ಕುಂತಾರ ಅಂತ ವಿಚಾರ ಮಾಡಕ ಪುರಸತ್ತಿಲ್ದ. ತಲಿಮ್ಯಾಲಿನ ಪೀಡ ಇಳಿಸಿದ್ರ ನೆತ್ತಿ ತಂಪಾದೀತು ಅಂದವನ ಇನ್ನೇನು ಮಾರದೂರ ಅಂತ ಮುಂದ ಹೆಜ್ಜಿ ಇಟ್ಟಿದ್ದ. "ದೇವ್ಲ, ಭೀಮ್ಲು, ಗೌಡ್ರು ನಿನ್ನ ಹೊಲದ ಸಂಬಂಧ ಬಂದಾರು ಬರಬೇಕಂತ." ಅಂದ ಭೀಮ್ಲು ನೆತ್ತಿ ಮತ್ತಾಟು ಉರಿಯಾಕತ್ತು. ಬೇರೆ

ಯಾರಾದ್ರು ಈ ಮಾತಂದಿದ್ರ ಸಹಿಸಿಕೊಳ್ತಿದ್ದ. ಆದ್ರ ಮನಿಮುರ್ಕ ದೇವ್ಲ ಅಂದಿದ್ದು ಸರಿಕಾಣಲಿಲ್ಲಾ ಇಡಿತಾಂಡನ ಹಳ್ಳ ಹಿಡ್ಸಿದ ದೇವ್ಲ–ಊರ ಹೆಂಗಸರನ್ನ ಗೌಡಗ ತಲಿಹಿಡಿದು, ಕಕ್ಕದೋರ ಬಾಯಿ ನೆಕ್ಕತ್ತಿದ್ದ. ದೇವ್ಲನ ಜೋಡಿ, ಪರಸ್ಯಾ ಒಟ್ಟಿ ಮಂಕಾಳು, ಸೇವು ಎಳೆಂಟ ಜನ. ಊರ ಮಂದಿ ಜೊತಿಗ ಸೇರಕೊಂಡು ಇಲ್ಲದ ಕಿತಾಪತಿ ಮಾಡ್ತಿದ್ರು ತಾಂಡದಾಗ. ಭಟ್ಟಿಸೇರೆ, ಸಣ್ಣಪುಟ್ಟ ಕಳ್ಳತನಕ ಕುಮ್ಮಕ ಕೊಡ್ತಿದ್ದ ಗೌಡ, ಅವರ ಆರಾಧ್ಯ ದೈವ.

ಭೀಮ್ಲ ವಿಚಾರ ಮಾಡ್ತಿದ್ದಂಗ ಮ್ಯಾಲಿಂದ ಕೆಳಗಿನ ಮಟ ಉರಿಕೀಳ್ತು. ಹೊರಿ ವಗ್ದವನ ನೀರು ಕುಡದ ನೆರ್ದಮಂದಿ ಹತ್ರ ಬಂದ. "ಭೀಮ್ಲ" ಮೀಸೆ ಹುರಿಮಾಡ್ತಿದ್ದ ಗೌಡ ಹೇಳಿದ "ನಿಮ್ಮಪ್ಪ ಹಿಂದ ನಮ್ಮಪ್ಪನ ಹತ್ರ ಸಾಲ ತಗೊಂಡಾನ ಅದಕ್ಕ ನಾ ಹೊಲ ಹಾಕೊಂಡೀನಿ". ಅಂತ ಅವೇ ಹಳೆ ಪುರಾಣದ ಕಂತೆಗಳನ್ನು ಬಿಚ್ಚಿದ. ಭೀಮ್ಲನ ತಲಿಬಿಸಿ ಕಮ್ಮಿ ಆಗಿದ್ದಿಲ್ಲಾ. ಬಾಯಿಗ ಬಂದಂಗ ಅಂದ. ತಾಂಡದ ಮಂದಿಗ ಹೆದರ್ಕಿ ಆತು, ಅವರಪ್ಪ ಅಜ್ಜನ ಕಾಲ್ದಿಂದ್ಲು ಗೌಡ್ರಂದ್ರ ಹೆದರಿ ಗಡಗಡ ನಡಗ್ತಿದ್ರಂತ. ತಾಂಡದ ಹುಡ್ಗೀರಂದ್ರ ಗೌಡ್ರಿಗ ಅದೇನೊ ಸಲಗಿ. ಅದ್ಕೆ, ಅವರ ಕೊನೆ ಸಂತತಿ ಜಂಬೇಗೌಡ, ಅವರಜ್ಜ ಐದ ಹುಡ್ಗಿರನ್ನ ಇಟಕ್ಕೊಂಡು ಅವರ ಜೀವನ ಹಾಳ ಮಾಡಿದ್ರ, ಅವರಪ್ಪ ಮದ್ವಿ ಆದವಳು ಚೆಂದ ಕಂಡ್ರ, ತನಗ ಬೇಕು ಅಂತಿದ್ನಂತ. ಅದೇ ಬುದ್ದಿ ಜಂಬೇಗೌಡನ ಹತ್ರ ಇದ್ರೂ, ಕಾಲ ಬದಲಾಗಿದಕ, ಹಿಂಗಂತ ತೋರ್ಸಿ ಕೊಡ್ದ ಒಳಗೆ ಸುರುಮಾಡಿದ್ದ. ಭೀಮ್ಲ ವದರಾಡಿದ್ದು, ಗೌಡಗ ಹಿಡಿಸಲಿಲ್ಲಾ. ತಾಂಡದ ಮಂದಿ ಅಂದಕೊಂಡಿದ್ರು, ಗೌಡಪ್ಪ, ಹೆಡಮುರಗಿ ಕಟ್ತಾನ ಈ ಭೀಮ್ಲಂದು ಅಂತ.

ಆವಾಗ ಬ್ಯಾಸಗಿ ರಜೆಪ್ರಾರಂಭ ಆಗಿತ್ತು. ಇಸ್ಕೂಲ ಹುಡುಗರು ತಾಂಡಾಕ ಬಂದಿದ್ರು, ತಾಂಡದ ಆಗು ಹೋಗುಗಳನ್ನ ಬಹಳ ಹಿಂದಿನಿಂದಲೇ ಗಮನಿಸಿದ್ರು. ಆದ್ರ ಆ ಸೂಕ್ಷ್ಮತೆಗಳು ಅರ್ಥ ಆಗ್ತಿರಲಿಲ್ಲಾ. ದೇವ್ಲ ಊರಾಗ ಮಾಡೋ ಕಿತಾಪತಿ ರಾಜಕೀಯ ಮಂದಿ ಕಡಿಂದ ರೊಕ್ಕ ತಗೊಂಡು ತಿಂಗಳ ಮಟ, ಮನಿಯೊಳಗ ಇದ್ದದ್ದು, ಇಲ್ಲದ್ದು ಸಾಮಾನ ಖರೀದಿಸಿ ಮಜಾ ಮಡೋ ಚಾಳಿ ಕಂಡರಿಯದ್ದೇನಲ್ಲ ಅವ್ರಿಗ. ಹಿಂದೊಂದ ದಿನ, "ತಾಂಡದ ಹೆಂಗಸರೂ, ಸೆರೆ ಕುಡಿಯಾಕ ಮನಿಯೊಳಗಿನ ಜೋಳ ಹತ್ತಿಮಾರ್ತಾ ಅಪಾರ, ನಮ್ಮೂರಿಗ ಸರಾಯಿ ಅಂಗಡಿಗ ಬ್ಯಾಡ" ಅಂತ ಸಾಲಿ ಕಲ್ತ ಹೈಕ್ಳು, ಸ್ಟ್ರೈಕ್ ಮಾಡಿ, ಊರಿಗ ಬಂದ ಜೀಪಿನ್ನ ಹಿಂದಕ ತಿರಗ್ಸಿದ್ರು. ಒಂದೆಲ್ಡ ಸಲ ಕಲ್ಲಿಲೆ ಹೊಡ್ದು, ಪೋಲಿಸರ ಕೈಯಾಗ ಹೊಡ್ತಾ ತಿಂದಿದ್ರು. ಅದೆಲ್ಲಾ ಆ ದೇವ್ಲನ ಕರಾಮತಿ ಯಾಕಂದ್ರ

ಖಂಡಾಪಟ್ಟೆ ರೊಕ್ಕ ತಾಂಡದಿಂದಲೇ ಹೊಗ್ತಾ ಇರೋದು ಸರಾಯಿದವರಿಗ, ಹಗಲು ರಾತ್ರಿ, ಕುಡ್ದು ಮಾಜಾ ಮಡೋ ಮಂದಿ ಸರಾಯಿ ಕುಡಿಯೊದನ್ನ ನಿಲ್ಸಿ ಬಿಟ್ರ ಸಾವುಕಾರನ ಗತಿ ಏನು? ಅಂತ ಊರು ಜನರನ್ನ ಸೇರ್ಸಿ ತಾಂಡದೊಳಗ ಒಂದು ವಿಚಾರ ಸಂಕಿರಣ ಏರ್ಪಡಿಸಿ, ಜೀಪು ಸರಾಗವಾಗಿ ಬರಬೇಕಾದ್ರ ದೇವ್ಲಗ ಸಂತಿ ಖರ್ಚಿ ಬಾಬ್ತು ಬರಾಕಬೇಕು. ಅದಕ್ಕ ಅವನು ತನಗ ಬೇಕಾದ ಮಂದಿ ಕೂಡ ನಮ್ಮ ರೊಕ್ಕ, ನಮ್ಮ ಮಾತು ಅನ್ನಿಬಿಟ್ಟಿದ್ದ. ಈ ಹುಡ್ರು, ಒಣನಿಷ್ಠುರ ಹೊತ್ತು ತಾಂಡದ ಸುದ್ದಿ ಬಿಟ್ರು. "ಹಳ್ಳಿ ಹಾಳಾದ್ರೆನು ದಿಲ್ಲಿ ಪಟ್ನದ್ರೆನೋ ತಮ್ಮಗಳ್ಯ" ಅಂತ ಪೀರಜ್ಜ ಸಮಾಧಾನ ಪಡ್ಸಿ, ಓದಾಕ ಕಳ್ಸಿದ್ದ ತಾಂಡದಾಗ ನಡಿಯೋ ಶೀತ್ಲ, ಕಾಳಿ ಮಾವಸಗಳಿಗೆಲ್ಲಾ, ದೇವ್ಲ ಮುಂದನಿಂತು ರೊಕ್ಕ ವಸೂಲಿ ಮಾಡಿ ಅರ್ಧ ಅರ್ಧ ಮಾಡಿಕೊಂಡು ಬಿಡ್ತಿದ್ದ ಅವನ ಜೋಡಿ ಮಗ ಕೆಂಪಮೀಸಿ ಥಾವ್ಯಾ ಸೇರಕೊಂಡಿದ್ದು, ತಾಂಡಕ್ಕ ಬಂದ ಅದೋಗತಿನ ಸರಿ. ಸುತ್ತಹಳ್ಳಿ ಮಂದಿ ತಾಂಡದ ಜನರನ್ನ ಕೂಲಿ ಕೆಲ್ಸಕ್ಕ ಹಚ್ಚತಿದ್ರು, ಇತಿತ್ಲಾಗ, ಅರೇಳು ಟಾಕ್ಟ್ರಿಗಳು ಊರಾಗ ಅಡ್ಡಾಡ ತೊಡಗಿದುವು. ಊರಾಗ ಬ್ಯಾರೆ ವಾತಾವರಣ ಸುರು ಆಗಿದ್ಕ, ಸಾಲಿಬಿಟ್ಟ ಹುಡ್ರು ಇರಸು ಮುರಸಿಂದ, ಎಲ್ಲಾ ವ್ಯವಹಾರಗಳಿಗ ಇತಿಶ್ರೀ ಹಾಡಿದ್ರು.

ಭೀಮ್ಲ ಹೆಣ್ತಿ ಮನಿಹೊಕ್ಕ ಹೊರಗ ಎಳಿತ್ತಿದ್ದ ಗೌಡ್ರ ಆಳು, ಸರ್ಪ, ಭರಮ, ಯಾರ ಮಾತು ಕೇಳಾಕ ಸಿದ್ದರಿರಲ್ಲಿಲ್ಲಾ. ತಾಂಡದ ಜನ, ತಾವು ಅಂದಕೊಂಡಂಗ ಆಗಾಕ ಹತ್ಯೆತಿ, ಅಂತ ಅನ್ಕೊಂಡ್ರು ಭೀಮ್ಲನ ಹೆಣ್ತಿ ಸೋಮ್ಲಿ ಮುಗ್ದ ಹುಡುಗಿ ಮಾನಕ್ಕಂಜಿ, ಮಕ್ಕ ತನ್ನ ಚಾಂಟ್ಯದಿಂದ ಮುಚಕೊಂಡಿದ್ಲು. ತಾಂಡದ ಜನ, ಬಣ ಬಣ ಅಂತ ಓಡಿ ಬಂದ್ರು, ತಮಗೇನು ಸಂಬಂಧ ಇಲ್ಲಾ ಅನ್ನೊ ಹಂಗ ಬೆಕ್ಕಸ ಬೆರಗಾಗಿ ನೋಡ್ತಿದ್ರು.

ದೇವ್ಲ ಮಾತ್ರ ಕಡ್ಡಿ ಆಡ್ಸಿದವನ, ಮಾಯ ಆಗಿದ್ದ ಆ ಹುಡ್ರು ಸುದ್ಧಿಮುಟ್ಟಿದ ಕೂಡ್ಲೆ ಭೀಮ್ಲನ ಮನಿ ಕಡಿ ಬಂದ್ರು ಅಸಾಹಾಯಕ ಹೆಣ್ಣನ್ನ ಚೌಡವ್ವಗ ಕುರಿ ಕೊಯ್ಯೆ ಮುಂದ ಕುರಿ ಹಿಡ್ದು ಎಳಿಯೋ ಹಂಗ ಎಳಿತಿದ್ರು ಅವರಿಗ ತಡಿಯಾಕ ಆಗ್ಲಿಲ್ಲಾ, "ಎ, ಸಾಮರ್ದಗಳ, ಒಂಟಿಹೆಣ್ಣನ್ನ ಎಳಿತಿರಲ್ರೋ, ಅಕಿ ಎನ ತಪ್ಪಮಾಡ್ಯಾಳ" ನಿಮ್ಮ ಗೌಡನ ಎದುರು ಮಾತಾಡಿದ್ದು, ಅಕಿ ಗಂಡ ಅವನ ಮ್ಯಾಲ ನಿಮ್ಮ ದೇನಿದ್ರು" ಅಂದ ಬಿಟ್ಟ ಒಬ್ಬ ಒಂಟಿಗಣ್ಣಿಂದ ಸರ್ಪ ಒಬ್ಬನ್ನ ನೋಡ್ದವನ ಸೋಮ್ಲಿ ಕೈ ಸಡಲಿಸಿದ ಅಂವ ಕೊಳ ಪಟ್ಟಿ ಹಿಡ್ದು ನಾಕ ಬಾರ್ಸಿದ. ಪಕ್ಕದಾಗ ನಿಂತಿದ್ದ, ಉಳಿದಿಬ್ಬರು ಸರ್ಪನ್ನ ಹಿಡಕೊಂಡ್ರು,

ಹರೆದ ಹುಡ್ರಿಗ ಹರೆದಾಟಿದ ಸರ್ಪ ಮತ್ತ ಅವನ ಗೆಳೆಯ ಇಡಆದಾರ. ಹುಡ್ರು ಹಿಗ್ಗಾಮುಗ್ಗಾ ಹೊಡ್ದು ಮರಕ್ಕ ಕಟ್ಟಿ ಹಾಕಿದ್ರು, ತಾಂಡದ ಮಂದಿ ಬಾಯಿಬಿಟಕೊಂಡು ಹುಡ್ರಕತಿ ಮುಗೀತು, ಉರಿತಿದ್ರು ಮಕ್ಕಳು, ಗೌಡನ ಸುದ್ದಿಗ ಹೋಗ್ಯಾರಂದ್ರ ಬದಕೋದಿಲ್ಲಾ, ಅಂತ ದೇವ್ಲನ ಚೇಲಾಗಳು ಸಂದಿ ಸಂದಿಯೊಳಗ ಮಾತಾಡಕತ್ತಿದ್ರು ಆ ಮೂವರು ಹುಡುಗರು ಊರಿನ ಸಂದಿ ಸಂದಿ ಶೋಧಿಸಿ, ದೇವ್ಲನ ಎಳಕೊಂಡು ಬಂದವರ ಅಂಗಿ ಕಳದು ಹುಣಸಿಮರಕ್ಕ ಕಟ್ಟಿ ಬೆಲ್ಲದ ಪಾನಕ ಚೆಲ್ಲಿದ್ರು.

ಸುದ್ಧಿ ತಿಳದ ಗೌಡಪ್ಪ ತಾಂಡದ ಮಟ ಓಡಿ ಬಂದಿದ್ದ ಕಾಲ ಬದ್ಲಾಗಿದ್ದು ಈಗ ತಿಳೀತು ಅವಂಗ ಹಿಂದೊಮ್ಮೆ ಒಡ್ಡರ ಕೇಸಿನ್ಯಾಗ. ಇನ್ಸ್‌ಪೆಕ್ಟರ್ ಕಾಲು ಮುರಿಯಾಕ ಹೋಗಿ ಹೀರೋ ಆಗಿದ್ದ. ಗೌಡಪ್ಪ ಹ್ಯಾಂಗಾರ ಮಾಡಿ. ರಾಜಿ ಮಾಡಕೊಳ್ಳ ನೋಡ್ತಿದ್ದ. ಹುಡುಗರ ತಾಕತ್ತು ಗೊತ್ತಾತ್ತು. ತನ್ನ ಆಳುಗಳು ಮಾಡಿದ್ದು ತಪ್ಪ, ತಾನು ಕರೆದು ಕೊಂಡು ಬರಾಕ ಹೇಳಿದ್ದೆ, ಅವರು ಇಂತ ನೀಚ ಕೆಲ್ಸ ಮಾಡ್ಯಾರ. ತಪ್ಪಾತು ಅಂತ ಹುಡ್ಗರ ಹತ್ರ ಕೇಳಕೊಂಡವನ, ತಾಂಡದ ಉಸಾಬರಿ ಬ್ಯಾಡ ಅಂತ ನಾಕವರ್ಷ ತಾಂಡದ ದಾರಿ ಮರತಿದ್ದ ಗೌಡಪ್ಪ.

ನಂತರ ದಿನಗಳಲ್ಲಿ–ತಾಂಡದ ಮಂದಿ ಈ ಹುಡ್ಗರನ್ನ ನೋಡೋ ದೃಷ್ಟೀನ ಬ್ಯಾರೆ ಆತು. ದೇವ್ಲ ಹೇಳ್ದೆಕೇಳ್ದ ಜಾಗ ಖಾಲಿ ಮಾಡಿದ್ದ. ಹುಡ್ರು ಮತ್ತ ತಮ್ಮ ಪಾಡಿಗ ತಾವು ಸಾಲಿಗ ಹೊಂಟಹೋದ್ರು. ಬಿ.ಎ.ದ ಮಟ ಕಲ್ತ ಒಬ್ಬ ಮಾತ್ರ ಅಣ್ಣತಮ್ಮರ ಜಗಳ್ದಾಗ, ಮನಿಮಂದಿ ಬ್ಯಾರೆ ಆಗಿದ್ಕ ಅವರಪ್ಪ ಅವ್ವನೋಡ್ಕೋಳ್ಳಾಕ ಯಾರು ಇಲ್ದಕ, ಕಾಲೇಜು ಬಿಟ್ಟು ತಾಂಡದಾಗ ಉಳ್ದ. ತಾಂಡ ಅಷ್ಟೇ ಅಲ್ಲಾ, ಗೌಡನ ಉಸಾಬರಿಗ ಬ್ಯಾಸರಾಗಿದ್ದ ಊರಿನ ಜನ, ತಮ್ಮ ತಾಂಡದಾಗೂ ಗೌಡ್ರ ದಬ್ಬಾಳಿಕೆಗೆ ಎದಿಕೊಟ್ಟು ನಿಲ್ಲೋ ಗಂಡ್ಸರು ಅದಾರಂತ ಮನವರಕೆ ಮಾಡಕೊಂಡ್ರು.

ಬೀಮ್ಲ ಅವಾಗ್ಲೆ ಹೊಡ್ತಾ ತಿಂದು ಸಪ್ಪಗಾಗಿದ್ದ. ಅವನ ಹೆಣ್ತಿನ ಮನಿಂದ ಹೊರಗ ಎಳದ ಸುದ್ದಿ ಅಂವಗ ಮುಟ್ಟಿದ್ದು. ಜಾಲಿಕಟಗೀನ ಪ್ಯಾಟೀಗ ಒಯ್ದುಮಾರಿ ವಾಪಾಸ ಬಂದಿಂದ ರಕ್ತ ಕತಕತ ಕುದಿಯಾಕತ್ತಿತ್ತು ಸುದ್ಧಿ ಕೇಳಿ. ರೂಪ್ಲಿ ಗಂಡನ ಕೊಳ್ಳಾಗ ಕೈ ಹಾಕಿ ಗೊಳೋ ಅಂತ ಅಳಾಕ ಸುರು ಮಾಡಿದ್ಲು, ಭೀಮ್ಲ ರೂಪ್ಲಿಗ ಸಮಾಧಾನ ಪಡೆಸೋದ್ರಾಗ ಸಾಕ ಸಾಕಗಿ ಹ್ವಾದ. ಅಕಿ ಅಳೋದ ಕೇಳಿ ಓಣಿ ಮಂದಿ ಬಂದು ಸೇರಿತ್ತು. ಬಹಳ ಹೊತ್ತು ಬೀಮ್ಲ ಮಾತಾಡ್ಲಿಲ್ಲಾ, "ಈ ಊರಾಗ ಗಂಡಸರಿಲ್ಲಾ, ಎಲ್ಲಾ ಹೆಣ್ತಿ ಭಾಡತಿನ್ನೋರದಾರ." ಹೊರಗ ಬಂದ ಎಮ್ಮಿಕರ ಬಿಚ್ಚಿ ಇನ್ನೊಂದು ಗೂಟಕ

ಕಟ್ಟಿ ದರದರ ಎಳದ, ಬಂಥಕರ ಜಗ್ಗದಂಗ ಹಿಂದಕ ಜಗತ್ತಿತ್ತು ಪಕ್ಕದಾಗ ಬಿದಿದ್ದ ಹೊಳಕಿ ಕಟಗಿ ತಗೊಂಡವನ, ದಬ ದಬ ಹೆರದ. ಭೀಮ್ಲ ಅದರ ಪರಿಣಾಮ ಊಹಿಸಲಿಲ್ಲಾ. ಆರೇಳ ತಿಂಗಳ ಕರ, ಇನ್ನೂ ಎಳಪಿತ್ತು, ಅವನ ಹೊಡ್ತಕ್ಕ ಬೆನ್ನ ಹಿರಿ ಮುರ್ದಿತ್ತು. ರೂಪ್ಲಿ ಓಡಿಬಂದವಳ "ಅಯ್ಯ ಅದಕ್ಯಾಕ ಹೊಡಿತಿರಿ ಬಿಡ್ರಿ ಯಾರ್‍ದೊಸಿಟ್ಟ ಯಾರ್‍ದಾರ ಮ್ಯಾಲ ತಗಿತೀರಲ್ಲಾ" ಅಂದ್ಲು. ಒಂದ ಸಲ ಸಿಟ್ಟಿಲೆ ನೋಡ್ದಾ, "ಹಿಂಗ, ಹಿಂಗ ಹೊಡ್ದಿದ್ರು ನಾಕ ತಿಂಗಳ ಹಿಂದ, ಹಿಂಗ ಹೊಡ್ದಿದ್ರು." "ಮುಗಲ ನೋಡ್ದ, ಇವತ್ತು ರೂಪ್ಲಿನ ಎಳಕೊಂಡು ಹೊಂಟಿದ್ರಂತ." ರೂಪ್ಲಿ, ಪಕ್ಕಕ ಬಂದು ಸಮಾಧಾನ ಪಡಸಿದ್ಲು ಸುದ್ಧಿ ತಿಳದ ಆ ಹುಡುಗ ಓಡಿಬಂದಿದ್ದ, ಭೀಮ್ಲ ಅವನ ಕಾಲ ಹಿಡಕೊಂಡ್ದ, ಯಣ್ಣಾ ನೀ, ಬಬ್ನ ಈ ತಾಂಡಾದಾಗ ಗಂಡು. ನನ್ನ ಹೇಣ್ತಿನ ಉಳಿಸಿದೆ, ದಾರ್‍ಯಾಗ ಸುದ್ದಿ ಗೊತ್ತಾತು ಏನಪ ಅಂದ್ರ, ನಾವು ಬಡವರು, ತಲಿಎತ್ತಿ ಅಡ್ಡಾಡಂಗಿಲ್ಲಾ.

"ನೋಡು ಭೀಮ್ಲ–ನಿನ ಹೆಣ್ತಿ ನನಗ ಅಕ್ಕನ ಸಮಾನ ನಾನು ನನ್ನ ಅಕ್ಕನ್ನ ರಕ್ಷಣೆ ಮಾಡೀನಿ ಅಷ್ಟೆ ಮತ್ತೇನು ಮಾಡೀನಿ. ಇನ್ನ ನೀವು ನಿಮ್ಮ ಹಳೆ ದಂಧೆಗಳನ್ನ ಬಿಟ್ಟು ಮರ್ಯಾದಿಯಿಂದ, ನಿಮ್ಮ ನಿಮ್ಮ ಹೊಲನ ಹೊಡ್ದು, ಉತ್ತ ಬಿತ್ತಿ ಬೆಳದು ಉಣ್ಣೋದು ಕಲೀರಿ ಇನ್ನಾರ. ನಾವು ಎಲಿಂದ ಬಂದೀವಿ. ಗುಡ್ಡದಾಗ ಕಟಗಿ ಹೊತ್ತು, ಬದಕ್ತಿದವ್ರು, ಈಗ ನಾಗರೀಕರಾಗಿವಿ. ಚೂರು ಪಾರು ಇರೋ ಜಮೀನಿನ್ಯಾಗ ತೃಪ್ತಿ ಜೀವನ ಸಾಗಸೋದನ್ನ ಕಲೀರಿ, ಇನ್ನ ಮುಂದ ನಿಮ್ಮ ತಂಟೀಗ ಯಾರು ಬರೋದಿಲ್ಲಾ. ನೀವು, ನಿಮ್ಮ ಹೊಲ ಹೊಡಿರಿ ನಾನಿರ್ತಿನಿ ಅಂತ ಸಮಾಧಾನ ಪಡಸಿದ. ಬೀಮ್ಲಗ ಜೀವ ಬಂದಾಂಗಾತು.

ಹುಡುಗರೆಲ್ಲಾ ಉಳಿದ ಯುವಕರ ಜೊತೆಗೆ ಸೇರಕೊಂಡು, ನಮ್ಮ ಊರನ್ನ ನಾವು ಬದ್ರ ಪಡಸೋದು ಹ್ಯಾಂಗಂತ ವಿಚಾರ ನಡಸಿದ್ರು. ಕೂಲಿಕೆಲ್ಸಕಂತ ಹೋಗು ಹುಡುಗಿಯರು ತಮ್ಮ ಕೆಲಸದ ಕಡಿಗಷ್ಟ ಲಕ್ಷ ಕೊಡಬೇಕು ಯಾವಾನಾರ, ಅವರ ಉಸಾಬರಿಗ ಹ್ವಾದ್ರ ಕಾಲತಗದ ಬಿಡೋದು ಅಂದ, ಒಬ್ಬಂವss, "ನೋಡ್ರಪ್ಪ ಕಾಲತಗದು ದಕ್ಕಸ್ಕೋಳೋ ಅಷ್ಟ ತಾಕತ್ತು ನಮ್ಮ ಹತ್ರ ಇಲ್ಲಾ. ನ್ಯಾಯವಾಗಿ ಬದಕಾನ ನಮಗ ಬದಕಾಕ ಬಿಡ್ರಿ ನಿಮ್ಮ ಹರಗ ಬದಕ್ತೀವಿ ಅಂತ ಕೇಳಾನ, ಅಂತಿ ಮೀರಿ, ಗಾಂಚಾಲಿ ಮಾಡಿದ್ರ, ಕಟಗಿ ಕಡಿಯೋ ಮಂದಿ ನಾವು ಕಟಕಿ ಕಡ್ದಂಗ ಕಡ್ದಬಿಡಾನಂತ," ಅಂದ ಒಬ್ಬ ನಾವು ಒಂದಾಗಿದ್ರ ಜನ ಅದಕ್ತಾರ ನಮ್ಮನ ಕಂಡು. ನಾವೇನು ಇವತ್ತಿದ್ದು ನಾಳೆ ಸಾಲಿಕಲಿಯಾಕ ಹೋಗಿ ಬಿಡ್ತಿವಿ ಆದ್ರ ನೀವು ಈ ಊರಲ್ಲೇ ಬದುಕಿ ಬಾಳಿ ಮುಂದ

ನಿಮ್ಮ ಮಕ್ಕಳಿಗ ದಾರಿ ಮಾಡಿಕೊಡೋರು. ಈ ನಿರ್ಣಯಗಳನ್ನು ನೀವು ಮಾಡಬೇಕು. ಮತ್ತೊಬ್ಬ ಹೇಳಿದ ಒಂದ ಮಾತು ನೆನಪಿರಲಿ ಯಾರೋ ಹೆದರ್ಸಿ ಬೆದರ್ಸಿದ್ರು ಇವತ್ತ ಸೇರಿ ಮಾಡಿರೋ ನಿರ್ಣಯಕ್ಕ ತಲಿಬಾಗಲೇ ಬೇಕು. ನಾವು ಮುಂಗಾರಿ ಮಳಿ ಬಿದ್ದಾಗ ನಮ್ಮ ಹತ್ರ, ಇರೋ ಹೊಲಗಳ್ನ ಕಾಳಿಗ ಒತ್ತಿ ಹಾಕೊಂಡು ನಮ್ದು ಅಂತ ಮಾಡಕೊಂಡಿರೋರ ವಿರುದ್ಧ ಹೊಡ್ದಾಡಿ ಪಡಿಯೋದು ನಮ್ಮ ಕೈಯಾಗೈತಿ. ಯಾರಿಗೂ ಹೆದರೋ ಅವಶ್ಯಕತೆ ಇಲ್ಲಾ ಅಂತ ಜಬರ್ದಸ್ತಿ ಮೂರನೇಯವ  ಮಾತ ಮುಗಿಸಿದ

ತಾಂಡದ ಎಲ್ಲಾ ಹುಡ್ರು ಮುದಕರನ್ನ ಹೆಂಗಸ್ಸರನ್ನ ಎಳಕೊಂಡ ಹೋಗಿದ್ರು ಪೋಲಿಸರು, “ಅಲ್ರೋ, ನಿಮ್ಮಜ್ಜಂದ್ರು ಮಾರಿರೋ ಹೊಲನಾ, ನೀವು ಈಗ ನಮ್ದು ಅಂದ್ರ ಹ್ಯಾಂಗ” ಅಂದ್ರು ಇನ್ಸ್‌ಪೆಕ್ಟರ್ ಕರಿಂಸಾಬ್, ಅವನಿಗೆ ಸಿಟ್ಟ ಬಂತು, “ಸಾಹೇಬ್ರ ನೀವೇನರ ವಿಟ್ನೆಸಿಗ ಸಹಿ ಹಾಕಿದ್ರೇನು ಅವಾಗ” ಅಂದ ಬಿಟ್ಟ. “ಎ, ನಾನೂರ್ರೈವತ್ತು ಆ ಮಗ ಭಾರಿಮಾತಾಡಾನ, ಎಳಕೊಂಡ ಬಾ ಅವನ್ನ” ಅಂದ್ರು. ಬೀಗ ತಗದವರ, ಅವನ  ಕೊಳಪಟ್ಟಿ ಹಿಡ್ದು ಇನ್ಸ್‌ಪೆಕ್ಟರ್ ಹತ್ರ ಬಿಸಾಕಿದ. ಅವನು ಸಿಟ್ಟಿಲೆ ಕುದ್ದರೂ. ಏನೂ ಮಾಡುವಂತಿಲ್ಲಾ. ಹೊಡದ ಹೊಡ್ತಗಳಿಗ ಮೈಕೊಟ್ಟ ನಿಂತ. ಅವನು ಹೊಡ್ತ ತಡಿಲಾರ್ದ ಮೂರ್ಛೆ ಹೋದ.

ಉಳಿದೋರು ಸುದ್ಧಿ ತಿಳದು ತಾಂಡಕ್ಕ ಓಡಿಬಂದ್ರು ಇಡಿ ತಾಂಡ ಬಣ ಬಣ ಅಂತಿತ್ತು. ನೇರ ಪೋಲಿಸ್ ಠಾಣಕ್ಕ ಹೋದವರ, ಅವನನ್ನ ಮತಾಡಸ್ಕೊಂಡು ವಕೀಲರನ್ನ ನೇಮಸಿ, ಅಟ್ರಾಸಿಟಿಕೇಸ ಹಾಕಿದ್ರು. ಬೆಳಕರಿಯೋದ್ರಾಗ ತಾಂಡದ ಮಂದಿ ಎದ್ನೊ ಬಿದ್ನೊ ಅಂತ ಓಡಿ ಬಂದ್ರು. ಈ ಹುಡ್ರ ಉಸಾಬರಿ ಬ್ಯಾಡ್ರೋಯಪ್ಪ ಇವರ ಮಾತ ಕಟಕೊಂಡು ಹ್ವಾದ್ರ ನಮಗೆ ಬೂಟಿನ ಹೊಡ್ತಾಮತ್ತ ಬಿಳ್ತಾವ ಅಂದವರ, ಕೆಲ ಜನ, ಹಳೆ ಪೆಟಾರಿ ಟ್ರಂಕ ಹೊತಕೊಂಡು ಚಿಕ್ಕ ಮಂಗ್ಳೂರಿನ ಕಾಫಿ ಬೀಜದ ತ್ವಾಟಕ ಕೆಲ್ಸಕ ಹೊಂಟರು, ಊರ ಮಂದಿ ವಲಸೆ ಹೊಂಟಿದ್ದು ತಮ್ಮಿಂದ್ಲೆ ಅಂತ ಬಹಳ ಬ್ಯಾಸರಾತು, ಜನಕ್ಕ ತಿಳಿ ಹೇಳಾಕ ಪ್ರಯತ್ನ ಪಟ್ರು ಆಗಲಿಲ್ಲಾ, ಇದಿನ್ನು ಮುಂಗಾರಿ ದಿನ ಯಾರು ಕೆಲ್ಸಕ ಹಚ್ಚತಾರ ನಿಮ್ಗ, ಒಂದು ಮಾತು ಕೇಳ್ರಿಲ್ಲಿ, ಆ ಛಳಿಯಾಗ, ಮಳಿಯಾಗ ಮಕ್ಕಳು ಮರಿನ ಯಾಕ ಬಲಿಕೊಡ್ತೀರಿ. ನಾವು ಮಾಡಿದ್ದು ತಪ್ಪಾತು. ನಿಮಗ ಹ್ಯಾಂಗ ತಿಳಿತೈತಿ ಹಂಗಿರ್ರಿ ಅಂತ ಮತ್ರ್ಯಾ ಹೊಡ್ತದಿಂದ ಬಾಡಿರೋ ಮುಖ ನೋವಾದ್ರೂ ದೈನ್ಯದಿಂದ ಬೇಡಕೊಂಡ. ನೋಡಪ್ಪ, ನೀವು ನಾಕ ಅಕ್ಷರಕಲ್ತೋರು



ಲೋಕದ ರೀತಿ ರಿವಾಜು ತಿಳದೋರು. ಎಲ್ಯಾದ್ರೂ ಬದಕ್ತೀರಿ, ಇದು ಹೊಸದೇನಲ್ಲಾ, ನಮ್ಮ ಸ್ವಸ್ಥಾನ ಇದಂತು ಅಲ್ಲಾ ನಮ್ಮಜ್ಜ ಮುತ್ತಜ್ಜ ಹಿಂದ ಜಿಪ್ಸಿಗಳಂಗ ಎಲ್ಲಿಂದಲೋ ಬಂದವರು ನಾವು ಹಕ್ಕಿ ಪಕ್ಷಿಗಳ ಹಂಗ ನೀರು, ಆಹಾರ ಎಲ್ಲಿ ಸಿಗತೈತೋ ಅಲ್ಲಿ ಬೀಡು ಬಿಡೋರು. ನಾವು ಹಕ್ಕಿಗಳಂಗ ಅಂತ ಮುದುಕ ಪೀರ್‍ಯಾ ಅಂದ. ಭೀಮ್ಲಾಗ ಸಿಟ್ಟ ತಡಿಯಾಕ ಆಗ್ಲಿಲ್ಲಾ. ನೀವು ಸಿಟ್ಟಿಲ್ಲದ, ಸ್ವಾಭಿಮಾನಿಲ್ಲಿದ ಜನ, ಸರಾಯಿ ಕುಡ್ದು, ನಿಮ್ಮ ಹೆಣ್ತಿ ಮಕ್ಕಳನ್ನು ಬೇಕಾರ, ಸರಾಯಿ ಸಲವಾಗಿ ಗೌಡ್ರಮನಿಗ ಕಳಸೋರು, ಕಟ್ಟಿರೋ ಈ ಊರನ್ನ ನರಕಮಾಡಿ ಬ್ಯಾರೆ ಕಡೀಗ ಗುಳೆ ಕಿತ್ತಿರಲ್ಲಾ. ನಿಮ್ಗ ಒಂಚೂರರ ಸಂಬಂಧ ಅನ್ನೋದ ಐತೇನು, ನಿಮ್ಮ ಹಳೆ ಅಭ್ಯಾಸಗಳನ್ನ ಬಿಟ್ಟ ಹೊಸದಿಕ್ಕಿಗ ಬರ್ರಿ ಅಂದ್ರ ತೆಪ್ಪೇನು. ಸರಿ ನಿಮ್ಗ ತಿಳ್ದಂಗ ಬದಕ್ರಿ, ಯಾರು ಅಡ್ಡಿ ಬರೋದಿಲ್ಲಾ, ಈ ಅಡ್ಡಮಳಿಗಾಲ್ದಾಗ ನಿಮ್ಮ ಮಕ್ಕಳು ಮರೀನ ಬಲಿಕೊಡಬ್ಯಾಡ್ರಿ. ಬೀಮ್ಲನ ಮಾತಿಂದ ನಾಕ ಮಂದಿಗ ಚುರಕತ್ತಿದಂಗಾತು. ಬೀಮ್ಲ ನೀ ಹೇಳುದು ಸರಿ ಐತಿ, ಆದ್ರ ಮತ್ತ ಪೋಲೀಸರ ಕೂಡ ಬೂಟಿಲೆ ಹೊಡ್ತಾ ತಿನ್ನೋದಂದ್ರ ಆಗಾಣಿಲ್ಲ ನೋಡು, ಅಂದ ದಾಮ್ಲ. ಮತ್ರ್ಯಾ ಏನೋ ಹೇಳ ಬೇಕಂತಿದ್ದ, ಅಷ್ಟರಾಗ ಬೀಕ್ಯ ರಾಕು ಬಂದವರ ಎಲ್ರಿಗೂ ಸಮಾಧಾನ ಹೇಳಿ ತಮ್ಮ ಪಾಡಿಗ ತಾವಿರೋದು ಅಂತ ನಿಶ್ಚಯಿಸಿದ್ರು.

ನಾವೇನೋ ನಾಕಕ್ಷರ ಕಲ್ತು ಎಲ್ಲಾ ಪೊಳ್ಳಗಳನ್ನ ಬಲ್ವಿ, ಆದ್ರ ಈ ತಾಂಡದ ಮಂದಿ ಸುಧಾರಿಸಬೇಕಾದ್ರ, ಅವರು ನಮ್ಮಂಗ ಕಲೀಬೇಕು, ಈ ಪರಿಸ್ಥಿತಿಯೊಳಗ ನಮ್ಮ ಬಿಸಿರಕ್ತದ ವಿಚಾರಗಳು ಫಲ ನೀಡೋದಿಲ್ಲಾ ಅಂತ ನಿರಾಶೆಯಿಂದ ಹೇಳ್ದ ರಾಕು. ನಾವು ಹ್ಯಾಂಗು ನೀರಾಗ ಇಳ್ದಿವಿ ಛಳಿಗ ಅಂಜಿದ್ರ ಕೆಲ್ಸ ಆಗಾಣಿಲ್ಲ ನಾಳೆ ಭೀಮ್ಲನ ಹೊಲ್ದಾಗ ಗಳೆಕ ಹೋಗನ ಒಯ್ದು ಹೊಡ್ದರ ನಮಗ ಹೊಡಿಲಿ ಅದೆಲ್ಲಿವರಿಗ ಹೊಡಿತಾರ ಹೊಡಿಲಿ ಅಂದ, ಮತ್ರ್ಯಾ ಬೀಕು, ಹೌದು ಅಂದ.

ಹದವಾಗಿ ಮಳೆಯೊಂದು ಹಿಡ್ದಿತ್ತು ಭೀಮ್ಲ ಮುಂಜಾನೆ ಜಲ್ದಿ ನಿನ್ನ ಹೊಲ್ದಾಗ ನೀ ಗಳೆ ಹೂಡು ನಾವು ಸ್ವಲ್ಪ ಹೊದಿಂದ ತಾಳೆ ತಗೊಂಡ ಬರ್ತೀವಿ ಅಂತ ಹೇಳಿದ್ರು ಜಾತ್ರ್ಯ ಮತ್ರ್ಯ ರಾಕು ಮುಂಗೋಳಿ ಕೂಗೋದ್ರಾಗ ಭೀಮ್ಲನ ಗಳೆ ಹೊಲ ಹೊಡಿಯಾಕತಿತ್ತು. ತನ್ನ ಹೊಲ್ದಾಗ, ತಾನು ರಂಟಿ ಹೊಡಿಯೋ ಮುಂದ ಭೀಮ್ಲಗ ಎದಿ ಎಬ್ಬಿತ್ತು. ಲಕ್ಷ್ಯಪೂರ್ತಿ ರಂಟಿ ಎತ್ತು, ಜ್ವಾಳಹಾಕಿ ಖಂಡಗ ಜ್ವಾಳ ಬೆಳಿಯೋದ್ರಾಗ ಇತ್ತು. ಪಳ ಪಳನ ಹೊಳಿಯೋ ಮುತ್ತಿನಂತ ಜ್ವಾಳದ ತೆನಿಗಳನ್ನು ಬ್ಯಾರೇರ ಹೊಲ್ದಾಗ

ನೋಡಿದ್ದ. ಅದು ತನ್ನ ಹೊಲ್ದಾಗ ಇರೋ ಹಂಗ ಕನಸ ಕಂಡಿದ್ದ. ರೂಪ್ಲಿ ತಾನು ತನ್ನ ಮಗಳು ಚಿನ್ನಿ ಕುಂತು ತಮ್ಮ ಹೊಲ್ದಾಗ ದುಡ್ದು, ಪಡದ ಜ್ವಾಳದ ರೊಟ್ಟಿ ಗಡದ್ದಾಗಿ ತಿನ್ತಿರೋ ಕನಸ ಕಾಣ್ತಿದ್ರು. ಸದ್ದಿಲ್ಲದೆ ಬಿದ್ದ ಹೊಡ್ತರ ಹಿಂದ ಹೊಳ್ಳಿ ನೋಡಾಕ ಹೋಗಿ, ಮುಗರಿಸಿ ಮುಂದ ಬಿದ್ದು ಮಣ್ಣು ಮುಕ್ಕ ತೊಡಗಿದ. ಹೊಡ್ತದ ರಭಸಕ್ಕ ಕಿವಿ, ಮೂಗನಿಂದ ರಕ್ತ ಸೋರಾಕತ್ತಿತ್ತು. ಒಂದೇ ನಿಮಿಷ ಪೂರ್ತಿ ಎಚ್ಚರತಪ್ಪಿ ದೇಹ ಜಡವಾಗಿತ್ತು.


ಗಡಬಿಡಿಯಿಂದ ತಾಂಡದ ನಾಕ ಹುಡ್ರನ್ನ ಕರ್ಕೊಂಡು ಗಳೆ ಕಟ್ಟಿಸಿಕೊಂಡು ಛಲಬಿಡದ ಮಲ್ಲಿರ ಮೂವರು ಹುಡ್ರು ಮುಂಚೂಣಿಯಲ್ಲಿ ಹೊಂಟಿದ್ರು. ಬೀಮ್ಲನ ಗಳೆ ಹೂಡಿದ ಎತ್ತುಗಳು ರಂಟಿ ಎಳಕೊಂಡು ಮನಿ ಕಡಿಗ ಹೊರಟಿದ್ದು ಆಶ್ಚರ್ಯ ಆತು, ಎತ್ತ ಬಿಟ್ಟ ಭೀಮ್ಲ ಎಲ್ಲಿ ಹ್ವಾದ. ಯಾಕೋ ಅನುಮಾನ ಬಂತು ಓಡಿದ್ರು ಓಡಿದ್ರು ಕಲ್ಲು ಮುಳ್ಳು ಹೆಂಟಿ ನೋಡ್ದ. ಓಡಿ ಓಡಿ ಬೀಮ್ಲನ ಹೊಲಕ ಬರೋದ್ರಾಗ ಹೆಣಕ್ಕ ನೋಣ ಮುತ್ತಿದ್ವು. ಊಹಿಸದ ಸಾವು ಸಂಬವಿಸಿರೋದಕ್ಕ ಮತ್ರ್ಯ, ಬೀಕ್ಯ, ರಾಕು ದಂಗ ಬಡ್ದು ನಿಂತ್ರು.

ತಾಂಡದ ಮಂದಿ ಅರ್ಧಕದ ಮುಂದಬಂದ್ರು ನೋಡ್ರಿದು. ಪೋಲಿಸರು ಅಡ್ಡಾಡೋದನ ತಾಂಡದ ಮಂದಿ ಗಾಬರಿಯಿಂದ ನೋಡ್ತಿದ್ರು. ದೇವ್ಲ ಮಾತ್ರ ಪೋಲೀಸರ ಹಿಂದಿಂದ ಎಲ್ಲಾ ಮಾಹಿತಿನು ಕೊಡ್ತಿದ್ದ. ಮೂವರು ಹುಡ್ರನ್ನ ಜೈಲಿಗೆ ಹಾಕಿದ್ರು. ಕೋರ್ಟು ವಿಚಾರಣೆ ತಮ್ಮ ಪಾಡಿಗೆ ತಾವೆ ಆದ್ವು. ಹಣ ಅಧಿಕಾರದ ಮುಂದ ಹೋರಾಟ ಮಾಡೋ ಪುಟಗೋಸಿ ಹುಡ್ರು ಬಿರುಗಾಳಿ ತಡಿಯಾಕ ಹೊಂಟ ಸಾಹಸ ಮಾಡ್ತಂಗಿತ್ತು. ತಾಂಡದ ಮಂದಿ, ರೂಪ್ಲಿ ಈ ಮೂವರೆ ಭೀಮ್ಲನ ಸಾವಿಗ ಕಾರಣ ಅಂದಾಗ ನಿಂತ ನೆಲ ನಡಗಿದ ಅನುಭವ ಆತು.

ರೂಪ್ಲಿ ಮನಿಮುಂದ ಗೌಡನ ಆಳು ಸರ್ಪ ನಿಂತಿದ್ದ. ಗೌಡ ಸಂತಾಪ ಮಾತುಗಳಿಂದ ರೂಪ್ಲಿ ಮನ್ಸನ ತನ್ನ ಕಡಿಗ ಎಳದಕೊಳ್ಳಾಕ ನೋಡ್ತಿದ. ರೂಪ್ಲಿ ಕಲ್ಲಾಗಿದ್ಲು. ಕೆಂಪ ಕೆಂಪಗೆ ದುಂಡದುಂಡಗಿದ್ದ ಇಪ್ಪತ್ತೊಂದರ ರೂಪ್ಲಿ ಗೌಡನ, ತಳ ಬುಡನೆಲ್ಲಾ ಅಲ್ಲಾಡ್ಸಿದ್ಲು. "ತನ್ನ ಸಾಮರ್ಥ್ಯ ಗೊತ್ತಾಗ್ಯೆತೀಕಿಗ ಅದ್ಕ ಸುಮ್ನದಾಳ", ಅಂತ ಗೌಡ ಆಕ್ರಮಣಕ ಅಣಿಯಾಗಿದ್ದ ಅವಳ ಮೌನವನ್ನು ಸಮ್ಮತಿ ಅಂತ ತಿಳಕೊಂಡಿದ್ದ. ಆದ್ರೇ ಅವನು ಮಾಡಿದ ದೊಡ್ಡ ತಪ್ಪು. ಮುಂದೊಂದು ನಿಮಿಷ ಗೌಡ ಯೋಚನೆ ಮಾಡಬೇಕಂದ್ರ, ಅವನ ರುಂಡ ಮುಂಡದ ಮ್ಯಾಲಿರ್ಲಿಲ್ಲ. ಗೌಡ ಕಿಸಕ್ ಪಿಸಕ್ ಅನ್ದ ಸತ್ತ ಹೋಗಿದ್ದ,

ಸರ್ಪ ಬರಮನ್ನ ಬೆನ್ನತ್ತಿ ಕೊಚ್ಚಿ ಹಾಕಿದ್ಲು. ಕಟನಿ ಹೊರಿಹೊತ್ತ ಹೊತ್ತ ಕಲ್ಲಬಂಡಿಯಾಂತೆ ಗಟ್ಟಿಮುಟ್ಟಾಗಿದ್ದ ಹೆಂಗ್ಸು ರೂಪ್ಲಿ, ಕಟಗಿ ಕಡಿಯೋ ಮುಚ್ಚಿಂದ ಗೌಡನ್ನ ಮತ್ತವನ ಪಾಪದ ಸಂತಾನವನ್ನ ಕೊಚ್ಚಿ ಹಾಕಿದ್ಲು. ಲಚ್ಚಿನ ಆದಮಿ ಹಿಡಕೊಂಡು ಹೆಣ್ಣ ಹುಲಿಯಂಗೆ ಓಡಿದಳು, ಗಂಡಸರೇ ಇಲ್ದ ಊರಾಗ ಬದಕೋದಕ್ಕಿಂತ ಕಾಡನ್ಯಾಗ ಪ್ರಾಣಿಗಳ ಜೊತಿಗ ಬದಕೋದು ಪಾಡಂತ. ಬದುಕಿನ ಹೋರಾಟದ ಕೊನೆಗೊಂದು ದಿನ ಹೀಗೆ ಭಯಾನಕವಾಗಿರತೈತಿ ಅಂತ ಕನಸ ಸಹ ಕಂಡಿದಿಲ್ಲಾ ಅವಳು.

❖



## ೪. ಅಪ್ರಾಪ್ತ ಪಿಂಡ.

ಗುಂಡಿಬಾವಿಯಲ್ಲಿ ಬಿದ್ದ ಮಗು ಗಂಡಾಗಿತ್ತು. ಸೂರಪುರದ ಸುಶೀಲೆಯರೆಲ್ಲರೂ ಬಾವಿಯ ಸುತ್ತಲೂ ನೆರೆದಿದ್ದರು, ಮೀನುಗಳು ತಿಂದಿದ್ದ ಮಗುವಿನ ದೇಹವನ್ನು ಕಂಡು ಅಯ್ಯೋ ಶಿವನ, ಎಂದು ಮನಸಿಗೆ ಬಂದಂತೆ ಮಾತಾಡುತ್ತಿದ್ದರು. ಈ ಅಪ್ರಾಪ್ತ ಪಿಂಡವನ್ನು ಸ್ಖಲಿಸಿದವಳು ಮಾತ್ರ, ಯಾವ ಮೂಲೆಯಲ್ಲಿ ಕುಳಿತು ತನ್ನ ಪಾಪದ ಹೊಣೆಗಾಗಿ ಪರಿತಪಿಸುತ್ತಿದ್ದಳೊ. ಯಾವ ವೀರ ಪುರುಷನ ವೀರಾವೇಷದ ಫಲವೋ. ಯಾವ ನತ ದೃಷ್ಟಿ ತಾಯಿಯ ಒಡಲೊಳಗ ಬೆಳೆದ ಈ ಗಂಡು. ಕಣ್ಣು ಬಿಟ್ಟು ವಾಸ್ತವ ಲೋಕದ ಸತ್ಯವನ್ನು ಅರಿಯುವ ಮುನ್ನವೆ, ಉದರದಿಂದ ಹೊರ ಬರಲು ಹಾತೊರೆಯುವ ಮೊದಲೆ ಒಳಗಿನ ಅಂಧಕಾರದಿಂದಲೆ ಹೊರಟು ಹೋಗಿದ್ದ. ಎಲಿ ಮಾರುವವರ ಓಣಿ ಜನ, ಕುರುಬರು, ಬ್ಯಾಡರು, ಮಾದರು, ಮುಸ್ಲಮಾನುರು, ಒಡ್ಡರು ಹೀಗೆ ಊರಲ್ಲಿಯ ಎಲ್ಲಾ ಕೇರಿಯ ಹೆಣ್ಣು ಗಂಡುಗಳು, ಜಾತ್ರೆಯೋ ಪರಸಿಯೋ ಎನ್ನುವಂತೆ ಬಾವಿಯೊಳೆಗೆ ಬಿದ್ದ ಗಂಡು ಕೂಸಿನ ಕೊಳತ ದೇಹ ನೋಡಲು ನೂಕು ನುಗ್ಗಲಾಗಿ ಹರಿದು ಬರುತ್ತಿದ್ದರು.

ಮಾದರ ಚೆನ್ನಿ, ಬ್ಯಾಡರ ಲಿಂಗಿ, ಹುಸೇನ್ ಬಿ, ಸೇರಿಕೊಂಡು ಯಾವ 'ಬಿಕನಾಸಿ" ಕೆಲಸ ಇರಬಹುದು ಎಂಬ ಪಿಸುದನಿಯೊಳಗೆ ಮಾತಾಡತ್ತಿದ್ದರು. ಊರ ಹರೆಯದ ಹುಡುಗಿಯರು ಅವರ ಹಾದರದ ವಿಷಯಗಳ ಗಹನ ಚರ್ಚೆಗೆ ಕಾರಣವಾದ ಮಗು ಇಡೀ ಸೂಪುರಕ್ಕೆ ಒಂದು ಯಕ್ಷ ಪ್ರಶ್ನೆಯಾಗಿತ್ತು? ಕೆಲವರು ಖಂಡಿತ ಈ ಊರಿಂದು

ಅಲ್ಲಾ ಎಂದು ಘೋಷಿಸಿದರು. ಮತ್ತೆ ಕೆಲವರು ಒಂದ ವಾರದ ಹಿಂದೆ ಊರಿಗೆ ಬಂದ ಕಾರೊಂದರ ಮೇಲೆ ಸಂಶಯ ತಾಳಿದರು. ಊಹ ಪೂಹಗಳೆಲ್ಲವುಗಳ ಮಧ್ಯ ತಮ್ಮೂರಿಂದ ಕಾಲೇಜು ಕಲಿಯಲು ಹೋಗುವ ಹುಡುಗಿಯರು ಎಲ್ಲರ ಕಣ್ಣುಗಳ ಮುಂದೆ ಸುಳಿದಾಡಿದರು. ಅದ್ಯಾವಳೋ ಬಾಬಿ ಅನ್ನೋ ಹುಡುಗಿ ಪ್ಯಾಟಿಹುಡಗನ ಜೊತೆ ಸಂಬಂಧ ಇಟಕೊಂಡು ಅವನ ಜೊತೆ ಸಿನಿಮಕ್ಕ ಬೇರೆ ಹೋಗಿದ್ಲಂತ. ಕದ್ದು ಕದ್ದು ಕಾಲೇಜು ತಪ್ಪಿಸಿ ಅವನ ಖೋಲಿಗೂ ಹೋಗಿ ಕಣ್ಣಾ ಮುಚ್ಚಾಲೇ ಆಟ ಆಡ್ತಿದ್ಲಂತ. ಅಂತ ಪೀರುಸಾ, ದಂಡ್ಯಾ ಪಕ್ಕ, ಸದಾ, ಮದಾ, ಮತಾಡ್ಕೊಂತಿದ್ರು. ಈ ಹುಡಗ್ಯಾರಿಗ ಬ್ಯಾರೆ ಊರ ಮಂದಿ ಅಂದ್ರ ಯಾಕ ಇಟೊಂದ ಚಟಾನೋ ಅಂತಿನಿ


ಇದೇ ಊರೊಳಗ ಕಲ್ಲಿ ಮೀಸೆ ಬಿಟ್ಟ ನಾವೆಲ್ಲರೂ ಪುಂಡರಂತ ತಿಳಕೊಂಡಂಗಿದೆ ಅಂತ ತಮ್ಮ ಪೌರುಷದ ಬಗ್ಗೆ ಮಾತಾಡ್ತಿದಂಗ ಪೋಲಿಸ್ ಜೀಪು, ನಗರಸಬಾ ಪ್ರೆಸಿಡೆಂಟು ಸಾಗಣ್ಣೋರು, ಹೊಟಲ್ ಮುಲ್ಲಾ ಸಾಬಿ, ಹೊಟ್ಟೆ ಬಸವ ಹಳೆ ಮೊಡಕ ಜೀಪಿನಿಂದ ಇಳಿದು ರಾಜಕೀಯ ನಮಸ್ಕಾರ ಮಾಡ್ತ ನೆರದ ಜನರ ನಡುವಿನಿಂದ ಗಾಂಧಿ ಟೋಪಿಯನ್ನು ಸರಿಪಡಿಸುತ್ತ ನತದೃಷ್ಟ ಶಿಶುವನ್ನ ನೋಡಲು ಮಂತ್ರಿಗಳ ದಿಮಾಕಿನಲ್ಲಿ ಬಾವಿ ಕಡೆ ಹೊರಟರು. ಅಂಗಾತ ಬಿದ್ದುಕೊಂಡ ಎಳೆಂಟು ತಿಂಗಳ ಮಗು ಬಲಿಷ್ಠವಾಗಿ ಇತ್ತು. ಮೀನುಗಳು ಕಣ್ಣುಗಳನ್ನು ಮೂಗನ್ನ ತಿಂದು ವಿಕಾರ ಗೋಳಿಸಿದ್ದರಿಂದ, ಚಹರೆ ಸರಿಯಾಗಿ ಕಾಣುತ್ತಿರಲಿಲ್ಲಾ. ಯಾರೋ ಹಿಂದಿಂದ "ನಮ್ಮ ಪ್ರೆಸಿಡೆಂಟರ ಕೆಲ್ಸಾನ ಇರಬೇಕಿದು ಆ ಲಚ್ಚಿ ಮಗಳು ಹನಮಿ ಮೈನೆರವಾಗ ರೊಕ್ಕ ಕೊಟ್ಟು ಕಾರ್ಯ ಮಾಡಿಸಿದ್ರಂತ", ಅಂದಿದಕ ಕಸಿವಿಸಿಗೊಂಡ ಸಾಗಣ್ಣ ಪೋಲಿಸರಿಗೆ ಈ ದೇಹವನ್ನು ತೆಗೆಸಿ ಕಾರ್ಯಕ್ರಮ ಮುಗಿಸಿ ಬಿಡಿ ಎಂದು ಹೇಳಿ, ಹೆಚ್ಚು ಹೊತ್ತ ಹಾಗೇ ನಿಂತರ ಖಂಡಿತ ಈ ದೇಹಕ್ಕೂ ನನಗೂ ಸಂಬಂಧ ಕಲ್ಪಿಸಿ ಆಡಿಕೊಳ್ಳವುದು ಖಚಿತ ಪಡಿಸಿಕೊಂಡು ಜಾಗ ಖಾಲಿ ಮಾಡದ.

ಮುಗಿಲಲ್ಲಿ-ಕಾಗೆ ಹದ್ದುಗಳು ಹೆಣದ ಸಲುವಾಗಿ ಕಾಯುತ್ತಿದ್ದವು. ಎಳೆ ದೇಹದ ಮಾಂಸ ಎಳದಷ್ಟು ಚೊಂಚಿಗೆ ಬರುವುದರಿಂದ ತಿಂದು ರುಚಿ ಸವಿಯುವ ಸಲುವಾಗಿ, ವಿಮಾನದಂತೆ ಹಾರಾಡುತ್ತಿದ್ದವು. "ಏನ್ ಹಲ್ಕಾ ಕಾಲಾ ಬಂತಯವ್ವ, ಮದವಿಗ ಮುಂಚ ಈ ಪಾಪ ಮಾಡ್ತಾವು ಕಾಲಕೆಟ್ಟ ಹೊತು. ಕಾಲ ಸಂಪೂರ್ಣ ಕೆಟ್ಟ ಹೊತು," ಕೆಂಪ ಹನ್ಮಜ್ಜಿ ಬೊಚ್ಚ ಬಾಯಿಂದ ಹೇಳಿದ್ದು, ಮಜಾ ಅನ್ನಿದಕ್ಕೆ, ಅಲ್ಲೆ ನಿಂತಿದ್ದ ಹರೆಯದ ಹುಡುಗರು, "ಬೇ ಮುದುಕಿ ನಿನ್ನ ಕಾಲನ ಬ್ಯಾರೆ ಈ ಕಾಲನ ಬ್ಯಾರೆ ನೀ

ಇಂತಹದನ್ನೆಲ್ಲಾ ನೋಡ ಬಾರ್ದು ನಡಿ, ನಾಳೆ ನೀನು ಹಿಂಗ ಟೀಕಿಟ್ ತಗಸಾಕಿ ಅದಿ" ಗೇಲಿ ಮಾಡಿದರು. "ಐ ಬಾಯಿ ಮುಚ್ಚರ್ರೋ, ನಿಮ್ದು ಹೇಳಾಕ ಬಂದಿರಲ್ಲಾ"ಎಂದು ಸಿಡುಕಿ ಕಂಬಿ ಕಿತ್ತಳು. ಕೊಳತ ದೇಹ ತೆಗೆಯಲು ಪೋಲಿಸರಿಗೆ ಇನ್ನೂ ಅಪ್ಪಣೆ ಬಂದಿರಲಿಲ್ಲಾ. "ಇನ್ನು ನಮಗ ಕುಡಿಯಾಕ ನೀರಿನ ಗತಿ ಏನಪ್ಪ ಇದಿದ್ದ ಸಿಹಿ ನೀರಿಂದು ಇದೊಂದ ಬಾವಿ, ಆ ಪಾಪಾತ್ಮೆ ಬಾವಿಯಲ್ಲೆ ಬಿಸಾಕಬೇಕೆ?" ಎಂದರೆ ಮತ್ತೆ ಕೆಲವರ ತಕರಾರು, "ತಾನು ಅಪವಿತ್ರಳಾಗೋದು ಅಲ್ದೆ ಗಂಗಮ್ಮನ್ನ ಅಪವಿತ್ರ ಮಾಡಿದ್ಲಲ್ಲಾ ಇಡಿ ಸೂಪುರನ ಅಪವಿತ್ರ ಮಾಡ್ತಲ, ಆ ಹೆಣ್ಣು." ಕೆಲಮಂದಿ ಮಾತಡ ತೊಡಗಿದರು.

ಸೂಪುರ ಒಂದು ಸಣ್ಣ ತಾಲೂಕ ಆದ್ದರಿಂದ ಅಲ್ಲಿಯ ಪ್ರತಿಯೊಂದು ಸಣ್ಣ ಘಟನೆನೂ ಒಂದೊಂದು ರೂಪವನ್ನ ತಳೆದು ಬಿಡುತ್ತಿತ್ತು. ಮನ್ನೆ ಕೆಳಗಿನ ಕೇರಿ ಹುಡುಗರು ಊರ ಮಧ್ಯೆ ಇರುವ ಕೂಡು ರಸ್ತೆಗೆ ನಿಂತು ಏನೋ ಹೇಳಿದ್ದು ಇಡಿ ಊರಿಗೆ ಪುಕಾರಾಗಿ ಊರ ಮಂದಿನ ಒಂದಾಗಿ ಹೊಡಿಯಲು ಬಂದಾಗ, ನುಣ್ಣಗೆ ಜಾರಿ ಕೊಂಡಿದ್ದರು. ಈ ವಿಷಯದೊಳಗ ಊರು ಬಲುಗಟ್ಟಿ. ಎಲಿ ಮಾರೋ ಓಣಿ ಹುಡುಗ ಪಟ್ಟೆಗಾರರ ಅಂಗಡಿಯೊಳಗ ಸೀರೆ ಕದ್ದನೆಂದು ಕರೆಂಟ್ ಶಾಖ್ ಹೊಡೆಸಿದ್ದಕ್ಕ ಹೊಸ ಓಣಿ ಮಂದಿ ಎಲೆ ಮಾರುವ ಓಣಿ ಜನರ ಜತೆಗೆ ಸೇರಿ ಕೊಂಡು ಅಂಗಡಿಗ ಬೆಂಕಿ ಹಚ್ಚಿದ್ದ ಸೂಪುರದ ಹೆಸರನ್ನ ಸುತ್ತಲೆಲ್ಲಾ ಪ್ರಚಾರಗೊಳಿಸಿತ್ತು. ಪೋಲಿಸರು ಊರ ತುಂಬ ಪಹರೆ ತಿರುಗಿ ಇಡಿ ಊರನ್ನ ನರಕ ಮಾಡಿದ್ದರು. ಗುಲಾಬ್ ಸಾಬಿ ಮುಂಜಾನೆ ಹೆಗಲ ಮ್ಯಾಲ ನೊಗ ಹೊತ್ತ ಹೋಗಲು ಹೆದರಿ, ಮೂರುದಿನ ಗಳೆ ಕಟ್ಟವುದನ್ನೆ ನಿಲ್ಲಿಸಿ, ಕರಿಂನಿಂದ ಹೊಡ್ತಾತಿಂದಿದ್ದ. ಹೀಗೆ ಪ್ರತಿಯೊಂದು ಘಟನೆಗಳು ದೈತ್ಯರೂಪ ತಳೆಯುತ್ತವೆ. ಇನ್ನೂ ಈ ಕೂಸಿನ ಕತೆಗೆ ಬಣ್ಣ ಕಟ್ಟೊಮಂದಿ ಅದೆಷ್ಟೊ. ಯಾರೋ ಒಬ್ಬ ತಾನು ಸ್ವತಃ ಕಂಡೋನ ಹಂಗೆ "ಅದೇ ಆ ಸುರಸುಂದ್ರಿ, ನಮ್ಮ ಹೊಸ ಓಣಿ ಹುಡುಗರ ನಿದ್ದಿ ಕೆಡ್ಸಿರೋಳು, ಹೂಂ ಅಕೀನ ಅದ್ಯಾರೋ ಮಾಸ್ತರನ ಜೋಡಿ." ಮಾತು ತುಂಡಾದ್ದು ಇಡಿ ಊರಿಂದೂರೆ ಗರಬಡದಂಗೆ ಸುಂದಾಗಿತ್ತು. ಪಂಚಾಯ್ತಿ ಆಫಿಸನೋರು, ತಹಸಿಲ್ದಾರ ಆಫಿಸಿನೋರು, ಮುನ್ಸಿಪಾಲ್ಟಿ ಮಂದಿ, ಪೋಲಿಸರು ಬಾಯಿಂದ ಆಫೀಸಿನ ಮಟ ಎಡತಾಕಾಕ ಸುರು ಮಾಡಿದ್ರು. ಗಲ್ಲಿ ಗಲ್ಲಿಯೊಳಗ ಮಂದಿ ಮಾತಗಳು ರಂಗೇರಿದ್ದು ಹದಿಹರೆಯದ ಹುಡುಗಿಯರ ಬದುಕು ಹೀನಾಯವಾಗಿತ್ತು. "ನೀ ಕಾಲೇಜಿಗ ಹೋಗಿ ಕಡದು ಕಿಸಿಯೊದ ಆಟ್ರಾಗೆ ಐತೆ ಮುಚ್ಚಂಡ ಮನಿಯೊಳಗಿರು" ಎಲ್ಲಾರ ಮನಿಯಲ್ಲೂ ಇವೆ ಮಾತಗಳು.

ಸಲಕಿಗ ಎಲುಬಿನ ಹಂದರ ಸಿಗೋದಕ್ಕೂ ಸರಿಹೋತು. "ಅಯ್ಯಪ್ಪ, ಮನುಷ್ಯನ ದೇಹ". ಪಕ್ಕೀರ ಬಿಟ್ಟವನೆ ಓಡಿದ. ಬಾವಿಯೊಳಗಿ ನಾಲ್ಕು ಜನ ಗಾಬ್ರಾದ್ರು, ಹೊರಗಿನ ಮಂದಿನ ಕೂಗಿಹೇಳಾಕ ಬಾಯಿ ಇಲ್ಲದಂಗಾಗಿತ್ತು. ಯಾರೋ ಹೆಂಗಸನ್ನ ಕೊಂದು ಕಲ್ಲುಕಟ್ಟಿ ಬಾವಿಯೊಳಗ ಬೀಸಾಡಿ ಎಷ್ಟು ವರ್ಷಗಳಾಗಿದ್ದಾವೋ ಯಾರಿಗ ಗೊತ್ತು. ಕಲ್ಲುಕಟ್ಟಿರೋದರಿಂದ ಹೆಣ ಮ್ಯಾಕ ಎದ್ದಿಲ್ಲ. ನಾಲ್ಕ ಮಂದಿ ಹೆದರಿಕೆಯೊಳಗೂ, "ಯಾರೋ ಇದು?" ಹನಮ ಕೇಳಿದ. "ಯಾಮನಿಗೊತ್ತು?" ಪಕ್ಕೀರ ಹೇಳಿದ. "ಅಂದ್ರ ಈ ಹೊಸೋಣಿ ಮಂದಿ ಈ ಕಮಳದ ನೀರನ್ನ ಕುಡದು ಕೃತಾರ್ಥರಾಗ್ಯಾರನ್ನು, ಸೂಳಿಮಕ್ಕಳು ತಾವು ಭಾಳದೊಡ್ಡೋರು ತಮ್ಮ ಜಾತೀನೆ ದೊಡ್ಡದಂತ ಮೇರಿತಿದ್ರು, ಯಾವದೋ ಹೆಂಗಸಿನ ಕೊಳತನೀರು ಕುಡದಾರ." ಖುಷಿ ಪಟ್ಟತಾಳ. "ಅಲ್ಲ ನೀರ ವಾಸನಿ ಬರ್ತಿಲಿಲ್ಲೇನು?" ಕೇಳಿದ. ಶಂಬು, "ಎಲ್ಲಾ ಆದೇವರಿಗೆ ಗೊತ್ತು." ಪಕ್ಕೀರ ಮಾತಾಡ್ಕೊಳ ತಲೆ ಅಸ್ಥಿಪಂಜರವನ್ನು ಎತ್ತಿ ಬಕೀಟಿಗೆ ಹಾಕಿದ್ರು, ಮೇಲಿದ್ದೋರು ಕಂಡೋರೆ ಹೌಹಾರಿದರು. ಪೋಲಿಸ ಇನ್ಸ್‌ಪೆಕ್ಟರ್, "ಛೇ, ಇದು ಪೋಲೀಸ್ ಕೇಸ್ ಕಣ್ರೆ, ಇದನ್ನ ತಗೊಂಡ ಹೋಗಿ ಆಸ್ಪತ್ರಿಯೊಳಗ ಇಡ್ರಿ, ಯಾ ಮಗಮಾಡ್ದ ಅಂತೇಳಿ ಪತ್ತೆ ಹಚ್ತೇನಿ. ಆ ಮಗನ್ನ ಏರೋಪ್ಲೆನ್ ಹತ್ತಿಸಿ ಬಾಯಿ ಬಿಡಸಲಿಲ್ಲಾಂದ್ರೆ ನಮ್ಮಪ್ಪನ ಮಗನೇ ಅಲ್ಲ". ಹುಸೇನಿ ತನ್ನ ಪೊಲೀಸ್ ಬುದ್ಧಿ ತೋರಿಸಿದ ಮನಿಯೊಳಗಿದ್ದ ತಹಸಿಲ್ದಾರ್, ಜೀಪ್ ಹತ್ಕಂಡ ಓಡಿ ಬಂದೇ ಬಿಟ್ಟ. "ಸಾರ್, ಇದು ಪಂಚನಾಮ ಆಗಬೇಕು" ಹುಸೇನಿ ಹೇಳಿದ. "ನಾಳೆ ಬೆಳಕ ಹರಿಯೊದ್ರೊಳಗ ಇದನ್ನ ದಫನ್ ಮಾಡಲಿಕ್ರ ಮಂದಿ ನಮ್ಮ ಪಂಚನಾಮೆ ಮಾಡ್ತಾರ. ಎಲ್ಲೇ ಪಂಚನಾಮೆ ಹಚ್ಚಿರ, ಮದ್ಲು ಧಫನ್ ಮಾಡ್ರಿ" ಒಂಟೆಲಿಮಠ ಬರಬಹುದಾದ ಗಂಡಾಂತರ ತಪ್ಪಿಸಾಕ ನೋಡ್ದ. "ದಯ್, ಯಾರು ಚಕಾರ ಎತ್ತಬಾರ್ದು. ಬಾಯಿ ಬಿಟ್ರೆ ನಿಮ್ಮ ಮೇಲೆ ಕೇಸ ಪಿಟ್ ಮಾಡ್ಸಿ ಬಳ್ಳಾರಿ ಜೈಲಿನ ಕಳಸ್ತೀನಿ." ಒಂದ ಅವಾಜ್ ಹಾಕ್ದ ತಹಸಿಲ್ದಾರ್. ಹುಸೇನಿಗ ಮಾತ್ರ ಸಮಾಧಾನ ಆಗಲಿಲ್ಲಾ. ಆದರೆ, ತನ್ನ ಹಿರಿಯ ಅಧಿಕಾರಿ ಹೇಳಿದ ಮ್ಯಾಲ ತನ್ನದೇನು ನಡೆಯೊದಿಲ್ಲಾಂತ ತಿಳ್ಕಂಡವನೆ, ಆ ಅಸ್ಥಿಪಂಜರ ತಗೊಂಡು ಸ್ಮಶಾನಕ ಹೊಂಟೇ ಬಿಟ್ಟ, "೪೨೦, ೩೬೦, ನಮ್ಮ ಸ್ಟೇಷನ್‌ನೊಳಗೆ ಯಾವುದಾದ್ರು ಮಿಸಿಂಗ್ ಕೇಸ್ ಬುಕ್ಕ್ ಆಗಿದೆ ನೋಡ್ರಿ", ಜಾಸೂಸಿ ಆರಂಭ ಮಾಡಿದ್ದ, ರಾತ್ರೋರಾತ್ರಿ ಹೆಣ ಹೂಳಿ ಬಂದಾದ ಮೇಲೆ ಆಲೋಚನೆ ಸುರು ಆತು. ಅಲ್ಲ ಈ ಮಂದಿನೀರನ್ನ ಹೆಂಗಾರು ಕುಡದಿರಬೇಕು ಅಂತೀನಿ.



ಅಪ್ರಾಪ್ತ ಪಿಂಡವನ್ನು ಸ್ಖಲಿಸದವಳಿಗೆ ಹೆಂಗಸರೆಲ್ಲಾ ಸೇರಿ ಶಾಪ ಹಾಕ ತೊಡಗಿದ್ರು ಅಕಿ ಮಾತ್ರ ಮನಿಯೊಳಗೆ ಅಡಿಕೊಂಡು ಸತ್ತ ತನ್ನ ಪಿಂಡಕ್ಕೆ ಕಾರಣನಾದ ಬೇವರ್ಸಿ ಗಂಡನ ಷಂಢತನಕ್ಕೆ ಸಾಕ್ಷಿಯಾದ ತನ್ನ ಖಾಲಿಗರ್ಭವನ್ನು ನೋಡುತ್ತ ನೊಂದಿಕೊಳ್ಳ ತೊಡಗಿದ್ದಳು. ಇಂಥ ಸಾವಿರಾರು ಪಿಂಡಗಳ ಹಣೆಬರವೆ ಅಂಥಹದ್ದು. ಹುಟ್ಟುವ ಮುಂಚೆ ಮುಳುಗಿಹೋಗುತ್ತವೆ. ಯಾಂತ್ರಿಕ ಬದುಕು ಮತ್ತೆ ನಿರಂತರವಾಗಿ ಎಲ್ಲಾ ಯಾತನೆಗಳನ್ನು ಮರೆಸಿ ಬಿಡುತ್ತದೆ. ಈ ಸಣ್ಣ ತಾಲೂಕಾದ ಸೂಪುರದಲ್ಲಿ ಗಲ್ಲಿಗಳ ರಸ್ತೆಗಳು ಎಲ್ಲಿಗೆ ಹೋದರು ಒಂದೇ ವೃತ್ತಕ್ಕೆ ಬಂದು ನಿಲ್ತಾರೆ. ಬಸ್ಟಾಂಡ್ ಪಕ್ಕದ ಕಾಮತ್ ಹೊಟೇಲ್ ಸಂತೆ ಮಾಳದ ಹಾಸ್ಪಿಟಲ್, ಪಕ್ ತಹಸಿಲ್ದಾರ್ ಆಫೀಸು ಅಂಟಿಕೊಂಡರಿಗೆ ಪೋಲೀಸ್ ಕಛೇರಿ ಎದುರಿನ ಒಂದೇ ಗಲ್ಲಿ ದೊಡ್ಡದು. ಮಂದಿ ಎಲ್ಲೇ ಹೋದ್ರು ಅವುಗಳ ಸುತ್ತಲೇ ಗಿರ್ಕಿ ಹೊಡಿಬೇಕು ಹಂಗಾಗಿ ಮಾತುಗಳು ಅಲ್ಲಲೇ ಪ್ರತಿಧ್ವನಿಸಿ ಸುಳ್ಳೆಲ್ಲ ಸತ್ಯವಾಗಿ ಮಾರ್ಪಡುತ್ತವೆ. ಬಹುತೇಕ ಸುದ್ದಿಗಳಲ್ಲಿ ಇಲ್ಲಿ ತಪ್ಪುಗ್ರಹಿಕೆಯಿಂದಲೆ ಹರಿಡಿರುವಂತಹವುಗಳು. ಇಲ್ಲಿ ಈ ಸಾಂಕ್ರಾಮಿಕ ಸುದ್ಧಿಗಳನ್ನ ಹರಡೋದಕ್ಕೆ ದೊಡ್ಡ ಗುಂಪೆ ಇದೆ. ಇಂತ ಸುದ್ಧಿಗಳು ಯಾರು ಹೇಳೊದೆ ಬೇಡ ಇಲಿ ಹೋದದ್ದು ಹುಲಿ ಹೋದಂಗೆ ಸುದ್ಧಿಯಾಗುತ್ತೆ.

ಮಂದಿ ಕಡಿಮೆಯಾಗ್ತಿದ್ದರಿಗೆ ಮುನ್ಸಿಪಾಲ್ಟಿ ಕೊಟ್ರಿ, ಬಾವಿಯೊಳಗ ಇಳಿದು ಕೂಸಿನ ಹೆಣತಗದು ನಾಯಿ–ನರಿಗ ಬೀಸಾಡೋದ ಬದ್ಲು ಎಲ್ಲೋ ಸುಡಗಾಡಿಗ ತಗೊಂಡ ಹೋಗಿ ಗುಂಡಿ ತೋಡಿ ಹುಗದ. ಒಂದ ಸಮಸ್ಯೆ ಏನೊ ಬಗಿಹರಿತು, ಆದ್ರ ಮತ್ತೊಂದ ಸಮಸ್ಯೆ? ನೀರ ಸೇದಕ ಬರೋ ಮಂದಿ ಹೋಗೋದಾದ್ರು ಎಲ್ಲಿಗೆ? ಇಡೀ ರಾತ್ರಿ ಎಲ್ಲಾ ಇನ್ಸ್‌ಪೆಕ್ಟರ್ ಹುಸೇನಿ, ಮುನ್ಸಿಪಾಲ್ಟಿ ಪ್ರೆಸಿಡೆಂಟ್ ಸಾಗಪ್ಪ, ತಹಸಿಲ್ದಾರ ಒಂಟೆಲಿಮಠ, ದೀಪ ತರಿಸಿ ಮಿಷನಿಂದ ನೀರ ಹೊರಗ ತಗಿಸಿದ್ರು, ಪಕ್ಕದಾಗ ಕೆರಿ ಇರೋದ್ರಿಂದ, ಜಲಕಮ್ಮಿ ಆಗವಲ್ದು ರಾತ್ರೋರಾತ್ರಿ ನೀರ ಖಾಲಿಮಾಡಿ ಬಾವಿಸ್ವಚ್ಛಗೊಳಸೋ ತರಾತುರಿಬ್ಯಾರೆ. ನೀರು ಕಡಿಮಿ ಆಗಾಕ ರಾತ್ರಿ ಹನೆಲ್ಡಾತು. ನಾಕಮಂದಿ ಒಳಗಿಳಿದು ಹೂಳು ಎತ್ತೊ ತಯಾರಿ ಮಾಡಿದ್ರು. ಸಲಕಿ, ಪುಟ್ಟಿ ಗಡಗದಮ್ಯಾಲ ದೊಡ್ಡ ಬಕೀಟುಗಳನ್ನ ಕಟ್ಟಿ ಒಳಗ ಬಿಟ್ರು. ಕೆಳಗಿನ ಕೇರಿ ಫಕ್ಕೀರ, ಹನುಮ, ಕಾಳ, ಶಂಬ. ಮಣ್ಣು ಗೋರಿ ಒಳಗ ಹಾಕೊ ತರಾತುರಿಯಲಿದ್ರು, ಫಕ್ಕೀರ ಸಲಕಿ ಹಾಕಿ ಗೋರಿದ, ಯಾವದೋ ತುಂಡ ಬಟ್ಟೆ ಸಿಗಾಕಿಕೊಳ್ಳುತು, ಎಳದ, ಹಂಗೆ ಬಂತು. "ಎಳದಂಗ ಬರಾಕ ಹತ್ಯತತ್ರೋ ಏನಿದು" ಒದರಿದ. 'ಸರಿಗ ನೋಡಲೇ'

ಕಾಳ ಕೂಗಿದ. ಮೇಲಿಂದ ಬೆಳಕು ಮಾತಗಳು ಬಟ್ಟಿ ಮ್ಯಾಲ ಬಿಳೋದಕೂ ಶುರು ಆಗ್ತಿದಂಗೆ ಊಹೆಗಳು ಹುಟ್ಕಂಡು ತಲೆ ತಿನ್ನ ತೊಡಗಿದವು. ಯಾರು? ಯಾಕೆ? ಹೇಗೆ? ಮಂದಿ ಎದಿಯಾನ ಹೆದರಿಕೆ, ತಲೆಯಾನ ಸಂಶಯ ಒಟ್ಟೊಟಿಗೆ ಸುರು ಆಗಿದ್ವು ಹುಸೇನಿ ಇನ್ಸ್‌ಪೆಕ್ಟರ್ ಅವರಿಗೆಲ್ಲಾ ಹೆದರಿಸಿದ್ದ ಆದರೆ ಅವನ ತಲಿಯೊಳಗ ಕೊರಿತಿದ್ದ ಗುಂಗಾಡಿ ಹುಳಾನ ಹ್ಯಾಂಗ ಕಿತ್ತಾಕೊದಂತೆ ತಿಳಿಲೆ ಇಲ್ಲಾ. ಒಂಟೆಲಿಮಠ ಮಾತ್ರ ಯಾವದೋ ಸಣ್ಣ ವಿಷಯ ಮತ್ತೊಂದು ದೊಡ್ಡ ಸಂಘರ್ಷಕ ದಾರಿ ಮಾಡಿಕೊಡ್ತಲ್ಲ ಅಂತ ನಿದ್ದೆಬಾರದೆ ಒದ್ದಾಡ್ತಿದ್ದ. ಬಾವಿ ಸ್ವಚ್ಛಗೊಳಿಸಿ, ಕ್ಲೋರಿನ್ ಪೌಡರ್ ಹಾಕಿ ಹೂಳೆಲ್ಲಾನು ದೂರ ಸಾಗಸಿ ಮನಿಗ ಹೊಗೋದ್ರಾಮುಂಜಾನೆ ಆರು. ಆಟು ಕಣ್ಣ ಮುಚ್ಚನಿದ್ದಿ ಮಾಡಾಕ ಹ್ವಾದ್ರ ಬಾವಿಯೊಳಗ ಸಿಕ್ಕ ಹೆಂಗಸಿನ ಹೆಣ ಕಣ್ಮಂದೆ ಬಂದ ನಿಲ್ತಿತ್ತು. ಯಾರದು? ನಾನಾ ನಮೂನಿ ಆಲೋಚನೆಗಳು. "ಯಾರದ್ರೇನು, ನಾನೇನು ಈ ಊರಲ್ಲಿ ಶಾಶ್ವತವಾಗಿರೋನು" ಸಮಾಧಾನ ಪಟ್ಕೊಂಡು ಮಗ್ಗಲು ಹೊರಳಿ ನಿದ್ದಿ ಮಾಡೊಯತ್ನ ಮಾಡ್ತ ಭಾವಿಯೊಳಗ ಇಳದಿದ್ದ ನಾಕ ಮಂದಿಗ ಛಳಿ ಜ್ವರ ಬಂದಿತ್ತು. ಹೊಟ್ಟಿಯೊಳಗಿರೋ ಸಂಕಟ ಹೊರಗ ಹಾಕದಂಗೆ ಹೆದರಿಸಿದ್ದರಿಂದ ಒಳಗೆ ಪಚನವಾಗದೆ ತಿಣುಕಾಡ್ತಿದ್ರು. ಸುದ್ಧಿ ಒಳಗೊಳಗೆ ತಿಕ್ಕಾಡಿ ಸ್ಫೋಟಗೊಂಡಾಗ, ಹೆಚ್ಚು ಪ್ರಚಾರಪಡಿಲೇಇಲ್ಲ ಅದರ ನಡುವೆ ಅಪ್ರಾಪ್ತಪಿಂಡ ಪ್ರಕಟಗೊಳ್ಳಲಿಲ್ಲಾ, ಎಲ್ಲಾವೂ ಯತಾವತ್ತಾಗಿ ನಡೆಯತೊಡಗಿದವು ಸೂಪುರದಲ್ಲಿ. ಮಂದಿ ಏನೂ ಆಗಿಲ್ಲ ಎಂಬಂತೆ ಬಾವಿ ನೀರು ಸೇದ ತೊಡಗಿದರು. ರಾತ್ರಿ ಕೆಲ್ಸ ಮಾಡ್ದೋರಿಗೆ ನೀರ ಕುಡಿಯೋದಕ್ಕೆ ಪೀಕಲಾಟ ಹತ್ತಿತು. ಯಾಕಂದ್ರ ಅವರು ಸತ್ಯವನ್ನ ಕಣ್ಣಾರೆ ಕಂಡಿದ್ರು. ಅದಕೆ ಅವರೆಲ್ಲಾ ನೀರು ಉಪ್ಪಾಗಿದ್ರು ತೆಗ್ಗಿನೋಣಿಯ ಬೋರ್ ನೀರನ್ನೆ ಕುಡಿಯತೊಡಗಿದರು ಬಾವಿ ಕಡೀಗ ಅಪ್ಪಿತಪ್ಪಿನೂ ಹಾಯಲಿಲ್ಲಾ. ಬಾವಿಯೊಳಗಿನ ಹೆಂಗಸಿನ ಹೆಣಾಮಾತ್ರ ಇಂದೂ ಸವಾಲಾಗೆ ಕಾಡುತ್ತಿದೆ.

❖

## ೫. ಎಲೆಕ್ಷನೋ ಡೊಣ್ಣನಾಯ್ಕನ ಧಿಮಾಕೋ...

ಕೈಯೊಳಗಿದ್ದ ಹುಣಸೀಬೀಜ ತಿಕ್ಕಿ ಮಾಡಿದ ಚಾವಿಯನ್ನ ಕಲುಕಿಸಿ ಎಸದು ವಚ್ಚೆ ಅಂತೇಳಿ ಒಂದ ಮನಿ ದಾಟಿಸಿದ ತನ ಕಾಯಿಯನ ಡೊಣ್ಣನಾಯ್ಕ. ಅವನ ಎದರು ಕುಂತ್ತಿದ್ದ ಚೆನ್ನಿಂಗ, ಚಾವಿ ಎತ್ಕೊಂಡು ಎಸದು ಎಂಟು ಅಂದ. "ಕೆಂಚೇರಿ ರೇಡಿಯೊ ಸೌಂಡ್ ಕೊಡ ಬೇ" ಪ್ರದೇಶ ಸಮಾಚಾರ ಹೇಳ್ತಿದ್ದ. ಕೇಳಿ, ಕಿವಿನಿಮಿರಿಸಿ "ಲೇ ಸುಮ್ಕಿರ್ಲೆ ಸೊಟ್ಟ, ಆಟು ಕೆಂಚೇರಿ ಸಣವ್ವ ಒಂದೀಟು ಸೌಂಡ್ ಬೇ" ಅಂತ ಚಾವಿ ಆಡೋದ ನಿಲ್ಸಿದಡೊಣ್ಣ. ಕೆಂಚೇರಿ ಅಂಗಡಿ ಕಟ್ಟಿ ಜಗಲಿಮಾಲ್ಯ ದಿನಾ ಅಂಡೂರ್ಕೊಂಡು ಚಾವಿ ಆಡೋದು ಕಾಣ್ಯರು ಕೂನ, ಮಸಳೂರು ರಬಿಸಾಬ, ಡಂಬಿಗೇರಿ ಮಂಟಕರಿಯಪ್ಪ ಯರಾರು ಬಂದ್ರು ಅಂತದ್ರ, ಎಮ್ಮಿಕರು, ಎತ್ತು, ಯಾರದಾರ ಮ್ಯಾರಿಮ್ಯಾಲ ಸಂಪಾಗಿ ಬೆಳ್ಕೊಂಡಿರೊ ಬೇವಿನ ಮರ, ಜಾಲಿಮರ ತೋರ್ಸಿ, ವ್ಯವಹಾರ ಕುದ್ರಿದ್ರೂ ಸರಿ ಕುದರದಿದ್ರೂ ಸರಿ. ಚಾ, ಮೈಸೂರು ಮಂಡಕ್ಕಿ ಒಂದ ಸಿಂಗಲ್ ಮಿರ್ಚಿ ಅಂತ ಎರದಬಿಡ್ತಿದ. ಅವನ ಹೆಣ್ತಿ ಗೋವಿ ಕೂಲಿ ಮಾಡಿ ಮೂರು ಮಕ್ಕಳ್ನನ್ನು ಸಾಕ್ತಿದ್ಲು. ಹೆಣ್ತಿ ಮಕ್ಕಳಂತ ಜನ್ಮದಾಗೂ ಪ್ರೀತಿ ತೊರ್ಸಿಲಿಲ್ಲಾ. ಎತ್ತಿನ ಬಾಲ ಮೂರ್ದು ದಿನಕ್ಕೆ ಎನಿಲ್ಲಾಂದ್ರು ಒಂದು ಬಾಟ್ಲಿಗೆ ಗಿಟ್ಟಸಿಕೊಂಡ ಬಿಡ್ತಿದ್ದ. ಕೆಂಚೇರಿಗ ತಲಿಕೆಡ್ತು " ಏ ಎದ್ದು ಹೋಗೋ ಮಾರಾಯ್ರ. ಸಾಲಿಕಡಿಗ ಇಲ್ಲಾಂದ್ರ ಗಾರಿಕಟ್ಟಿಗ ಹೋಗಿ ಆಡ ಹೋಗ್ರಿ ಬಂದ ಮಂದಿಗ ಕುಂಡ್ರಾಕ ಜಾಗ ಇಲ್ಲಾ ನಿಮ್ಮದೊಂದ ಕಾಟ ನೋಡಂ" ಅಂದ್ಲು. "ಹಂಗ್ಯಾಕಂತಿ ಯವ್ವ ನಾವು ನಿನ್ನ ಖಾಯಂ ಗಿರಾಕಿಗಳು." ಅಂದ ಸೊಟ್ಟ

ಬೆನ್ನಿಂಗ "ಏ ಮುಚ್ಚಲೇ ಎನೋ ಹೇಳಾಕ ಹತ್ಯಾನ" ಅಂತ ಡೊಣ್ಣ ಕೂಗಿದ. ಹೂಡ್ತಕ್ಕ ಸೊಟ್ಟ ಬಾಯಿಮುಚ್ಕೊಂಡಿದ್ದ. ಡೊಣ್ಣ ಕಿವಿನಿಮಿರಿಸಿ ಕೇಳಿದ. ಎನೋ ಘನ ವಿಚಾರ ಇರೋ ಹಂಗ ಎಡಗಣ್ಣನ್ನ ಅರ್ಧ ಮುಚ್ಕೊಂಡು ಗೋಣ ಮುಂದಕ್ಕ ಚಾಚಿಕೊಂಡು ಗದ್ದಕ ಕೈ ಆನಿಸಿಕೊಂಡು ಕೇಳ ತೊಡಗಿದ. ಇದ್ದಕ್ಕಿದಂಗ ಎದ್ದು ಮುಕಳಿ ಕೆಳಗಿದ್ದ ಟವಲ್ ತಗದು ಚಾಡ್ಸಿದವನೆ, "ಒಂದರ್ಧ ಚಾ ತಾರಬೇ ಎಲೆಕ್ಷನ್ ಬಂತು." ಅಂದ. ಕೆಂಚೀರವ್ವ ಹುಬ್ಬೇರ್ಸಿ ಕೇಳಿದ್ಲು, 'ಎನಂದೆ ತಮ್ಮಾ' ಅಂತ. "ಮನ್ನೆ ಸರ್ಕಾರ ಬಿತ್ತಲ್ಲಬೇ ಅವರು ಮತ್ತ ಎಲೆಕ್ಷನ್‌ಗ ಕರ್ದಾರ" ಅಂದ ಸೊಟ್ಟ, ಕೆಂಚಿರವ್ವ, ಎಲೆಮ್ಯಾಲ ಸುಣ್ಣ ಹಚ್ಚಾಕ ಹತ್ತಿದ್ದ ಸೋಮ್ಮಿಂಗ, ಎಡಗಾಲಿನ ಎಕ್ಕಡಕ್ಕ ಮಳಿ ಬಡಿತ್ತಿದ್ದ ದುರಗ ಡೊಣ್ಣನ ಮುಂದ ಬಂದು ನಿಂತ್ರು.

ಡೊಣ್ಣ ಇಡಿ ಊರಿಗ ಸುದ್ದಿ ಮಾಡಿದ್ದ. ಮೂಗೇರಿ ಮಾಂತ್ಯ ಅವನ ಕೂಡ ಸಾಲಿ ಓದ್ತಿದ್ದ ಚೆನ್ನಗ ಹೇಳಿದ, "ಲೇ ಎಲೆಕ್ಷನ್ ಬಂದು ಪಾಡಾತ ನೊಡ್ಲೆ, ನಮ್ಮೇಷ್ಟ್ರಿಗ ಬ್ಯಾರೆ ಊರಿಗ ಹಾಕ್ತಾರ, ನಮ್ಮ ಸಾಲಿಯೊಳಗೆ ಓಟ ನಡಿಯೋದು, ಹ್ಯಾಂಗು ನಾಕ ದಿನ ಸಾಲಿ ತಪ್ಪತು ಅವನೌವ್ವನ". "ಹೌದಲೇ ಮಾಂತ್ಯ, ಸಾಲಿ ಸೂಟಿ ಬಿಡ್ತಂದ್ರ ಏಡಿ ಹಿಡಿಯಾಕ ಹೊಗಾನು" ಅಂದ. "ಆಮ್ಯಾಲ ಹೋಗನಂತ ಬಿಡ್ಲೆ, ಮದ್ಲು ಎಲೆಕ್ಷನನೋರ ಯಾವಾಗ ಬರ್ತಾರ ನೋಡಬೇಕು. ನಾನು ನನ್ನ ತಮ್ಮ ಹ್ವಾದ ಸಲಾ ಏನ ಪೆಪರಮಂಟ ತಿಂದಿದ್ವಿ ಅಂತಿ, ಆ ದೊಡ್ಡಹೊಟ್ಟಿ ಭುಜಂಗಪ್ಪ ಅದಾನಲ್ಲ, ಅವನು ಬಂದ ಬಿಟ್ಟಿದ್ದ. "ಲೇ ಹುಡ್ರಾ ಬರ್ರಲೇ, ನಾ ಅಂದಂಗ ಅನ್ರೀ ನಿಮ್ಗೆಲ್ಲಾನೂ ಪೆಪರಮೆಂಟ ಕೊಡಿಸ್ತೀನಿ ಅಂದ ಬಿಟ್ಟ, ತಗೊ, ಸಾಲಿಗ ಹೊಂಟೆರೆಲ್ಲಾ ರೊಂಯ್ಯಂತ ಅವನ ಹಿಂದ ತಿರಗ ಬಿಟ್ರು, ಜಮ್ನಾ ಮೇಷ್ಟ್ರ ನೋಡ್ಲಿಲ್ಲಾ ನಾವು ಹೋಗೊದನ್ನ, ಇಡಿ ಊರ ತುಂಬ ಅವನೇನಂತಾನೊ ಅದಕ್ಕ 'ಜೈ' ಅನ್ನೋದೊಂದೆ ನಮ್ಮಕೆಲ್ಸ, ಆ ಮ್ಯಾಲ ನೋಡು ಇಷ್ಟು ಪೆಪ್ಪರ್‌ಮೆಂಟ್ ತಂದ ಬಿಟ್ಟ. ನಾನು ಮೂರ ದಪ ಇಸ್ಕೊಂಡು ನಾಕನೆ ಸಲಕ ಹೋದೆ ನೋಡು ಆ ವಯ್ಯಾ ಗುರ್ತು ಹಿಡ್ಕೊಂಡು ಗದರಿಸಿ ಬಿಟ್ಟ". ಮೂಗೇರಿ ಮಾಂತ ಸೂರಕ್ ಪುರಕಂತ ಮೂಗೆಳಿತ, ಹರಕ ತೊಳಿಗ ಒಂದ ಸಲ ಎಮ್ಮೆಗೊಡ್ಡು ಮರಕ ಖಬಿರಿಲ್ದೆ ಮೈ ಉಜ್ಜೊ ಹಂಗ ಅವನ ಬಲಗೈ ತೋಳಿಗ ಮೂಗುಜ್ಜಿದ. ಮೂಡಿದ ಮೀಸೆಯನ್ನ ನಾಲಗಿ ಸವರಿಕೊಂಡು ಹೋದ ಎಲೆಕ್ಷನಿ ವೃಂತ್ತಾಂತ ಹೇಳ್ತಾ ಡೊಣ್ಣ ಹೇಳಿದ ಎಲೆಕ್ಷನ ಬರೋದನ್ನ ಎದರ ನೋಡಾಕತ್ತ ಅವನ ಓರಿಗೆಯ ಚೆನ್ನಾ ಎನೇನೋ ಅಂದ ಡೊಣ್ಣ. 'ಹಾಂ' ಅಂದು ಕಿವುಡ



ಮುದಕಿ." ಎಲೆಕ್ಷನ್ ಬೇ ಓಟ ಹಾಕೊಂದು"ಮತ್ತೊಂದ ಸಲ ಒದರಿದ. ಸರಿಗಕೇಳಿಸ್ತು ಕಾಣ್ತು, ಮುದಕಿ ಬೊಚ್ಚ ಬಾಯಿ ತಗ್ದು ಸಣ್ಣ ಹುಡ್ರಂಗ ನಗ್ತು, "ಬಾ ಆಮ್ಯಾಕೆ ತಗೊಂಡು" ಅಂತು, "ಹೂಂ ಹ್ವಾದಸಲದ ರುಚಿ ಉಂಡಿಯಲ್ಲಿ ಮತ್ತ ಕೇಳಾಕತ್ತಿ" ಅಂದ ಡೊಣ್ಣ. ಎಲೆಕ್ಷನ್ ಬಂತಂದ್ರ ಡೊಣ್ಣ ಕ್ರಿಯಾಶೀಲ ಆಗ್ತಾನ. ಎತ್ತಿನದಂದೆ, ಕುರಿದಂದೆ, ಮರದ ದಂದೆ, ಯಾವುದು ಬಂದ್ರು ಹೋಗಂಗಿಲ್ಲಾ. ಡೊಣ್ಣ ಇದು ದೊಡ್ಡ ಇನ್‌ಕಂ ಕಣಯ್ಯ ನೀ ಏನು ಐದ ಹತ್ತ ಖರ್ಚಿಗ ಕಮೀಷನ್ ಕೊಟ್ಟಿಯೇನು ಆದಿತೇನು, ಒಂದ ಎಲೆಕ್ಷನ್ ಮಾಡ್ದೆ ಅಂದ್ರ ಕನಿಷ್ಠ ಐದಾರವಾರ ಯಾ ಮಗತಾವ ಸಾಲಕ ಸಲಾಂ ಹೊಡಿಯೋ ಜರೂರತ್ ಬಿಳಂಗಿಲ್ಲಾ", ಅಂತ ವ್ಯವಹಾರದ ವರದಿ ಇಟ್ಟು ಊರ ಮುಂದಿನ ಗುದ್ದಮ್ಮನ ಕಟ್ಟಿಗ ಅಂಡ ಆನ್ಸೊಕೊಂಡ ಮುಂಜಾನಿಂದ ಹಿಡ್ಕೊಂಡು ಸಂಜಿ ಮಟ, ಯಾರ ಬರ್ತಾರ ಪ್ರಚಾರಕಂತ ಕಾಯ್ತಿದ್ದ. ಬಂದ ಮಂದಿಗ ಕುಂದ್ರೊ ವ್ಯವಸ್ಥೆ ಊರಾನ ಹಿರಿಯರನ್ನ ಕರ್‍ಕೊಂಡ ಬಂದು ಸೇರ್‍ಸಿ ಸಾಧ್ಯ ಆದ್ರ ಅವನೂ ಒಂದ ಸಣ್ಣ ಭಾಷಣ ಬಿಗದೆ ಬಿಡ್ತಿದ್ದ. ನಾವೆಲ್ಲಾ ಯಾಕ ಹಿಂದ ಉಳದೀವಿ, ಊರಿಗ ಸರಿಯಾದ ರೋಡಿಲ್ಲಾ. ಲೈಟಿಲ್ಲಾ, ಯಾಕಿಲ್ಲಪ್ಪ ಅಂತಂದ್ರ ನಾವು ಅಂತ ಮಂದೀನ ಆರ್‍ಸಿಲ್ಲಾ ಚುಕ್ಲ ಸೋಮನಿಂಗ, ಸೊಟ್ಟ, ಶೇವ್ಲಿ, "ಹಚ್ಕೊಂಡೈತನೋಡ ಇದರ ಒಸ ಅಡಗ್ಲಿ, ಹಾಳಮನಿದು ಯಾವನ ಬಂದ್ರು ಮುಂದೆ ಇರತೈತಿ ಕಕ್ಕೋರಬಾಯಿನೆಕ್ಕೊ ನಾಯಿ ಅಂತ ಮೂಗ ಮೂರದ ಮಾತಾಡ್ಕೊಂತಿದ್ರು. ಡೊಣ್ಣ ಮಾತ್ರ ಯಾರಪ್ಪ ಬಂದ ಏನಂದ್ರೂ ನಿಲ್ಲಸ್ತಿರಲಿಲ್ಲಾ. "ನಮ್ಮೂರ ಉದ್ಧಾರ ಆಗಬೇಕು ನಮ್ಮೂರ ತಾಂಡೆದುರ್ಗವ್ವನ ಗುಡಿ, ಹನ್ಮಪ್ಪನ ಗುಡಿ ಕಟ್ಟಿಸಬೇಕು." ಆ ಮಾತನ್ನು ಅವನು ಸಣ್ಣಾವ ಇದ್ದಾಗ ಊರ ನಾಯ್ಕ ಹೇಳಿದ್ದ, ಎಷ್ಟೋ ಕಾಲ ಕಳದವು ಅವನು ಮದ್ವಿಯಾಗಿ ಅವನ ಮಗ ಪರಸ ಮದ್ವಿಯಾದ್ರು ಎಟೋ ಎಲೆಕ್ಷನ್ ಆಗಿ ಹ್ವಾದು ಎಷ್ಟೋ ಸರ್ಕಾರಗಳು ಬಂದಹ್ವಾದ್ವು, ಆದ್ರ ನಿರ್‍ಹಳ್ಳಿ ಗುಡಿಗಳ ಸಮಸ್ಯೆ ಮಾತ್ರ ಉಳ್ಕೊಂಡೆ ಬಂದಿತ್ತು. ಡೊಣ್ಣ ಆವೇಷದಿಂದ್ಲೆ ಮಾತಾಡ್ತಿದ್ದ ಇದ್ದಕಿದ್ದಂಗ ಲಕ್ಷಾಹೊಡ್ದು ಕೂಲಿ ಮಾಡಾಕ ಆಗ್ದೆ ಹೆಣ್ತಿ ತಂದ ಹಾಕಿದನ್ನ ತಿಂದ ಅಡ್ಡಾಡ್ತಿದ್ದ ಸೊಂಡ ತಾನು ಏನ ಕಮ್ಮಿ, ತಂದು ಓಟೈತಿ ಅಂತೇಳಿ ತೊರ್‍ಸಾಕ ಕೈಲಾಗದಿದ್ರು ಹೆಣಗಾಡಿ ಹೆಣಗಾಡಿ ಬದುಕಿದ್ರು ಅವನ ಮನಸು ಮತ್ತೆಲ್ಲೋ ಇತ್ತು. ಹ್ವಾದ ಸಲ ಎಲೆಕ್ಷನೋರು ಕೊಟ್ಟ ರೊಕ್ಕದಾಗ ಅವನವ್ವ ಆಡಮರಿ ತಗೊಂಡಿದ್ಲು, ಮೂರವಾರ ಪಸಂದಿತ್ತು ಮರಿ ನಾಕನೇ ವಾರಕ ಅದ್ಯಾವ ದೇವ್ವ ಬಡ್ಕೊಂಡ ಬಿಡ್ತೊ ಮೇಯಿಲಿಲ್ಲಾಂತ ಅಪ್ಪ ಜೂರಿ ಮಸದು ಮಸಾಲಿ

ಅರಿಯಾಕ ಹೇಳಿದ್ದ. ಅಂತು ಹೊಟ್ಟಿತುಂಬ ಮಾಸ ತಿಂದಾಗಿತ್ತು, ಅಪ್ಪ ನಾನ ದೊಡ್ಡೋನಾದಿಂದ ಸಾಲಿ ರೊಕ್ಕಕ್ಕಂತ ಸಾಕಾಕ ಹತ್ತೀನಿ ಅಂದಿದ್ಲು, ಮುಗಸಟ್ಯೆ ಎಲೆಕ್ಷನವನು ಕೊಟ್ಟಿದೆಲ್ಲಾರ ಉಳ್ಕೊಂಡಿತೇನು, ನಾನ ಅವತ್ತೆ ಹೇಳಿದೆ ನನ್ನ ಮಾತ ಕಿವಿಯಾಗ ಹಾಕಲಿಲ್ಲಾ. ಅಪ್ಪ ಎಲೆಕ್ಷನಿಗ ಮೂರ ದಿನ ಮುಂಚೆ ಇದ್ದಂಗ್ಲೆ ಮನಿಸನೀಕ ಹಾದಿರಲಿಲ್ಲಾ, ಹೆಂಡದ ದ್ಯಾಮನಂಗಡಿ ತಪ್ಪುಂದ್ರ ನಿಂಗನ ಸರೆ ದುಕಾನ್, ಭಾರಿಸುಗ್ಗಿ ಬಿಡ ಅವನವ್ವನ, ಅಂತ ತನ್ನ ವಿಚಾರಗಳನ್ನ ಗುಣಗಾಕ ತೊಡಗಿದ.

ನೋಡ ಖೂನ, ನೀ ನನಗ ಹ್ವಾದ ಸಲ ಮೋಸ ಮಾಡಿ 'ನೀವ ಹೇಳ್ದಂಗ ಧಣಿ' ಅಂದಿದೋನು ಮುಂಜಾನೆ ಮತ್ತೇ ಯಾವನ್ದೊ ಕೂಡ ಅಡ್ಡಾಡಾಕ ಹತ್ತಿದ್ದೆ. ಏನೋ ಎಳೆ ಎಮ್ಮಿ ಮಣಕ ಕೊಡಸಿಕೊಟ್ಟೆ ಸಾವುಕಾರರಿಗ ಹೇಳಿ, ನಂಬಕಿ ಮನಷ್ಯ ಸಾಹೇಬ್ರ ಎಲ್ಲಾ ನಿಮಗೆ ಹಾಕ್ತಾರ ನಾ ಅದೀನಿ, ಹೆಚ್ಚು ಕಮ್ಮಿ ಆತಂದ್ರ ಹೆಡಮುರಗಿ ಎತ್ತಸ್ತೀನಿ, ನೀವೇನ ಅಂಜಾಕ ಹೊಗಬ್ಯಾಡ್ರಿ ಅಂತ ಶಿಪಾರಸು ಮಾಡಿದ್ರ ಮಕಳ್ರ್ಯಾ ತಿಂದ ಮನಿ ಜಂತಿ ಎಣಸಿದ್ರಿ, ಡೊಣ್ಣ ದೊಡ್ಡಾಗಿ ಮಾತಾಡ್ತಿದ್ದ. "ಯಣ್ಣ ದೊಣ್ಣಣ್ಣ ನೀ ಒಳ್ಳೆ ಅವರಿವರ ಮಾತ ಕಟ್ಕೊಂತಿ ನೋಡು, ನಮ್ಮ ಹುಚ್ಚಮ್ಮಲ್ಲವ್ವನಾಣೆಗೂ, ನಮ್ಮ ತಾಳಿಮರದುರ್ಗವನಾಣೆಯಾಗ್ಲೂ, ನೀ ಹೇಳಿದಕ್ಕ ಒತ್ತಿಬಂದೀವಿ ನಮಗೇನ ಅಷ್ಟು ತಿಳಾಯಕಿಲ್ಲೇನು, ಹೊಟ್ಟೀಗ ತಿಂದೀವಿ ಅಂದಾಗ ನೀಯತ ಮುಖ್ಯ ಕಣಣ್ಣೋ." ಅಂತ ತನ ವಿಧೇಯತೆ ತೋರ್ಸಿದ. "ಚಿಂಗ್ಲವ್ವ ಹೂಂ ಮತ್ತು ಎಲೆಕ್ಷನ ಬಂದೈತಿ ರಡಿಯಾಗಬೇ". "ಹಂಗಂದ್ರ ಒಪ್ಪಂಗಿಲ್ಲ". ಅಂದ ನೆರದ ಮಂದಿ ಅವನ ಕಡಿಗ ನೋಡಿದ್ರು, ನೀವೇನ ಕೆಲ್ಸಮಾಡಿರಪ್ಪ, ರಂಡ ಮುಂಡೇರಿಗ ರೊಕ್ಕ ಕೊಡ್ಸಿರಾ, ನಮ್ಮಂತ ಕೈಲಾಗದ ಅನಾಥಮಂದಿಗ ರೊಕ್ಕ ಬರೊಂಗ ಮಾಡ್ಸಿರ. ಊರಿಗೇನ ಮಾಡೀರಿ ಒಂದ ಬಸ್ಸಿಲ್ಲಾ, ಆಸೆ ತಮಿ ಮಾರದ ಬಿದ್ದ ಏಸ ವರ್ಷ ಆತು, ದಾರಿ ತುಂಬಾ ಜಾಲ ಬೆಳ್ಕೊಂಡೈತಿ ನೀವೇನೋ ಓಟ ಬಂದಾಗ ಕಾರ್ನಾಗ ಬಂದು ಹೊಕ್ಕೀರಿ ಕಾಲನಡಗಿ ಅಡ್ಡಾಡೊ ನಮ್ಮಂಥೋರ ಗತಿ ಏನು?" ಅಂದ. "ಏ ಸೊಂಡನಿ ಸುಮ್ಕಿರು ನಿಂಗೆಲ್ಲಾ ಗೊತ್ತಾಗಂಗಿಲ್ಲಾ ಡೊಣ್ಣ ಮಾಂತಾಡಾಕ ಹತ್ಯಾನ," ಅಂದ ಸೂರಪ್ಪ ಊರ ಉಸಾಬರಿಮಾಡೋ ಯಜಮಾನ, ಎಲ್ಲಾ ಪಾರ್ಟಿಯೋರತಾವ ಅಡ್ವಾನ್ಸ್ ಇಸ್ಕೊಂಡು, ಅವನಿಗ್ಯೆದು ಇವನಿಗ ಹತ್ತು ಹಂಚಿ ಉಳದಿದ್ದನ್ನ ಕೀಸಕೆ ಹಾಕ್ಕೊಳೋ ನರಮನುಷ್ಯ. ಊರ ಪ್ಯಾಟಿ ಬಸವಿಯಿಂದ ಹಿಡದು ಗೂಳಿಕರದಿಂದ, ಕೆರಿಮ್ಯಾಲಿನ ಹುಣಸಿಮರದ ಹರಾಜಿನವರಿಗ ಬಂದ ರೊಕ್ಕಾನೆಲ್ಲಾ ನುಂಗಿ ನೀರ ಕುಡುದು, ಊರ ಪಂಚಾತಿಯೊಳಗ

ದಂಡ ಹಾರೆದ ರೊಕ್ಕಕ ಎಳ್ಳನೀರ ಬಿಟ್ಟ ಭೂಪ, ಅವನಿಗ ಸರಿಯಾದ ಮಾರ್ಗಕೊಂರೆರ್ರ್ಲಾ ಚಿನ್ನಾಪೂರ ಮಾಸ್ತರ ಮಾ ಗಂಟಿಗಳ್ಳ. ಪರಪ್ಪಗ ವಯಸ್ಸಾಗ ತಿದ್ದಂಗೆ ಅವನ ಮಾಗ ಐಬರ ಅದ್ಯಾವ್ದೊ ಊರ್ನೋಳ ಮೇಷ್ಟ್ರಂತ ಅಪ್ಪಗ ಮೀರ್ನೊ ಮಗ ಅದ್ಯಾವ್ಯವ್ದೊ ರೊಕ್ಕಾನೆಲ್ಲಾ ತಗೊಂಡೊ ಆಸ್ತಿ ಖರೀದಿಮಾಡಿದ. ಊರ ಮಂದಿ ಮಾತ್ರ ಅವನ ಹಿಂದ ಮಾತಾಡ್ಕೊಂತ ಅಡ್ಡಾಡ್ತಾವ, "ಏ ನೀ ಸುಮ್ನಿರಪ್ಪ ನಾ ಏನ ನಿನಗ ಹೇಳಿಲ್ಲಾ ನೀ ಎಂಥ ಮನುಷ್ಯ ಅಂಥ ಗೊತ್ತು" ಅಂದ ಸೊಂಡ. ಪಕ್ಕದಾಗಿದ್ದ ಕರೆಂಟ್ ಕಮಲ ಅವನ ಕೈ ಹಿಡಿದು ಅಮುಕಿದ ಸೊಂಡವನ್ನ.

ಬೇಡಿಕೆಯೆಲ್ಲಾನು ಸಲ್ಲಿಸಿ ಆಗಿತ್ತು. ಗುಡಿಗ ಆಟು, ಸರಾಯಿಗಂತ ಆಟು, ಲೆಕ್ಕದ ಮ್ಯಾಲ ಲೆಕ್ಕ ಮಾಡ್ತಿದ್ದು ಡೊಣ್ಣ, ಪರಪ್ಪ "ಕಾಕ ಈ ಸಲಾ ಕುಳದ್ವಾಡದೈತಿ ಹಾಕಂಗಿದ್ರ ಸರಿಗ ಟೋಪಿ ಹಾಕು." ಅಂದ ಡೊಣ್ಣ "ಅಲ್ಲವೇ ಡೋಣ್ಣಿ" ಸೊಂಡಗ ಏನಾಗೈಕಿ ಹಿಂಗ್ಯಾಕ ಮಾತಾಡ್ತಾನ. ಬಂದೋರ ಏನ ತಿಳ್ಕೊಬೇಕು. ಇಕ ಒಂದ ಪಾಕೀಟ ಹಾಕ್ಸ" ಅವನಿಗ ಅಂದ. ದೊಣ್ಣ ಇಸ್ಕೊ ಮೂರನಾಕ ಪಾರ್ಟಿ ಬರೋ ಲಕ್ಷಣ ಅದಾವ ಕಾಕ ಬರೋದ್ರಾಗ ನಂಗೂ ಅಂತ ಗಡ್ಡ ಕೆರ್ದ "ಗೊತ್ವೆ ಹೊಗಲೇ ನೀ ಹೇಳೋದ ಬ್ಯಾಡ ತಗ ನೀನು ಒಂದು ಹೊಡಿ" ಅಂದ ಪರಪ್ಪ.

'ಏ ತಮ್ಮ ಬಾ ಇಲ್ಲಿ' ಅಂದ ಏನ ಡೊಣ್ಣ ಅಂದ ಆ ಹುಡುಗ, ನಿಮ್ಮಜ್ಜ ಅದಾನೇನ್ಲೆ ಕೇಳಿದ 'ಹೂಂ ಅದಾನೋಡ ಅಂದವನೆ ಓಡಿಹೋದ. ಮುದ್ಕನ ತಾವ ಆರ್ಧತಾಸು ಹಲ್ದು ಹೊಡದ, ದೊಣ್ಣ ಹೊಂಟ ಹೊತ್ನಾಗ, ಮುದಕ ಗೊಣಗಾಡಿದ, ಏನ ಓಟ ಹಾಕಿದ್ರೇನೊ ತಮ್ಮ ನಮ್ಮ ಪಾಡು ನಮಗ ತೆಪ್ಪತೈತೇನು, ಎಂ ಎಲ್ ಎ ಆಗೋನು ನಾಳೆ ಕಾರನ್ಯಾಗ ಅಡ್ಡಾತ್ನಾನ ದೊಡ್ಡ ಬಿಲ್ಡಿಂಗ್ ಕಟಿಸ್ಕೊಂತಾನ, ನಮ್ಮ ಗುಡ್ಲಿಗೇನಾರ ಗಳಗೂಟ ಕೊಡಸ್ತಾನೇನು ಹೇಳು" ಅಂದ ಮುದುಕ, "ಇಲ್ಲಾ ಯಜ್ಜ ಓಡಿಹಾಕೋದು ನಮ್ಮ ಕೆಲ್ಸ ಹೌದು ಮರಿಬಾರ್ದು" ಅಂದ, "ನಮ ಈರ ಅದೇನೋ ಹೇಳಾಕತ್ತಿದ ಸಾಲಿ ಕಲ್ತ ಹುಡ್ರೆಲ್ಲಾ ಸೇರಿ ಬರೋ ಮಂದಿಗೆಲ್ಲಾ ಓಟ ಹಾಕಂಗಿಲ್ಲಾ ನಾವೆಲ್ಲಾ ಅಂತ ಹೇಳಬೇಕು ಅಂತ ಮಾಡೀವಿ ಅಂತದ್ನಲೇ ದೊಣ್ಣ" ಅಂದ ದೊಣ್ಣ ಕುಡದ ಒಂದ ಪಾಕೀಟ ಸರೆ ನಿಷೆ ಜರ್ ಅಂತ ಇಳ್ದೋತು, ಏ ಏ. ಏನಾನ್ನಾಕತಿ ಯಜ್ಜ ಏನ್ಸುದ್ದಿ ಅಂದ, ಮುದ್ಕ ಹೊಂಟೋಗಿದ್ದ ಅವಸರದಿಂದ ದಾಟಾಕ ಹೋಗಿ ಗೂಟಗಲ್ಲು ಬಡ್ದು ದಪ್ ಅಂತ ಬಿದ್ದ ಸುತ್ಲು ನೋಡಿದ ಯಾರೂ ಇಲ್ದನ್ನ ಖಾತ್ರಿ

ಮಾಡ್ಕೊಂಡು ಗಡಬಡಿಯಿಂದ ಏಳಾಕ ಹೋದ ಲುಂಗಿ ಕಾಲಾಗ ಸಿಕ್ಕೊಂಡಿತ್ತು. ಏಳಾಕ ಆಗ್ದೆ ಒಡ್ಡಡ್ತಿದ್ದೋನ ಯಾರೋ ಎಬ್ಬಿಸಿದ್ರು, "ಸುರುಮಾಡ್ಕೊಂಡೇನೊ ರಾಮ ಎಲೆಕ್ಷನ್ ನಿಂದೆ ಬಿಡಪ್ಪ ಜೋರೈತಿ" ಅಂದ ಆತ. ಹಾಗೇನಿಲ್ಲಾ ಬಿಡಮಾರಾಯ, ಗೂಟಿಗಲ್ಲು ಕಾಣಲಿಲ್ಲಾ ಆಟ್ಕೊಂಬಿಟ್ಟ ಅಂತ ಹೇಳಿ ಪಾರಾಗಕ ನೋಡಿದ.

ಪರಪ್ಪನ ತಾವ ಸುದ್ದಿ ಮುಟ್ಟಿಸಿದಾಗ ಸುಂದಪ್ಪಗ ಶಾಕ್ ಹೊಡ್ದದಂಗಗಾಗಿತ್ತು. ಕುಂತ್ಕೊಂಡೆ ಯೋಜನೆ ಹಾಕತೊಡಗಿದ. "ಹ್ಯಾಂಗಾನ ಮಾಡಿ ಅವರ ಪಿಲ್ಯಾನ್ ಮುರಿಬೇಕಲೆ ಡೊಣ್ಣ ಇಲ್ಲಾಂದ್ರ ಹುಡ್ರೆಲ್ಲಾ ಸೇರ್ಕೋಂಡು ಚೆನ್ನ, ಭೀಮ, ಸಂತ್ಯಾರಾಜ ಚೌಗಲೆ, ಕಡೆಮನಿ ನಿಂಗೇಶಿ ಮ್ಯಾಗಳಮನಿ ದ್ಯಾಮ ಕಲ್ತೋರೆಲ್ಲಾ ಕುಡ್ಕೊಂಡು ಭಾರಿಭಾರಿ ಇಚಾರ ಮಾಡತೊಡಗಿದ್ರು. ಅವರೆಲ್ರಿಗೂ ಲೀಡರ್ ಅಂದ್ರ ದೇವಿರವ್ವನ ಮಗ ಲಿಂಬೇಶಿ. ಎಸ್ಸಲ್ಸಿಯೊಳಗ ಎಂಟಸಲ ಉಲ್ಡದ್ದ. ಊರಾನ ಹುಡುಗಿಯರಿಗೆಲ್ಲಾ ಕುಂಕಮ, ಟಿಕಳಿ, ಪೌಡರ್, ಬ್ರಾ ಅವು ಇವಂತ ತಂದ್ಕೊಟ್ಟಿದೆ, ಬ್ಯಾಡದವರಿಗೆ ಯವ್ವ ಯಕ್ಕ ಅಂತಿದ್ದ ಬೇಕಾದವರಿಗೆಲ್ಲಾ ಏನೇ ಬಾರೆ ಹೋಗೆ ಅಂತ ಅಂದು ಒಂದೆಲ್ಡ ಸಲ ಉಗಳಿಸ್ಕೊಂಡದ್ದ. ಅವರಿವರ ಹತ್ರ ಲಾಟರಿ ಎತ್ತಿ ಹುಡ್ರ ಮುಂದೆಲ್ಲಾ ದೊಡ್ಡದೊಡ್ಡ ಮಾತಾಡಿ, ಪಟ್ಟೇಶಿ ಅಂಗಡಿಯೊಳಗ, ಎಲ್ರಿಗೂ ಸಿಂಗಲ್ ಚಾ ಕುಡ್ಸಿ ಒಂದೊಂದು ಚೀಟಿನ ಚಟ ಮಾಡ್ಸಿದ್ದೆ ಹುಡ್ರೆಲ್ಲಾ ಅವನನ್ನ ಲೀಡರ್ ಮಾಡಿದ್ರು. ಅವನಿಗ ಏನೂ ಗೊತ್ತಿಲ್ಲದಿದ್ರೂ "ನೋಡ್ರಪ್ಪ ಮನ್ನೂರ ಸೇತಮಿ ಸರಿಯಾಗಿಲ್ಲಾ, ದಾರಿ ಹ್ಯಾಂಗತಿ ನೋಡಿರಲ್ಲಾ ರಾತ್ರಿ ಹೊತ್ನಾಗ ಯಾವಾನಾರ ಬರೋಹಂಗೈತೆನ್ರೊ ಮರಾಯ, ಯಾವಾನಾರ ಕೊಂದು ಜಾಲಿ ಕಂಟಿಯೊಳಗ ಒಸದ್ರು ಯಾರು ಕೇಳೋರು ದಿಕ್ಕಿಲ್ಲಾ" ಭಾಷಣ ನಡದೆ ಇತ್ತು. ಅವನೆಲ್ಲಿ ದೊಡ್ಡಲೀಡರ್ ಆಗಿ ಬಿಡ್ತಾನೊ ಅಂದದ್ದೆ ದೊಡ್ಡಮನಿ ದೇವಿರವ್ವನ ಮಗ ಲಿಂಬೇರೆ, ನೋಡ್ರಪ್ಪ, ನಮ್ಮೂರಕೇರಿ ಹೊಳ ಎತ್ಲಾಕು ನಮ್ಮೂರಮಂದಿ ಹೆಂಡ ಸರೆ ಕುಡದು ವಾತಾವರಣ ಕೆಡಾಕ ಹತ್ಯೆತಿ. ನಾವೇನ ಮಾಡಬೇಕಪ್ಪ ಅಂದ್ರ, ಇವೆಲ್ಲಾ ಆಗೋವರಿಗ ನಾವ್ಯರೂ ಓಟ ಹಾಕೋದೆ ಇಲ್ಲಾಂತ ಹಟ ಹಿಡಿಬೇಕು. ಹಂಗಾರ ಕೆಲ್ಸ ಆಕೈತಿ ಅಂತೇಳಿ ಎದ್ದನಿಂತ ಮಾತಾಡಿದ ಯಾರು ಅವನ ಕಡಿ ಹೆಚ್ಚು ಗಮನ ಕೊಡದಕ ಬೇಚಾರಾಗಿ ಕುಂತ. ಒಂದ ತೀರ್ಮಾನಕ ಬಂದಂಗಿತ್ತು. ಏನಾದ್ರು ಈಸಲ ಎಲೆಕ್ಷನ್ ಮಾಡಬಾರ್ದು, ಐದಹಳ್ಳಿ ನಡುವೆ ಇರೋ ಊರಿದು. ಇಲ್ಲೆ ಓಟಿನ ಬೂತಿರೋದು ಸರಿಗ ದಾರಿ ಇಲ್ಲಾ, ಕುಡಿಯಾಕ ನೀರಿಲ್ಲಾ, ಹೆಂಡ ಸರಾಯಿ ಮಾತ್ರ

ಸಿಗತ್ತೈತಿ, ಹಾಳೂರಾಗ, ಸಾಲಿಕಲ್ತೊರೆಲ್ಲಾ ಗೊಣಗಾಡ್ತಿದ್ರು, ಅವರು ಹಂಗ ಆಡ್ಲಿಕ ಸರಾಯಿ ಅಂಗಡಿ ಲಿಂಗ ದೇವರು ಕಾರಣ. ರೊಕ್ಕ ಇಲ್ಲದೆ ಸಾಲ ಕೇಳಾಕ ಹೋದ ಹೂಡ್ರಿಗೆಲ್ಲಾ ಗದರಿಸಿ ಕಳಿಸಿಬಿಡ್ತಿದ್ದ. ಹೆಚ್ಚು ಕಮ್ಮಿ ಮಾತಾಡಿದ್ರ ಮನಿಮಂದಿಗ ಹೇಳ್ತಾನಂತ ಬಾಯಿ ಮುಚ್ಕೊಂಡು ಎಲ್ರು ಈ ದಾರಿಹಿಡ್ಡಿದ್ರು. ಅವರ ಯೋಜನೆ ಇಡಿ ಊರಿಗ ಹರಡಿಕೊಂಡಿದ್ದೆ ಮಂದಿ ಕಂಡ ಕಂಡತಾದ ಹುಡ್ರನೆಲ್ಲಾ ನಿಲ್ಸಿಕೇಳಿದ್ದೆ ಕೇಳಿದ್ದು. ನಾನು ನೀನು ಒಪ್ಪಿಡಬೇಕಾದೀತು. ಅಂದ ಪರಪ್ಪ. "ಅದೆಂಗಕಾಕ ಸಾಲ ಹುಡ್ರ ಒಗ್ಗಟ್ನಾಗ ಅದಾರ, ನಿನ್ನ ಕಂಡ್ರ ಕೆಂಡ ಕಾರ್ತಾರ" ಅಂತ ಅಂದೇ ಬಿಟ್ಟ "ಯಾವನ್ಲೆ ಅವ ಹಿಂಗ ಅಂದೋನು, ನಾ ಎನೆ ಮಾಡಿದ್ರು ಊರ ಹಿತಕ ಮಾಡ್ತೀನಿ, ಊರಗ ನಾನೇನ ಮಾಡಿಲ್ಲಾ, ನಾ ಯಾವಾಗರ ಮೆಂಬರ ಆಗೀನ. ಛೇರ್ಮನ್ ಆಗೀನಾ, ಏನಾಗೀನಿ ಯಾರನ್ನದ್ರು ಕೇಳು, ನನ್ನ ಹೆಸರೆ ಹೇಳ್ತಾರ." ಬಿಸಿಯಾಗಿದ್ದ ಸೂರಪ್ಪ. ನಿನ್ನ ನೀಚ ಕೆಲ್ಸಕ ಒಟ ಯಾರ ಹಾಕ್ತರ ಹೇಳು ಅಂತ ಸಣ್ಣಧನಿಯೊಳಗ ಅವನಿಗ ಕೇಳದಂಗ ಹೇಳಿದ ಡೊಣ್ಣಿ: ಏನಂದೆ ಅಂದ ಸೂರಪ್ಪ, "ಏನೂ ಇಲ್ಲಾ ಭಾಗ್ಯ ಜೋತಿ, ತಂದೋನ ನೀನು, ಊರಿನ ರೇಷಾನ್ನಂಗಡಿ ತಂದೋನು ನೀನು ಸಿಮೇಣಿ ನಿನ್ದೆ ಕಾಲ್ದಾಗ ಬಂದಿದ್ದು" ರಾಮ ಉಬ್ಬಿಸಿದ. ನಾಕ ಅಕ್ಷರ ಕಲ್ಕೊಂಡು ದಿಮಾಕ ಮಾಡಿದ್ರ ನನ್ನ ತಾವ ನಡಿಯಂಗಿಲ್ಲಾ, ನನ ಮಗ ಮೇಷ್ಟ್ರದಾನ, ಅಂದ ಸೂರಪ್ಪ. ಹೌದ ಹೌದು ಅಂದ ರಾಮ. ಇಬ್ರೂ ಬಹಳ ಹೊತ್ತು ವಿಚಾರ ಮಾಡಿದ್ರು. ರಾಮಗ ಎಲ್ಲಿ ಗಂಟು ಎಂಟಣಿಯಾಗಿ ಹೊಕೈತಿ ಅನ್ನೋದೆ ಚಿಂತೆ, ದುಡಿದಿಲ್ದೆ ನಾಕ ಕಾಸು ಮಾಡ್ಕೋಳಾಣಂದ್ರ ಇವನದೊಂದ ಕಾಟ. ನಮ್ಮೂರಾಗ ಎಂಥೆಂಥ ಮಂದಿ ಇಲ್ಲಾ, ನೋಡಾನ ಏನ ಆಕೈತಿ ಅನ್ಕೊಂಡ.

ಗ್ರಾಮ ಪಂಚಾತಿ ಎಲೆಕ್ಷನ್ ಭಾರಿ ನಡದಿತ್ತು, ದೊಡ್ಡಮನಿ ದೇವು ಮುಂದಿನ ಮನಿ ರಾಘ ನಿಂತಿದ್ರು, ರಾಘ ಏನೆಲ್ಲಾ ಕಸರತ ಮಾಡಿ ಇಡಿ ಊರಿಗೂರಿಗೆ ಹೋಳಗಿ ಊಟ ಹಾಕ್ಸಿದ, ಹೆಂಡ ಕುಡ್ಸಿದ. ಕಂಡ ತಿನ್ಸಿದ, ಗೆದ್ದ ಬರ್ಲೆ ಇಲ್ಲಾ. ತಿಂದಿದ್ದ ಇವುನ್ಹೂ ಹಾಕಿದ್ದು ಅವನಿಗ. ಎಲೆಕ್ಷನ್ ಅಂದ್ರ 'ಮಜಾ ಕಣಲೇ ತಮ್ಮ' ಅಂಥ ಡೊಣ್ಣಿ. ಡೊಣ್ಣಿ ಇಡಿ ಮಾರಿನ ಮುದುಕರಿಗ ಮುಂಡ್ರಿಗ, ಹುಡಿಗ, ಹೆಳವರಿಗ, ಎಲ್ಲಾರಿಗೂ ಸುದ್ದಿ ಮುಟ್ಟಿಸಿ, ಭಾಷಣ ಬಿಗದು, ಊರ ಮುಖಂಡ್ರು ಏನ ಹೇಳ್ತಾರ, ಯಾರಿಗ ಹಾಕ ಬೇಕಂತಾರನ್ನೋರನ್ನ ಕೆಳ್ಕೊಂದು, ಸರಿಯಾಗಿ ಮಂದಿ ಮನಿಗ ಹೋಗಿ ಪಾಕೀಟ ಸಣಯಿ ಮುಟ್ಸಿ, ಕುಂಕಮಕೊಟ್ಟ, ಬೇವನತಪ್ಲ ಹಿಡದು ಆಣಿ ಮಾಡಿಸ್ಕೊಂಡ ಬರ್ತಿದ್ದ,

ಎಲೆಕ್ಷನ್ ಬಂತಂದ್ರ ಹುಡ್ರೆಲ್ಲಾ ಅವನ ಸಂಗಡ ಇರ್ತಿದ್ದು, ಖಾರ ಮಂಡಕ್ಕಿ, ಪೆಪ್ಪರ ಮೆಂಟು ಬಿಸ್ಕತ್ತು ಕೀಸೆದಾಗ ಇದಿದ್ದೆ. ಯಾರಾರು ಕಣ್ಣ ಕಾಣದವಂದ್ರ ಹೋಗಿ ಹಾಕಿ ಬರ್ತಿದ್ದ, ಎಲ್ಡನೇ ಸಲ ಛಾನ್ಸ್ ಸಿಕ್ಕಿದೆ, ಹಾಕಿದ್ದ ಮಾರ್ಕನ್ ಬರ್ತಾನೆ ಎಣ್ಣಿ ಹಚ್ಕೊಂಡಿದ್ದ ತಲಿಗ ತಿಕ್ಕಿ ಒರಿಸಿಕೊಂಡ ಬಿಡ್ತಿದ್ದ. ಡೊಣ್ಣನ ಎಕ್ಷನ್ ಪರಿ ಬೆಳಿತಾನೆ ಹೊಕಿತ್ತು.

ಮುದುಕಿ ಮಾದೇವಿತಾಯಿ "ಲೋ ಹುಡ್ರಾ ಹಿಂಗ್ಯಾಕ ಮಾಡ್ತಿರೋ ನಾ ಇನ್ನೇಟ ದಿನ ಇರಾಕ ಒಂದು ಸಲ ಓಟ ಹಾಕಿ ಸತ್ತ ಹೊಕ್ಕೀನಿ" ಅಂದ್ಲು. ನೀ ಹಿಂಗ ಸಾಯಂಗಿಲ್ಲಬೀ ಯಾಕ ಹೆದರ್ತಿ ಇನ್ನೂ ಎಲ್ಡ ಮೂರ ಎಲೆಕ್ಷನ್ ನೋಡ್ತಿ ಪಾಕೀಟ ಕುಡಿತಿ ಅಂದ ಅವನು. ಮುದುಕಿ ಬಾಯಿ ತಗದು ನಕ್ಕೇ ಬಿಟ್ಲು. ಸೊಂಡಗ ಭರಿ ನಿರಾಶೆ ಆಗಿತ್ತು ಪಾರ್ಸಿಹೊಡದ ಚೊಂಚೆ ಗ್ಯೆಯಿಂದ ಪಾಕೀಟು–ಓಟು ಅಂತ ಹೇಳಿ ಊರಾಗ ಸಾರಿಬಂದಿದ್ದ, ಈಗ ಎಲೇಕ್ಷನ್ ಇಲ್ಲಾಂದ್ರ ಸರೆ ಇಲ್ಲಾ, "ಥು ಹಾಳಮನಿ ಹುಡ್ರು ನಾಕ ಅಕ್ಷರ ಕಲ್ಕೊಂಡು ಎನ ಎಗರಾಡ್ತಾವ ಇವರಪ್ಪನ ಮನಿಂದ ಕೊಡೊ ಹಾಗ ಮಾಡ್ತಾರಂತ" ಹೇಳೆ ಬಿಟ್ಟ. ಡೊಣ್ಣ ಪರಪ್ಪನ ಜೋಡಿ. ಹುಡ್ರ ಒಗ್ಗಟ್ಟನ ಹ್ಯಾಂಗ ಒಡಿಬೇಕಂತೇಳಿ ಯೋಚ್ನೆ ಮಾಡ್ತಿದ್ರು. ಯೋಚ್ನೆ ಮಾಡಿದ್ದೆ ಮಾಡಿದ್ದು.

ಮಟಮಟ ಮದ್ಯಾಹ್ನ ಆಗಿತ್ತು, ಮಂದಿ ಸಿಕ್ಕಾರಂತ ಎಲೆಕ್ಷನ್‌ನವರು ಬಂದು ಹನ್ಮಂತ ದೇವರ ಗುಡಿತಾವ ಕಾರ ನಿಲ್ಸಿ ಇನ್ನೇನು ಪರಪ್ಪ–ಡೊಣ್ಣ ಬಂದು ಕುಂಡ್ರಾಕ ಕಂಬ್ಳಿ ಪಂಬ್ಳಿ ಅಡ್ಜೆಸ್ಟ್ ಮಾಡಿ ಸಣ್ಣ ಹುಡ್ರನ್ನ ಸೇರ್ಸಿ ಜೈ ಅನ್ಸಿ ರೊಕ ಹಿಕ್ಕೊಬೇಕು ಅನ್ನೊದ್ರಾಗ ಎಲ್ಲಿ ಇಸ್ಪಿಟ್ ಆಡ್ತಾ ಕುಂತಿದ್ರೊ ಸಾಲಿ ಹುಡ್ರು ಬಂದೋರೆ ಏಕವಚನದಾಗ, ಮಾತಾಡಾಕ ಸುರುಮಾಡಿದ್ರು. ನಿವೇನ ಮಾಡಿರೋ ನಮ್ಮೂರಿಗ ಒಂದ ದಾರಿ, ಒಂದ ನೀರಿನ ಟ್ಯಾಂಕಿ, ಒಂದ ಸೇತಮಿ, ಒಂದ ಬಸ್ಸು ಆಳಿಗೊಂದ್ರ ಹಿಗ್ಗಾ ಮುಗ್ಗಿ ಜಗ್ಗಾಡಿದ್ದೆ ಜಗ್ಗಾಡಿದು, ಅದ್ರಾಗ ಯಾವಾನೋ ಕೆಡಗೇಡಿ ಒಂದ ಕಲ ಎತ್ಕೊಂಡವನೆ ಕಾರಿನ ಗಾಜಿಗ ಹೊಡ್ದ ಬಿಟ್ಟ ಗಾಜು ಟಳ್‌ಂತ ಹೊಡದಿದ್ದೆ. ನಿಂತ್ಕೊಂಡಿದ ಸಣ್ಣ ಹುಡ್ರು ಆಳಿಗೊಂದು ಕಲ ತಗೊಂಡು ಕಾರಿ ಕಡಿಗ ಬೀಸತೊಡಗಿದ್ರು, ಎಲೆಕ್ಷನಿನ ಬಂದೊರೆಲ್ಲಾ ನಾ ಮುಂದ ನೀಮುಂದ ಅಂತೇಳಿ ಕಾರ್ನಾಗ ಕುಂತಿದ್ದೆ ಕಾರ ಬಿಟ್ಕೊಂಡು ಹೋಗಿ ಬಿಟ್ಟು.

ಡೊಣ್ಣ ಪರಪ್ಪ ದಕ್ಕದ ರೊಕ್ಕದ ರೊಕ್ಕಕ ಕೈ ಕೈಹಿಚಗಿಡ್ತಾ, "ಬೋಳಿಮಕ್ಳು ಇನೊಂದೀಟ ತಡಮಾಡಿ ಬರಬಾರದಾಗಿತ್ತ. ಹೊತ್ತು ಗೊತ್ತಿಲ್ಲಾ, ನಾಳೆ ಆರ್ಸಿ ಬಂದ್ರ ನಮ್ಮೂರಿಗ ಪೋಲಿಸ್ನೋರ ಕಳಸಿ ಮುಕಳಿ ಮ್ಯಾಲ ಒದಿ ಹಾಕಸ್ತಾನಲ್ಲಾ ಅದಾಗ ತಿಳಿತೈತಿ.

ನೋಡ್ತಿರಲೇ ಡೊಣ್ಣ ಏನ ಮಾಡಸ್ತೀನಿ ಇವರ ಫಜೀತಿನಾ" ಅಂತ ಪರಪ್ಪ ಒದರಾಡ ತೊಡಗಿದ "ಕಾಕ  ಈಗೇನೂ ಮಾಡಬ್ಯಾಡ ರಾತ್ರಿ ಹೆಂಡ ಕುಡದಿದ್ದೆ ಬಾಯಿಗ ಬಂದಂಗ ಬೊಯ್ಯೊನೂ, ಯಾವಾನಾರ ಬಾಯಿ ಬಿಟ್ಟ ಅಂದ್ರ ಆ ಮ್ಯಾಲ ನೋಡಾನಂತ" ಅಂದಿದ್ದೆ ಅದನನ್ನ-ಉಬ್ಬಿಸಿ ಕಂಠಮಟಕುಡದ ಬಂದಿದ್ದ. ಕಚ್ಚಿ ಮ್ಯಾಲೆತ್ತಿ ಕಟ್ಟಿದ್ದೆ ಹೆಂಗೆಂಗ ನಿಷಾ ಏರತೈತೊ ಹಂಗೆಲ್ಲಾ ಬೊಯ್ಯಾಕತ್ತಿದ. ಯಾರೋ ಕೇಳಿಸಿಕೊಂಡಿದ್ದ ಗುಟಕಾಗೋಷ್ಠಿ ನಡಸಿದ ಹುಡ್ರಿಗ ಸುದ್ದಿ ಮುಟ್ಸಿದ್ರು. ತಡಮಾಡದಂಗ ಹುಡ್ರು ಓಡಿ ಬರಾಕ ಹತ್ತಿದ್ರು. ಡೊಣ್ಣ ಹೆದರಿ ಮಾರಿಮನಿ ಹೊಕ್ಕೊಂಡ. ಮಾರಿ ಜಾಡಿಸಿ ಒದ್ದು ಹೊರಗ ಹಾಕಿಗ, ಅದನ್ನೆ ಕಾಯ್ತಿದ್ದ ಹುಡ್ರು ಕಾಲಿಲೆ ಜಾಡಿಸಿ ಒದಿಯಾಕ ಹತ್ತಿದ್ರು. ಪರಪ್ಪ ಗುರ್ ಅನ್ನಿಲ್ಲಾ ಕಡ್ಕೊಂಡು ಡೊಣ್ಣಗ ಹೊಡಸಿ ಜ್ವಾಳದ ಮುದ್ದಿ ವಾಡು ಮಡರಿಕೊಂಡ.

❖

## ೬. ಕಲ್ಲೇ ಕಲ್ಲೇ ಕಥೆ ಹೇಳು

ಪಟ್ಟದ ಪಡಿಪಾಟ್ಲು ಬ್ಯಾಸರಾಗಿ ತನ್ನ ಹಳ್ಳಿಯ ನೆನಪಾಗಿ ಬಸ್ಸು ಹತ್ತಿದ ಜೀರ್‍ಲಿಂಗ ಕಿಟಕಿಯ ಪಕ್ಕ ಕುಂತು ನೆಮ್ಮದಿಯ ಉಸಿರು ಬಿಟ್ಟ. ತನ್ನ ಹೆಂಡತಿ ಮಕ್ಕಳಿಗೆ ಏನೋ ಸಬೂಬು ಹೇಳಿ ಅವನೆದೆಯೊಳಗೆ ತೂತು ಕೊರೆಯುತ್ತಿದ್ದ ಸವಾಲುಗಳಿಗೆ ಜವಾಬು ಹುಡ್ಕಕಾಕ ಹೊಂಟಿದ್ದ ಅದೇ ಮಾಮೂಲ ಪೀರಾಪುರದ ದುರ್ಗೇಶಿ ಹೋಟೇಲ ಮುಂದಿನ ನಿಲ್ದಾಣವಿಲ್ಲದ ಜಾಗದಾಗ ಬಸ್ಸಿಳಿದು ರೂಢಿಯಂತೆ ದುರ್ಗೇಶಿ ಅಂಗಡಿಯೊಳಗೆ ಖಾರಮಂಡಕ್ಕಿ ಮಿರ್ಚಿ ತಿಂದು ಸಿಂಗಲ್ ಚಾ ಕುಡ್ದವನೆ ಹಳ್ಳದಾಟಿ ಸೂರ್ಯಹುಟ್ಟೊ ದಿಕ್ಕಿಗೆ ತನ್ನೂರ ಹಾದಿ ಹಿಡದು ಹೊಂಟ. ಹುಟ್ಟಿ ನಲ್ವತ ವರ್ಷ ಆದ್ರೂವೇ ಸರ್ಕಾರದ ನಜರಿಗೆ ಈ ಹಾಳ ಸಂಪೆನಳ್ಳ ದಾರಿ ಕಾಣ್ವಲ್ದಲ್ಲಾ ಅಂತೇಳಿ ಹಳಹಳಿಸುತ್ಲೆ, ತೆಂಬವೇರಿ ತಗ್ಗಿಗೆ ಇಳಿದಿದ್ದ ಎದಿರಾಗುವ ಎಲ್ಲಾ ದೇವರುಗಳಿಗೆ ನಮಸ್ಕರಿಸೋ ರೂಢಿಯನ್ನ ಅಂವ ಸಾಲಿಗ ಹೋಗಾಕ ಸುರುಮಾಡಿದ ದಿನದಿಂದ್ಲೆ ಅಂಟಿಸ್ಕೊಂಡಿದ್ದು ಸಾಲಿಕಲ್ತು ದೊಡ್ಡೋನಾಗಿ ಸರ್ಕಾರದ ಕೆಲ್ಸ ಸಿಕ್ರುನೂವೆ ಎಷ್ಟೇ ಪ್ರಯತ್ನ ಪಟ್ರು ಜುಟ್ಟು ಜುಲ್ಮಿಯಿಂದ ಬಿಡಬೇಕಂದ್ರು ಅವನಿಗೊತ್ತಿಲ್ಲದೆ ಎರಡೂ ಕೈಗಳು ತಮ್ಮಷ್ಟಕ್ಕ ತಾವೆ ಜೋಡಿಸ್ಕೊಳ್ತಿದ್ವು, ಹಂಗೇ ಸಂಪೇನಳ್ಳಿ ಮುಂದಿನ ಹಳೇ ಹುಣಿಸಿಮರ ಕಂಡೊಡನೆ ಹೆದರಿಕೆಯೂ ಆಗ್ತಿತ್ತು. ಬಹಳ ವರ್ಷಗಳ ನಂತರ ಊರಿಗ ಬಂದಿದ್ದ ಜೀರ್‍ಲಿಂಗಗೆ ಊರೇನು ಹೊಸದಾಗಿ ಕಾಣ್ಲಿಲ್ಲಾ ಆಗ ಕಾಫಿ ಸೀಮಿಗ ಹೋಗ್ತಿದ್ದ ಮಂದಿ ಈಗ ಬೆಂಗಳೂರು, ಗೋವಾ, ಕೇರಳಕ ಹೊಂಟಾರ. ಅದೇ ಗುಡಿ ಇಸ್ಕೊಲ



ಪಕ್ಕ ದನಗಳು, ಎತ್ತಗಳು ಯತಾವತ್ತಾಗಿ ಕಟ್ಟುವುದು ಸಣ್ಣ ಹುಡ್ರು ಹೆದರಿ ಮನಿ ಹಿಂದೊ ಮುಂದೋ ಎರಡಕ್ಕೆ ಕುಂದ್ರೋದು ಕೈಬೋರು ಕೆಟ್ರ ಎರಡ ಮೂರು ಮೈಲು ಸೈಕಲ್ಲು, ಕಾಲ್ನಡಿಗೆಯಿಂದ ಹೋಗಿ ನೀರ ತರೋದು ನಡದೇ ಇತ್ತು. ಒಂದೇ ಒಂದು ಬದ್ಲಾವಣೆ ಅಂದ್ರ ಬಂಡೂರ ಗುಡ್ಡಕ್ಕ ಪಾತಿ ಮಾಡ ಹೊಕ್ಕಿದ ಅವನ ಊರಿನ ಹಂಡು, ಪಾತು ಇಪ್ಪತ್ತ ವರ್ಷದ ಹಿಂದ ಗುಡ್ಡದಿಂದ ತಂದಿದ್ದ ಅತ್ತಿ ಹಣ್ಣಿನ ಸಸಿಯನ್ನ ದೀಪ್ಮಲಿ ಕಂಬದ ತಾವ ಇಂಬ ಮಾಡಿ ಅವನೆ ಕೈಯಾರ ನೆಟ್ಟದ್ದು, ಆಡು, ಕುರಿ, ದನಗಳು ಕತ್ತರಿಸಿ ತಿಂದ್ರು ಛಲದಂಕ ಮಲ್ಲನಂತೆ ಚಿಗುರಿ ಹೆಮ್ಮರವಾಗಿ ನಿಂತಿತ್ತು.

ಯಾವ್ದೊ ಊರ ದಾಸಯ್ಯ, ಹಿಂಗ ಬಿಟ್ರ ಮಂದಿ ಕಟ್ಟಿನ ರಾಡಿ ಎಬ್ಬಸ್ತರಂತೇಳಿ ಮೂರ ಕಲ್ಲುಗಳನ್ನ ತಂದು ಒಂದಕ ಕೆಮ್ಮಣ್ಣು ಇನ್ನೊಂದಕ್ಕ ಸುಣ್ಣ ಮತ್ತೊಂದನ್ನ ಹಂಗೆ ಬಿಟ್ಟು ವಿಭೂತಿ ಬಳದು ಕುಂಕಮ ಹಚ್ಚಿ ಬಿಕ್ಷೆಬೇಡಿ ಊದಿನ ಕಡ್ಡಿ ಹಚ್ಚಿ ಊರ ಕಾಪಾಡೋ ಕರ್ಗಲ್ಲಪ್ಪನ ಮೂರ ಮಕ್ಕಳು, ಮಾನಿಂಗು, ಕನ್ನಿಂಗು, ಶಂಬನಿಂಗು ಅಂತೇಳಿ ಹೆಸರಿಟ್ಟು ಹೋದಿಂದ ಮಂದಿ ಕಟ್ಟಿ ಬಿಟ್ಟು ಕೆಳಗ ಕುಂದ್ರಾಕ ಹತ್ತಿದ್ರು.

ಈ ಎಲ್ಲಾ ಪುರಾಣ ತಿಳಿಯದ ಜೇರ್ನಿಂಗ ಕಟ್ಟಿಯನ್ನೇರಿ ಕಾಲಮ್ಯಾಲ ಕಾಲ ಹಾಕ್ಕೊಂಡು ಕುಂದ್ರಾನ, ಕಸಿವಿಸಿಗೊಂಡ ಮಾನಿಂಗು, ಕನ್ನಿಂಗು, ಶಂಬನಿಂಗು, ಕತಿಹೇಳಾಕ ಸುರು ಹಚ್ಕೊಂಡ್ರು, "ಲೇ ತಮ್ಮ ನೀ ಪಟ್ಣಸೇರ್ಕಂಡ ಒಳ್ಳೆ ಕೆಲ್ಸ ಮಾಡ್ದೆ ನೋಡು. ಈ ಊರನ್ನೊ ಊರೆ ಗಬ್ಬೆದ್ದ ಹೋಗ್ಯೆತೆ. ಸಣ್ಣರೋ ದೊಡ್ಡೋರು ಅನ್ನೋದೆ ಇಲ್ಲಾ, ಆಡಿದ್ದೆ ಆಟ ಹೂಡಿದ್ದೆ ಲಗ್ಗೆ. ಅಪ್ಪ ಕುಡಿತಾನ ಮಗ ಕುಡಿತಾನ ಮೊಮ್ಮಗನೂ ಕುಡಿತಾನ. ಆದ್ರ, ನಿಂಗೊಂದ ಕತಿ ಹೇಳ್ತಿನಿ ಮನ್ಸಿಟಕೇಳು."

ಜೇರ್ನಿಂಗ ಗಾಬ್ರಾಗಿದ್ದ, ಬಾಯಿಮುಚ್ಕಂಡ ಗುಪ್ ಚುಪ್ಪಾಗಿ ಕತಿ ಕೇಳಾಕ ಹತ್ತಿದ.

ನಿಂಗೂಗೊತ್ತಲ್ಲ, ಅಕಿ ಮದ್ವಿ ಆದಾಗ ಬರಿ ಹದನಾಕವರ್ಷ, ಎದಿಗಳು ನಿಗರಿ ತೆಂಬಗಳಾದಿಂದ ಮುಟ್ಟಾಗಿ ಊರಿಂದೂರಿಗೆ ಊಟ ಹಾಕಿ ಸುದ್ಧಿ ಮಾಡಿದ ಅವಳ ಕಾಕ ಆವಾಗಲೇ ಇಡಿ ಊರ ಆಡ್ನಾಡಿ ಹುಡ್ರು ಹೆಣ್ಣಾಯಿ ಹಿಂದ ಜೊಲ್ಲು ಸುರಿಸ್ತಾ ಅಡ್ಡಡೊ ಗಂಡನಾಯಿಗಳಂಗೆ ಬೆನ್ನಹತ್ತಿದ್ರು. ಅಕೀ ಒಮ್ಮೆ ನಿನ ಸಂಗಡನೂವೆ ಎತ್ತಮೇಯಿಸಾಕ ಅಡಿವೀಗ ಬಂದಿದ್ಲಂತೆ, ಆಟ ಆಡೋ ಮುಂದ ನಿನ್ನ ಗುಂಪನಲ್ಲೇ ಇದ್ಲು ನೀನು ಹೋದ ಹತ್ರ ಎಲ್ಲಾ ಅಡ್ಡಾಡಿದ್ಕ ಹುಡ್ರು ಭಲೇ, ಛಾನ್ಸ್ ಹೊಡ್ದ ನಮ್ಮ ಜೇರ್ನಿಂಗ ಅಂತೇಳಿ ಊರಾಗೆಲ್ಲಿ ಗುಲ್ಲೆಬ್ಬಿಸಿದ್ದು ನೆಪ್ಪೈತೋ ಇಲ್ಲೋ, ಅಕಿ ಚೆಂದಕ್ಕ ಮಳ್ಳಾಗಿ ಮೇಲಿನ ಮನಿ ಮಾದ ಸಾಲಿಕಲ್ತೋನು ಅಕೀನ ಅನುಭವಿಸಾಕ ಬೇಕಂತ

ನಿರ್ಧಾರ ಮಾಡ್ಕೊಂಡಿದ್ದ. ಅಷ್ಟೇ ಯಾಕ, ಮಂದಿ ಹೊಲ್ದಾಗ ದಗ್ದಮಾಡೋ ಕಂಠಿ, ಸಾಂಬ, ಸೇವು ಹಿಂಡಿಗ ಹಿಂಡೆ ನಡುರಾತ್ರಿ ಮಟಾನು ಮೀಟಿಂಗ ಇಟ್ಕಂಡ ಅವರೆಲ್ಲಿರ ನಿದ್ದಿ ಕೆಡ್ಸಿರೋ ಚೆಂದುಳ್ಳ ಚೆಲವಿನ ಹೆಂಗಾನ ಮಾಡಿ ಮುಟ್ಟಾಕ್ಕಂತ ಪ್ಲಾನ್ ಮಾಡ್ತಿದಂಗೆ ಅನುಕೂಲಸ್ತನಾಗಿದ್ದ ಅವಳ ಕಾಕ ತಿಂಗಳ ತುಂಬೋದ್ರಾಗ ಮೂಡಲಸೀಮೆಯೊಳಗ ಗಂಡನ್ನ ನೋಡಿ ಮದ್ವೇನೂ ಮಾಡಿಬಿಟ್ರು. ಅರೇ ಮಾದ್ವಿಯಾಗ್ತಿದಂಗೆ ಹರೇದ ಹುಡ್ರ ಮೀಟಿಂಗು ನಿಂತ ಹೋತು.

ಅಕೀ ಮದ್ವಿಯಾಗಿ ಹೋದೋಳು ವಾಪಾಸಾಗಿದ್ದೆ ಹೆಣ್ಣಕೂಸನ್ನ ಕೈಯಾಗ ಎತ್ಕಂಡು. ಎರಡನೇದಪ ಹೋಗಿ ಮೂರ್ನೆಸರ್ತಿ ಬಂದಾಗ ಹದಿನೆಂಟರ ಹರೆಯ, ಎರಡು ಹೆಣ್ಣು ಹೊತ್ತು ವಿಧವೆಯಾಗಿದ್ಲು. ವಿಧಿಯ ಆಟಾನಾರು ನೋಡು, ತುಂಬು ಯೌವ್ವನ ತಂಪುರಾತ್ರಿಯಲ್ಲೂ ಕಾವೇರುವ ಮೈ ಹೊರಳಾಡಿ ಹೊರಳಾಡಿ ಕಳೆಯುತ್ತಿದ್ದಂತೆ ರಾತ್ರಿಕಳದು ಹಗಲು ಬಂದಂಗ ಹಿರಿಮಗಳು ಎದಿಮಟ ಬೆಳದು ಮದ್ವಿ ಮಾಡ್ಕೊಳೋ ಹಂಗಾದ್ಲು. ಅಪ್ಪನ್ನ ಕಳ್ಕಂಡ್ಲು, ಚಿಕ್ಕಪ್ಪನ್ನ ಕಳ್ಕಂಡ್ಲು. ತಾನೇನು ಕಮ್ಮಿಯಲ್ಲ ಅಂತ ತೋರಿಸಿಕೊಳ್ಳಾಕ ಹಡಬಿ ಮಂದಿ ಮುಂದ ಎದಿ ಸೆಟಿಸಿ ನಿಂತ್ಲು. ಆದ್ರೂ ಅವನ ಬರ್ತಿದ್ದ ಇವನ ಬರ್ತಿದ್ದ ಇಲ್ಲ ನಮ್ಮೂರ ನಂಜುಂಡಿನ ಇಟ್ಕೊಂಡಾಳಂತ ಸಾವರ ಸುದ್ಧಿಗಳು ತಾವೇ ಖುದ್ದಾಗಿ ಕಂಡೋರಂಗ ಮಂದಿ ಮಾತಾಡ್ತಿದ್ರು. ಅವಳ ಎದಿಯೊಳಗಿನ ಮಾತನ್ನ ಬಲ್ಲವರಾದ್ರು ಯಾರು ಹೇಳು? ಅಂತೆ ಕಂತೆಯ ಸಂತೆಯೊಳಗ ಬದಕನ್ನ ಸವಾಲಾಗಿ ತಗೊಂಡಿದ್ದ ಅಕಿ ಸತ್ತಾಗ ಸುತ್ತಹಳ್ಳಿಗಳೇ ಸುಂದ ಆದ್ವು ಅಂತೀನಿ. ಹಿರಿಮಗಳ ಮದ್ವಿಗ ಹೆಚ್ಚುಕಮ್ಮಿ ಅವಳ ವಯಸ್ಸಿನವನೇ ಆದ ಅಳಿಯನ ಹಿಂದ ಸಾಮಾನ ತಗೊಂಡ ಬರಾಕ ಅಡ್ಡಾಡ್ತಿದ್ಲು. ಸಾಲದಕ್ಕೆ ಅಕಿ ಚಿಕ್ಕಪ್ಪನ ಖಾಸಮನಷ್ಯ ಡಂಕಪ್ಪನ ಹಿಂದ ಹಗಲ್ಲನ್ನದೆ ರಾತ್ರಿ ಅನ್ನದೇ ಅಡ್ಡಾಡಿ ಮದ್ವಿ ಸಾಮಾನು ಜೋಡಸೋಮುಂದ ಬುಡದಿಂದ ಭಗ್ಗಂತ ಹತ್ಕೊಂಡ ಕಾಮದ ಉರಿ ತಡಿಯಾಕ ಆಗದೆ ಇಬ್ಬರೊಳಗ ಯಾರ ಜೊತೆಗ ಜಾರಿದಳೋ ಜಾರಿ ಇಪ್ಪತ್ತೆರಡು ವರ್ಷಗಳಿಂದ ಅದಿಮಿಟ್ಟಕೊಂಡಿದ್ದ ಕಾಮನೆಗಳನ್ನ ಮಾನಸಾನಿಚ್ಚೆ ಹರೆ ಬಿಡಲಾಗಿ ಸಿಕ್ಕ ಸಮಯವನ್ನು ಬಿಟ್ಟು ಬಿಡದೆ ಅನುಭವಿಸಿದ್ದು, ಮದುವಿಯಾಗಿ ಮಗಳು ಗಂಡನಿಂದೆ ಪ್ರಸ್ತಕ ಹೋದ ದಿನವೇ ಅವಳವ್ವನ ಮುಟ್ಟು ನಿಂತಿರೋದು ಖಾತ್ರಿಯಾಗಿತ್ತು.

ಕ್ಷಣಕಾಲದ ಸುಖವೆಲ್ಲಿ ದುಃಖದ ಕಾರ್ಮೋಡವಾಗಿ ಹೊರಬರಲಾಗದೆ ಜೇಡನಬಲೆಯೊಳಗನ ಬಲಿಯಂತೆ ಒದ್ದಾಡಿ ಒದ್ದಾಡಿ ಹಾಸಿಗೆಯೆಲ್ಲಾ ಮುದ್ದೆಯಾದರೂ

ನಿದ್ದೆ ಎಂಬ ಮಾಟಗಾತಿಯ ಸುಳಿವೇ ಇಲ್ಲ ಅತ್ತ ಮಗಳು ಗಂಡನ ಕೂಡ ಪ್ರಸ್ತಮಾಡಿಕೊಂಡು ಹೆಣ್ಣಿನ ಜೀವನದಾಗ ಬರೋ ಸುಖದ ಘಳಿಗೆಯನ್ನ ಸವಿಯುತ್ತಿರಲಾಗಿ ಅಂಡಗಳೊಗೊಳಗೆ ಬೆಳೆಯುತ್ತಿರುವ ಪಿಂಡದ ಚಿಂತೆಗೆ ಇಡಾದ ಅವ್ವ ತಾಳಲಾರದ ನೋವಿಂದ ಎದಿ ಎದಿ ಗುದ್ದಿಕೊಂಡು ಗೊಳಾಡುತ್ತಿದ್ದಳೆ. ಕಾಲ ಬಹಳ ಕೆಟ್ಟೊನು ಯಾರ ಮುಲಾಜನ್ನು ಕಾಯೋದಿಲ್ಲ. ಮಗಳು ಅನುಭವಿಸುತ್ತಿರುವ ಸುಖವನ್ನ ಮನಸಾರೆ ನೆಪ್ಪು ಮಾಡಿಕೊಂಡು ಹದಿನೆಂಟರ ಹರೆಯದಾಗ ತಾನು ಹಿಸುಕಿ ಹಾಕಿದ ಹೂವಿನ ಹಾಸಿಗೆಯನ್ನ ಕಣ್ಮುಂದೆ ತಂದುಕೊಂಡು ಅರೆ ಘಳಿಗೆ ತಲೆದಿಂಬನ್ನ ಹಾಗೆಯೆ ಎದೆಗೊತ್ತಿ ಸತ್ತ ತನಗಂಡನೆಂದು ಬಿಗಿಯಾಗಿ ಅಪ್ಪ 'ಅವ್ವ' ಎಂದೇಳಿ ಬಿಸಿ ಉಸಿರು ಬಿಟ್ಟ ಹಾಗೆ ಮಲಗಲು ಬಯಸಲು ಮೈಯೆಲ್ಲ ಬೆವತು ಕೆಳಗೆ ಕೊಡಿಯೊಡಿದೊಡನೆ, ತಿಂಗಳ ಹಿಂದೆ ಅನುಭವಿಸದವನ ಮುಖ ಮೆದುಳಿನೊಳಗೆ ಪ್ರವೇಶಿಸಲು ಹೊಟ್ಟೆಯೊಳಗೆ ಕೂಸು ಒದ್ದಂತಾಗಿ ಕಂಗಾಲಾದಳು. ದಡ ಸೇರಿದ ಮಗಳು, ಅನಾಥಳಾದ ಮಗಳ ಮಾರಿಯನ್ನೊಮ್ಮೆ ನೋಡಿ, ಆವಾಗಲೇ ತಂದಿಟ್ಟಿದ್ದ ವಿಷವನ್ನ ಗಟಗಟಾಂತ ಕುಡಿದು ಸಂಕಟವಾದರೂ ಕೂಗದೆ ಚೀರದೆ ತಣ್ಣಗಾದಳು ಅಲ್ಲಿ ಮಗಳು ಪ್ರಸ್ತ ಮುಗಿಸಿ ಹೊಸ ಕನಸಿನೊಂದಿಗೆ ಹಗಲು ಕಾಣುತ್ತಿರಲು ಕನಸುಗಳ ರಾಶಿಯನ್ನೆ ತನ್ನೊಂದಿಗೆ ಹೊತ್ತು ಹೋದಳು ಅವ್ವ.

## ಎರಡನೇ ಕಲ್ಲು

ಮದ್ಲನೇ ಕಲ್ಲು ಕತಿ ಮುಗಿಸ್ತಿದಂಗೆಯ ಎಲ್ಡನೆದು ಸುರು ಮಾಡ್ಕಂತು. "ಬಡತನ ಬೋ ಕೆಟ್ಟದ್ದು. ಸಂಸಾರದಾಗ ತಾನು ಒಂದ ಜವಾಬ್ದಾರಿ ಹೊರಬೇಕಂತ ಭಲೇ ಕನಸ ಕಂಡಿದ್ಲು ಹುಡಗಿ. ಸಾಲಿಂದ ಬಂದ ಮ್ಯಾಕ ಕೂಲಿಮಾಡ್ತಿದ್ಲು ಸಂಪೇನಳ್ಳ ಮಂದಿಗ ಜಾಜಿ ಅಂತಂದ್ರ ಎಲ್ಲಿಲ್ಲದ ಪ್ರೀತಿ. ಸಣ್ಣೋರು ದೊಡ್ಡೋರ ಬಾಯಿಯೊಳಗ ಕೇಳು ಅಕೀದಮಾತು. ಪಟ್ಣಕ ಹೋಗಿ ಹಾಸ್ಟೇಲ ಸೇರ್ಕೊಂಡಾಗ ಅಕೀಗ ಇನ್ನೂವೆ ಹನ್ನೆರಡ ಹದಮೂರು. ಅದೇನ ಗ್ರಾಚಾರನೋ ಏನೋ ಮೈಕೈ ತುಂಬ್ಕೊಂಡು ಒಳ್ಳೆ ರಸಪೂರಿ ಮಾವಿನಣ್ಣಂಗೆ ಬೆಳ್ಕೊಂಡಿದ್ಲು. ಅರ್ಧಡ್ಡ ಅವಳಪ್ಪ ಯಾವನೋ ಒಬ್ಬ ನಡು ಹಂಗಾಮದ ರೊಕ್ಕ ಇರೋ ಮನಷ್ಯನ ಸಲಿಗೆ ಬೆಳಸಿ ಮಗಳ ಹೆಸರೇಳಿ ಕುಡಿಯಾಕ ತಿನ್ನಾಕ ದುಡ್ಡ ಇಸ್ಕೊಂಡಿದ್ದೆ ದೊಡ್ಡ ಅನಾಹುತ ಆತು. ಅಪ್ಪನ ಸಲಗಿ ಮಗಳವರಿಗೂವೆ ವಿಸ್ತರಿಸಿ ಎಳೆ ಸೌವತಿಕಾಯಿ ರುಚಿನೋಡೆ ಬಿಟ್ಟ. ಆದ್ರೂವೇ ತಲಿಕೆಡಿಸಿಕೊಳ್ಳದ ಜಾಜಿ ಅದೆಂಗೋ ಹೊಟ್ಟೆಲೆ ಆಗಲಿಲ್ಲಾ. ಹೊತ್ತು ಹಿಂಗೆ ಕಳೆಯುತ್ತಿದ್ದಂಗೆ



ಹದಿನೈದರ ಹರೆಯಕ್ಕ ಬಂದ್ಲು. ಎತ್ತರದ ನಿಲುವು ತುಂಬಿದ ಮೈ ತೊಟ್ಟರವಿಕೆಯಿಂದ ನಿಗರು ನಿಂತು ಇಡಿಊರಿನ ಹುಡುಗರಿಗೆ ಸವಾಲಾದವು. ಕದ್ದು ಮುಚ್ಚಿ ವ್ಯವಹಾರ ಮಾಡೋ ಗಂಡುಳ್ಳ ಗರತಿಯರಿಗೆ ಹೆದರಿಕೆ ಸುರು ಆತು. ಊರ ಹುಡುಗರೆಲ್ಲಾ ಜಾಜಿ ಹಿಂದೆ ಬೀಳಲಾಗಿ ಕುಡಿದು ಮೂಲಿಯೊಳಗೆ ಬಿದ್ಕೊಳೋ ಗಂಡದಿರನ್ನ ಬಿಟ್ಟ ತಾಳಲಾರದ ಕಾಮದ ದಗೆಯನ್ನಾ ಇಡೇರಿಸಿಕೊಳ್ಳಲು ಹೊತ್ತಿಲ್ಲದ ಹೊತ್ತಿನಲ್ಲಿ ಹೊರಗೆ ಬಂದು ಸಬ್ಬನ ಸೌರಾತ್ರಿಯೊಳಗ ಅಡ್ನಾಡಿದನಗಳಂಗ ಅಲಿಯೋ ಹದಿಹರೆಯದ ಹುಡುಗರ ಜೊತೆಗೆ ಸಹವಾಸ ಬೆಳಸುತ್ತಿದ್ದು ಹೆದರಿಕೆಗೆ ಕಾರಣವಾಗಿತ್ತು.

ನೀನ ಹೇಳು ಜೇರ್ನಿಂಗ, ಏನೂ ಅರಿಯದ ಮುಗ್ದ ಕಂದವ್ವ ಜಾಜಿದೇನ ತಪ್ಪು ? ಮೂವತ್ತೈದು ದಾಟಿದ್ರು ಮದ್ವಿಯಾಗದೆ ಯಾವದಾರು ಒಂದು ಸಣ್ಣ ಸುಳಿವು ಸಿಕ್ರ ಅದನ್ನೆ ತಿರುಗಿಸಿ ಊರ ಹುಡುಗಿರನ್ನ ಹೆದರಿಸಿ ಅವರನ್ನ ಅನುಭವಿಸುತ್ತಿದ್ದ ಕೇಡಿ ಕಂಪೇಲನ ಕಣ್ಣು ಅಕಿಮ್ಯಾಲ ಹ್ಯಾಂಗ ಬಿಳದೆ ಇರಾಕ ಸಾಧ್ಯ. ಕಂಪೇಲ ಹುಟ್ಟಮೊಕರಿ ಅರ್ಧಂಬರ್ಧ ಸಾಲಿಕಲ್ತು ಊರಿಂದೂರಿಗೆ ಬೆಂಕಿ ಹಚ್ಕೊಕೆಲ್ಸ ಮಾಡ್ತಾ ಊರಾನ ಮಂದಿಗ ದೊಡ್ಡತಲನೋವ ಆಗ್ಯಾನ. ಅಂತ ಹುಟ್ಟಮಿಂಡ್ರಿ ಕಂಪೇಲ ನಳನಳಿಸುತ್ತಿರೂ ಜಾಜಿಯನ್ನ ಹೊಸಕಿ ಹಾಕಿಬಿಟ್ಟ. ಅಷ್ಟೆ ಅಲ್ಲಾ ಈ ಸುಳಿವನ್ನ ದೂರದಲೆಲ್ಲೊ ಸರ್ಕಾರಿ ಕೆಲ್ಸದಲ್ಲಿದ್ದ ಅವನ ಸಂಬಂಧಿ ಸಂಪಣ್ಣಗೂ ಹೇಳಿದ.

ದೀಪಾವಳಿ ಸಡಗರ ಜಾಜಿಯ ನಡುವಯಸ್ಸಿನ ಗೆಳೆಯ ಕಳುಹಿಸಿದ್ದ ಹಬ್ಬದ ಹೊಸ ಬಟ್ಟೆಯನ್ನ ತೊಟ್ಕಂಡು ಗಲ್ಲಿಯೊಳಗ ಅಡ್ಡಾಡೋದನ್ನ ನೋಡಿದ ಸಂಪಣ್ಣ, 'ಸಿಟಿಯೊಳಗಿನ ಸುಂದರಿಯರನ್ನ, ನಮ್ಮಜಾಜಿ ಮುಂದ ನಿವಾಳಿಸಿ ಒಗಿಬೇಕು ಬಿಡು' ಅಂದವನೆ, ಹೆಂಗಾನ ಮಾಡಿ ದೀಪಾವಳಿಯ ಕರಿ ಅಮವಾಸೆಯನ್ನ ಜಾಜಿಯೊಂದಿಗೆ ಕಳೆಯಲು ಹೊಂಚು ಹಾಕ ತೊಡಗಿದ ಸಂಬಂಧದೊಳಗೆ ಅಣ್ಣನಾಗ ಬೇಕಾದವನು. ಇದೇ ಮೊಕಾದ ಪಾಯಿದೆ ತಗೊಂಡು ಅವನಿಗೆ ಚಿಕ್ಕಪ್ಪನಾಗ ಬೇಕಿದ್ದ ಜಾಜಿ ಅಪ್ಪನಿಗೆ ಯಾವತ್ತು ಇಲ್ದು, ಅವತ್ತು ಸರಾಯಿ ತಗೊಂಡ ಹೋಗಿ. "ಏನ ಜಿಗಪ್ಪ ಏನ್ಸಮಚಾರ, ಬ್ಯಾಟಕಡಿತಿರೊ ಹತ್ರ ಹೋಗಿಲ್ಲೇನು?" ಕೇಳಿದ "ಎಲ್ಲಿ ಹೊಕ್ಕಿತಮ್ಮ, ಹಬ್ಬ ಬಂತಂದ್ರ ಬಕ್ಕಣದಾಗ ಪುಡಿಕಾಸ ಉಳಿಯಂಗಿಲ್ಲ, ಕೂಲಿಗ ಬರ್ತೀವಿ ಅಡ್ವಾನ್ಸ್ ಕೋಡ್ರೋ ನಿಮ್ಮ ಮಂಜಾಳಗ ಅಂತ ಊರ ಮುಂದಿನ ಸಾವುಕಾರ ಹತ್ರ ಹ್ವಾದ್ರ, ಅಮಾಸಿ ಕಣ್ಣೆ ಕಾಸ ಹೊರಗ ತಗಿಯಗಿಲ್ಲಾಂತ ಗದರಿಸಿ ಕಳಿಸಿದ; ವರ್ಷಕ್ಕೊಂದ ಹಬ್ಬ ಮುಂದಿಗ ದೀಪಾವಳಿಗ ಯಾರ ಸತ್ರು, ಯಾರ ಉಳಿದ್ರೋ" ರಾಗ ಎಳಿತಾನೆ ಇದ್ದ. ಅವನ

ದೌರ್ಬಲ್ಲದ ಅಂದಾಜು ಮಾಡಿದ ಸಂಪ ತಾನು ತಂದಿದ್ದ ಎರಡು ಪಾಕೀಟನ್ನು ಮೇಲೆ ಐವತ್ತರ ನೋಟನ್ನು ಇಡ್ತಿದ್ದಂಗೆ, "ತಂಗಿ ಜಾಜಿ, ನೋಡಬೇ ನಿಮ್ಮಣ್ಣ ಸಂಪ ಬಂದವ್ನೆ ಕರ್ಕೊಂಡ ಆಮನಿಗ ಹೋಗಿ ಮಾತಾಡು," ಬಾಯಾನ ಮಾತ ಮುಗಿಯಾಕ ಮುಂಚೆ ಬಾಯಿಂದ ಜೋಲ್ಲ ಸೋರಿ ತಡಿಯಾಕ ಆಗದೆ ಹಲ್ಲಿಂದ ಜಬಡಿ ಪಾಕೀಟು ಹರಿದು ಒಂದೇ ಉಸಿರುಗಿ ಸುರಿದುಕೊಂಡು ಆನಂತರ ತಾಗಿದ ಘಟುವಾಸನೆಗೆ 'ಫೈ–ಫ್'... ಎಂದು ಕೊಳಕು ಟವೇಲಿಂದ ಬಾಯಿ ಒರಿಸಿ, "ನೀ ಬರ್ಲಿಕ್ರ ತಲಿ ಆಫ್‌ಆಗಿ ಹೊಕ್ಕಿತ ನೋಡ್ಲೆ ತಮ್ಮ ದೇವರು ಬಂದಂಗ ಬಂದೆ," ಅವನಿಗೆ ಹೇಳಿದ ಆವಾಗಲೇ ಅವನು ಪಕ್ಕದ ಮನೆಯಲ್ಲಿ ಜಾಜಿಯ ಜೊತಿಗ ನಗ್ತಿರೋದನ್ನ ಕೇಳಿ ಖುಷಿಯಾಗಿ ಇನ್ನೊಂದನ್ನು ಕುಡಿದು ತಾನು ಊರೊಳಗ ಜವಾಬ್ದಾರಿ ಇರೊಮನುಷ್ಯ ಅಂತ ತೋರಿಸಿಕೊಳ್ಳಾಕ ಹೊರಗ ಹೊಂಟ.

ಅವನು ಏಳಲು ತಯಾರಿಲ್ಲಾ, ಅಕೀನು ಹೋಗೊ ಗೋಜಿಗೆ ಹೋಗಲಿಲ್ಲಾ, ಅದರ ನಡುವೆ ಎಷ್ಟು ಸಣ್ಣಹುಡ್ರು ಜಾಜಿಯ ಚಿಕ್ಕಪ್ಪನ ಮಗಳು ಬಂದು ಅದುಕೊಡು, ಇದು ಕೊಡು ಅಂತ ಪೀಡಿಸಿದರು ಸಂಪನ ಸಹವಾಸದ ಸೆಳೆತ. "ಏಯ್ ಹೋಗೆ ನಮ್ಮವ್ವನ ಕೆಳ್ಕ" ಅಂತಂದು ಜಾರಿಕೊಳ್ತಿದ್ಲು. ಒಂದೇ ಜಾತಿಯವರಾದರಿಂದ ಯಾರೋಬ್ರುವೇ ಅನಮಾನ ಪಡ್ಲಿಲ್ಲ, ಪಿಟ್ಂತ ಸದ್ದುತಗಿಲಿಲ್ಲಾ. ಅದೆಷ್ಟು ಮಾತಗಳಿದ್ವೊ ಅವರಿಬ್ಬರ ಎದಿಯೊಳಗ, ಮಾತು ನಗೆ ಕಣ್ಣೋಟಗಳು ಬಯಕೆಗಳು ಬದಲಾಗ್ತಿದ್ವು. ಆ ನಡುವೆ ಜಾಜಿ ಅಪ್ಪ ಬಂದು ಸಂಪ ಇರೋದನ್ನ ಖಾತ್ರಿ ಪಡಿಸಿಕೊಂಡು ಇಣುಕಿದ. ಕೈಯಾಗಿದ್ದ ಐವತ್ತರ ನೋಟು ತನ್ನ ಹತ್ರನೂ ದುಡ್ಡೈತೆ ಅಂತ ತೊರ್ಸಾಕ, ಒಂದಿಬ್ಬರನ್ನ ಹಿಡ್ಕೊಂಡ ಹೋಗಿ ಎರಡ ಪಾಕೀಟು ಕುಡ್ಸಿಂದ ಖಾಲಿಯಾಗಿತ್ತು, ಹಲ್ಲುಗಿಂಜುತ್ತಾ, "ತಮ್ಮ ಮಾತಾಡಮಾತಾಡು" ಹಿಂದಕೆ ತಿರುಗಿದ ಸಂಪನಿಗೆ ಅರ್ಥ ಆಗಿದ್ದೆ, ಕಿಸೆಯಿಂದ ನೂರರ ಎರಡು ನೋಟುಗಳನ್ನ ತಗದು, "ಎಯ್ ತಗ ಮಾರಾಯ ಹಬ್ಬ ಮಜ ಮಾಡು" ಮುಂದ ಹಿಡದ. "ಹಾಂ ಹೂಂ" ಗಬಕಂತ ಕಸ್ಕೊಂಡು, "ಜಾಜಿ ಏನಾರ ತಿನ್ನಾಕ ತಂದಕೊಟ್ಟಯೋ ಹ್ಯಾಂಗ ಅಣ್ಣಗ, ನಿಮ್ಮವ್ವನ ಕೆಟ್ಟಜಾತಿನ ತಂದು ಹೋಗು ಮುಂದಿನ ಅಂಗಡಿಯಿಂದ ಚಾನೂವೆ ವಡಿತಗೊಂಡ ಬಂದಕೊಡು" ನೂರರ ನೋಟ ಮುಂದ ಮಾಡದ, "ಬ್ಯಾಡ ಹೋಗು" ಅವನನ್ನ ಅಟ್ಟುವುದೇ ತ್ರಾಸಾಗಿತ್ತು. ಅಕಿ ಎದಿಯೊಳಗ ಗುಂಡು ಹೊಕ್ಕಂಗಾಗಿ ನಿಲ್ದಂಗೆ ಗುಂಡಿಗೆ ಹೊಡ್ಕೊಳಾಕ ಹತ್ತಿತು. ಅವನು ತನ್ನನ್ನ ತಾನು ಮರತು ದಂತದ ಬೊಂಬೆಯಂಗೆ ಮುಂದ ನಿಂತ ಜಾಜಿಯನ್ನ

ಅನಾಮತ ಎತ್ತಿ ತೊಳನೊಳಗ ತಗಂಡ. "ಮಂದಿನೊಡ್ತಾರ" ಕೊಸರಿಕೊಂಡ್ಲು. "ಏನಮಾಡಾನ" ರೈಲಗಾಡಿಹಂಗ ಬಿಸಿ ಉಸರ ಬಿಡಾಕಹತ್ತಿದ್ದ. "ಚೆರಗಿತಂಗೊಂಡ ಹಳ್ಳಕ ಹೊಕ್ಕೀನಿ ಅಲ್ಲಿಗ ಬಾ."

ಹುಡುಗಿಯರೆಲ್ಲಾ ದೀಪ ಹಿಡ್ಕಂಡ ಮನಿ ಮನಿಗ ಹ್ವಾದ ನಾಕ ಮನಿಗ ಹೋದಂಗ ಮಾಡಿ, ಸಂಪ ಪ್ರತ್ಯಕ್ಷನಾಗಿದ್ದ ಹಿಂದಕ ಸರದು ನಿಮಿಷದಾಗ ಅಕಿ ದನದ ಮನಿ ಸೇರ್ಕಂಡ್ಲು. ಮನಿಮಂದಿ ಅವರಿವರು ಕುಡ್ಸಿದ ಸರಾಯಿ ನಿಶೆದಾಗ ಮೈಮ್ಯಾಲಿನ ಅರವಿ ತಗೊಂಡ ಹ್ವಾದ್ರು ಎಚ್ಚರಿಲ್ಲದಂಗೆ ಬಿದ್ದಂಡಿದ್ರು ಅವರಿಬ್ಬರ ಮಾತ್ರ ಕಣ್ಣ ಮುಚ್ಚುದಂಗೆ ಕಣ್ಣಾಮುಚಾಲೆ ಆಡ್ತಿದ್ರು.

ಹಬ್ಬ ಮುಗದು ತಿಂಗಳಲ್ಲಿ ಮಂದಿ ರಾಗಿ ಕೊಯ್ಲಿಯೊಳಗೆ ತೊಡಗಿಕೊಂಡಿದ್ರು. ಸಾಲಿಗಂತ ಹೋಗಿದ್ದ ಜಾಜಿ ತಿಂಗಳಾದ್ರು ಮುಟ್ಟಾಗದೆ ಹೊಟ್ಟೆಯೊಳಗೆ ಗಟ್ಟಿಯಾಗಿ ಮೆತ್ಕೊಂಡಗಾಗಿ ಹೆದರಿ ಓಡಿಬಂದಿದ್ಲು. ಒಂದ ವಾರದಾಗ ಆಗಬಹುದು ಹದಿನೈದು ದಿನಕ ಆಗಬಹುದು ಅಂತ ಚಡಪಡಿಸ್ತಾ ಕತ್ಲು. ಅದರ ಸುದ್ಧಿನೆ ಇಲ್ಲ ರಾಗಿಕೊಯ್ಯೋದು ಬಟ್ಟೆ ಒಗೆಯೋದು, ದನ, ಎತ್ತ ಮೇಯಿಸೊದು ಮಾಡ್ತಿದ್ಲು. ಕೂಲಿಕೆಲ್ಸ ಭರಾಟೆಯಿಂದ ನಡಿತ್ತಿದ್ದರಿಂದ ಮನಿಮಂದಿನ ಅಕಿ ಬಂದಿದ್ದು ಪಾಡನಿಸಿತ್ತು. ಆದ್ರ ತಿಂಗಳಾದ್ರು ಕಾಲೇಜಿನ ಸುದ್ಧಿ ತಗಿಯದ ಮಗಳ ಹಕೀಕತ್ತಾದ್ರು ಏನಂತ ಜಾಜಿ ಅವ್ವಗ ಅನುಮಾನ ಬರ್ತಿದಂಗೆಯೇ ರಾತ್ರಿ ಮಕ್ಕೊಂಡಿದ್ದ ಜಾಜಿ ಮುಂಜಾನಿ ಹೆಣ ಆಗಿದ್ಲು. ಅಕಿ ನಡುವಯಸ್ಸಿನ ಗೆಣೆಯ, ಸಂಪಾಗಿ ಅವಳ ಇಡಿ ದೇಹವನ್ನ ಹಗಲು ರಾತ್ರಿ ಇಂಚಿಂಚು ಸವಿದ ಸಂಪಣ್ಣ. ಒಂದು ಹಣ್ಣಿನ ರುಚಿನೋಡಿದ ಮೇಲೆ ಮತ್ತೊಂದು ಹಣ್ಣಿನ ರುಚಿ ನೋಡದ ಕಂಪೇಲ ತಲಿಕೆಡಿಸಿಕೊಳ್ಳಲಿಲ್ಲಾ. ಜಾಜಿ ಅಪ್ಪ ಮಾತ್ರ ಹಾಸಿಗಿ ಹಿಡ್ಕೊಂಡವನು ವಾರದ ಮಟ ಮ್ಯಾಲೇಳಲಿಲ್ಲಾ – ವಾರದ ನಂತರ ಬದುಕು ಸಹಜ ಆಗಿಹೋಯಿತು. ಜಾಜಿ ಅರಳಿ, ಬತ್ತಿ, ಬಾಡಿ ಮಣ್ಣಾಗ ಕೊಳತು ಹೋಗಿದ್ದಳು.

ಜೇರ್ನಿಂಗನ ಕಣ್ಣು ತೇವಗೊಂಡಿದ್ವು, ಜಾಜಿ ಮಣ್ಣೊಳಗ ಬೇರು ಬಿಡ್ತಿದ್ದ ಬಳ್ಳಿಯ ಕುಡಿಚಿವುಟಿ ಬೇರು ಸಮೇತ ಕಿತ್ತುಹಾಕಿದ ಮಂದಿ ಏನೂ ಗೊತ್ತಿಲ್ಲದಂತೆ ಬದುಕಿರೋದಲ್ದೆ ಊರಾಗ ತಾವೇ ದೊಡ್ಡೋರು, ಮರ್ಯಾದಸ್ಥರು ಅಂತ ದಿಕಾವು ಬೇರೆ, "ಥು, ಇವ್ರ ಜನ್ಮಕ ಆಟು ಬೆಂಕಿಹಾಕ" ಕ್ಯಾಕರಿಸಿ ಉಗಿತ್ತಿದ್ದ.



## ಮೂರನೇ ಕಲ್ಲು

"ಅದಕ್ಕ ಸುಸ್ತಾದ್ರ, ಹ್ಯಾಂಗ್ಲೆ ತಮ್ಮ, ನೀ ಇನ್ನೂ ನನ್ನ ಕತಿಕೇಳಬೇಕು, ಅಂತೇಳಿ ಮಾತಾಡಕ ಸುರುಮಾಡ್ತು. ನಿಮ್ಮನಿ ಒಂದ ಬಿಟ್ಟು ಇಡಿ ಊರಾಗ ಊರೆ ಕೂಲಿಮ್ಯಾಲ ನಿಂತೈತೆ. ಈ ಮಂದಿ ಹೊಟ್ಟಿ ಎಲ್ಲೂ ತುಂಬಂಗಿಲ್ಲಾ. ಊರಾಗ ಇಪ್ಪತ್ರೂಪಾಯಿ ಕೂಲಿಕೊಟ್ಟ ಯಾದಕ್ಕಾದೀತು ಅಂತೇಳಿ, ಕಾಫಿಸಿಮಿ ಮೇಸ್ತ್ರಿಗಳ ತಾವಾವರ್ಷಕ ಮುಂಚೆನೆ ಸಾಲ ತಗಂಡು, ಹಬ್ಬ ಹರಿದಿನಾಂತ ಮಾಡ್ಕಂಡು ಗುಡ್ಡಗಳ ಮ್ಯಾಲ ಹತ್ತಿ ಬೀಜ ಹರದು ಸಾಲಕ್ಕ ಸಾಲ ಮ್ಯಾಲ ಬಡ್ಡಿ ಅಂತ ದುಡದದ್ದೆಲ್ಲಾ ಸಾವಕಾರ ಮತ್ತ ಮೇಸ್ತ್ರಿಗ ದಂಡಕಟ್ಟಿ ಆಟು ಬೂತಾಯಿಮೀನು ಉಪ್ಪಬಾಂಗಡಿ, ಕಳ್ಳುಪಚ್ಚಿ, ಸರಾಯಿ ರುಚಿನೋಡಿದ್ದೇ ಲಾಭ. ಅಲ್ಲೂ ಕೂಲಿ ಗೀಟದಕ್ಕೆ ಒಂದಿಷ್ಟ ಮಂದಿ ಗೋವಾಕ್ಕೆ, ಕೇರಳಕ್ಕೆ ಬೆಂಗಳೂರಿಗಾ ತಂದು ಹೊಂಟಹೊಗಾಕ ಹತ್ತಿಂದ. ಪಟ್ಟಾರಿಗೂ ನಾ ಏನಕಮ್ಮಿ ಅಂದೋನೆ ಕೊಳತಿರೊ ಹಳೇ ಪ್ಲಾಸ್ಟಿಕ್ ಚೀಲ ಹೆಗಲಿನೇರಿಸಿದ. ಮಂದಿ ಎಲ್ಲಾ ಬೆಂಗಳೂರು, ಗೋವ, ಮಂಗಳೂರು, ಕೇರಳ ಅಂತೈತೆ ನಾನು ಯಾರು ಕಾಣದ ಮುಂಬೈಗೆ ಹೋಗೋದಂತ ಯೋಚನೆ ಮಾಡಿ ಹೊಂಟ ಹೋದ ಅದೆಲ್ಲಿಕೆಲ್ಸ ಮಾಡಿದ್ನೋ ವಾಪಾಸು ಊರಗ ಬಂದಾಗ ಕಿಸೆ ತುಂಬಿ ನೂರರ ನೋಟಗಳಿದ್ವು. ತವರಿಗ ಹೋಗಿದ್ದ ಹೇಣ್ತಿನ ಕರ್ಕಂಡ ಬಂದು, ಮುಂಗಾರಿನ ಕೆಂಧೂಳಿಗೆ ಹಾರಿ ಹೋಗಿದ್ದ ನೆರಕಿ ಸರಿಮಾಡ್ತಿದಂಗೆ ಅವನ ತಲಿಯೊಳಗ ಒಂದು ವಿಷಯ ಹೊಳಿತು. "ತಥ್ ಇದ್ರವನ್ನ, ಈ ಗುಡ್ಸಲ ಹಾಳಾಗ ಹ್ವಾಗಲಿ, ಮಂಗಳೂರ ಹಂಚಿನ ಮನಿಯಾಕ ಕಟ್ಟಬಾರ್ದು" ಅಂದವನೆ ತಂದ ರೊಕ್ಕನ ಹೆಣ್ತಿ ಕೈಗೆ ಕೊಟ್ಟು ಪಟ್ಟಾರಿ, "ಲೇ ಇವಳೆ, ನಾಳೆ ಮುಂಜಾನಿ ಬಾನವಾರ ಸಂತೀಗ ಹೋಗಿ ಕುರಿದ ಕಳ್ಳ ಪಚ್ಚಿನಾರ ತಂದು ಆಟು ರಕ್ತನೂವೆ ಹಿಟ್ಟು ಕಲಿಸಿ ಸಳೋಯಿ ಹಂಗ ಮಾಡಬಾರ್ದಾ ನಾಲಗಿ ರುಚಿಕೆಟ್ಟ ಹೋಗೈತಿ" ಆಶೆಯನ್ನ ಮುಂದಿಟ್ಟು. ಅದನ್ನೆ ಕಾಯ್ತಿದ ಅವನ ಹೆಂಡ್ರು, ಯಾವತ್ತೊ ಒಂದ ದಪ ಜ್ವರ ಬಂದಾವಂತ ತೊರ್ಸಾಕ ಹೋಗಿದ್ಕ, ಆ ಡಾಕ್ಟರಪ್ಪನ ಕೂಡ ಸಲಗಿ ಬೆಳಸ್ಕೊಂಡು ವಾರಕ್ಕ–ಹದಿನೈದ ದಿನಕ, ನೆಗಡಿ ಅಂದ್ರು ದವಾಖಾನಿ, ಕೆಮ್ಮಿದ್ರು ದವಾಖಾನಿ ಅಂತೇಳಿ ಹೋಗಾಕ ಸುರುಮಾಡಿದ್ಲು. ಅಂಡ ಹರಿಯೋ ಮಟಾನು ದಗದ ಮಾಡೋ ಪಟ್ಟಾರಿಗ ಹೇಣ್ತಿ ಹಕೀಕತೆಂಗ ತಿಳದೀತು. ಸರಾಯಿ ಸಳೋಯಿ ಮಂಗಳೂರ ಹಂಚಿನ ಮನಿ ಕನಸಿನೊಳಗ ಜಗತ್ತಿ ಮರ್ತಿದ್ದ. ವರ್ಷ ಎರಡವರ್ಷದ ಹೆಣ್ಣಬೋಳಿಯರು ಅಂವ ಮಾತ್ರ ಮತ್ತ ದುಡಿಯಾಕ ಮುಂಬೈಗೆ ಎದ್ದಬಿಟ್ಟ. ಹೋದೋನು ವಾರ ಆಗಲಿಲ್ಲಾ ಊರಾಗ

ಹಾಜರಿದ್ದ. ಅದೇನ ಮಾಡ್ಕಂದ ಬಂದಿದ್ನೊ ಊರ ಮುಂದಿನ ಪರಾಂಪೋಕ ಜಾಗೆದಾಗ ನಾಕ ರೂಮಿನ ಹಂಚಿನ ಮನಿಗ ಅಡಿಪಾಯ ತಗಸಾಕ ಹತ್ತಿದ. ತರಗಾರ ತಂಬೂರಯ್ಯನಿಗೆ ಚಂಚಗಾರ ಕೊಟ್ಟು ಒಂದ ಕಡೀಗ ಹಸಿ ಇಟ್ಟಿಗಿ ಎಳಸ್ದಾ, ಹೊರಗಿನ ಮಗ್ಲಕ್ಕ ಸುಟ್ಟ ಹೆಂಡಿಗಳನ್ನ ಖರೀದಿ ಮಾಡಿ ಹದಿನೈದು ದಿನದದಾಗ ದೊಡ್ಡಹಂಚಿನ ಮನಿಯನ್ನ ನಿಲ್ಲಿಸಿದ. ಊರಾನ ಮಂದಿಗ ದಿಗಲಾಯ್ತು, ಹಡಿಬಿಗುಟ್ಟಿದ ಸೂಳಿಮಗ ರೊಕ್ಕ ಎಲ್ಲಿಂದ ತಂದ ಅಂತೇಳಿ ಬಾಯಿ ಮ್ಯಾಲ ಬೆಳ್ಳಿಟ್ಕೊಂಡ್ರು. ಹೊಸಮನಿ ಹುಗ್ಗಿ ಮಾಡ್ಸಾಕ ಕಾಸ ತರ್ತೀನಿ ಅಂತಂದು ಮುಂಬೈಗ ಹ್ವಾದ ಪಟ್ಟಾರಿ, ಅರ್ಧಸತ್ತ ಹೆಣವಾಗಿ ಮೂರೆ ದಿನದಾಗ ವಾಪಾಸಾಗಿದ್ದ. ಅವನ ಹೇಣ್ತಿ ಕಂಗಾಲಾಗಿ ಅವಳ ಗೆಣಕ್ಯಾರನ ಆಸ್ಪತ್ರಿಗ ಸೇರ್ಸಿದ್ಲು.

ಒಂದೇ ಒಂದವಾರ ಬದುಕಿದ ಪಟ್ಟಾರಿ ಹೆಣ ಊರಾಚೆ ಹಳ್ಳದ ಹತ್ರ ಸುಟ್ಟ ಬಂದ್ರು ಊರಾನ ಮಂದಿ ಮಾತ್ರ, ಹಾಳಾದ ಸೂಳಿಮಾಗ ಮುಂಬೈಗ ಹೋಗಿ ಸುಟ್ಟಬಂದ್ರು ಊರಾನ ಮಂದಿ ಮಾತ್ರ ಹಾಳದ ಸೂಳಿಮಾಗ ಮುಂಬೈಗ ಹೋಗಿ ಸಾವುಕಾರರ ಮನಿಯಾಗ ರೊಕ್ಕ ಕದೀಯೋದನ್ನ ಸುರುಹಚ್ಕೊಂಡಿದ್ದ. ಒಂದ ಸಲ, ಎರಡ ಸಲ ನೋಡಿ ಮೂರ್ನೆ ಸಲಕ್ಕ ಮಾಲ ಸಮೇತ ಹಿಡದು ಮಕ ಮೂಸಡಿ ನೋಡದೆ ಹೊಡ್ದಾರ ಬೀಳಬಾರದ ಜಾಗಕ ಬಿಳಾನ ಸೇಟ್ಕಂದ ಹೋಗ್ಯಾನಂತೇಳಿ ಮಾತಾಡಿಕೊಂಡ್ರ. ಅವನ ಹೇಣ್ತಿದ ಗೊತ್ತಿತ್ತು ಅದಕ್ಕೆ ಬೇಕಂತ್ಲೆ ಸಾಯೋ ನಿರ್ಧಾರ ಮಾಡಿ ಹಿಂಗ ಹೊಡ್ತ ತಿಂದಾನಂತಾನೂ ಹೇಳೊರು. ಆದ್ರ ಒಂದವಾರ ಪಸಂದಾಗೆ ಬದಿಕಿದ್ದೋನು ಇದ್ದಕಿದ್ದಂಗೆ ಅದೆಂಗ ಸತ್ತ? ಅಂತಾನೂ ಮಂದಿ ಕೇಳ್ತಾರ. ಪಟ್ಟಾರಿ ಹೆಣ್ತಿನೆ, ಬದುಕಿದ್ರ ಗುಟ್ಟುರಟ್ಟಾಗತೈತಿ ಅಂತೇಳಿ ಡಾಕ್ಟ್ರಿಗೆ ಹೇಳಿ, ಅದೇನ ಮಾಡಿದ್ಲೋ ಕೊಲೆ ಮಾಡ್ಸಿದ್ಲು ಅಂಬೋಣವು ಕೇಳಿ ಬರ್ತಿತ್ತು. ಸಾವು ಬದುಕಿನ ಈ ಹಗಲು-ರಾತ್ರಿಯಾಟದಲ್ಲಿ ಈ ಊರಾನ ಅನೇಕ ಮನಿ ದೀಪಗಳು ಆರಿಹ್ವಾದ್ವು. ಹೂಂ! ಅಸಾಹಾಯಕ ಮಂದಿ ದುಡಿತಾವ ಬದಕೊ ದಾರಿಗೊತ್ತಿಲ್ದಂಗೆ ಯಾವದೋ ಮೋಹದ ಸುಳಿಯೊಳಗ ಸಿಗಾಕೊಂಡು ಒದ್ದಾಡ್ತಿದ್ದರೆ ಹುಟ್ಟು-ಸಾವು ಎರಡು ಮನುಷ್ಯನ ಕೈಯಾಗಿಲ್ಲ ಎಲ್ಲಿ ಹುಟ್ತೇನಿ, ಎಲ್ಲಿ ಸಾಯ್ತೀನಿ ಅನ್ನೋದು ನಿಗೂಡದಷ್ಟೇ ಅನಿವಾರ್ಯ.

ಜೀರ್ನಿಂಗ ಕಣ್ಣುಜ್ಜಿ ತಾನು ಮುಳುಗಿ ಹೋಗಿದ್ದ ಲೋಕದಿಂದ ಹೊರಗ ಬರಾಕ ಹವಣಿಸುತ್ತಿದ್ದಂತೆ ಕರಿಕಲ್ಲ ಮೇಲೆ ಕುಂತಕಾಗಿ ಕಾಕ ಅಂತೇಳಿ ಕೂಗಾಗ ಹತ್ತಿತು. ಸುತ್ತಲು ನೋಡಿದ ಯಾರು ಇಲ್ಲ ಅತ್ತಿಹಣ್ಣಿನಮರ ಮರದಿಂದೆ ದೊಡ್ಡ ಕಲ್ಲು ಸುತ್ತಲು

ಆಗ್ಲೆ ಕಪ್ಪು ಆವರಿಸಿತ್ತು, "ಜೇರ್ನಿಂಗ ಐಯ್ ಜೇರ್ನಿಂಗ" ಹೌಹಾರಿ ಕತ್ತುಹೊರಳಿಸಿದ. ಗುರುತು ಸಿಗದ ಮುದುಕಿ "ಯಾವಗ ಬಂದೇ" ಕೇಳಿದ್ಲು. ತನಗೆ ಕತೆ ಹೇಳಿದ ಕಲ್ಲುಗಳ ಕೌತುಕದಿಂದ ಹೊರ ಬಂದು "ಹೊತ್ತಾರೆ ಬಂದ್ನಬೇ" ಉತ್ತರಿಸಿದ. "ಅಲ್ಯಾಕ ಕುಂತಿ ಗಾಳಿ ಅಡ್ಡಾಡೋ ಹೊತ್ತು ಹೋಗಮನಿಗ" ಮುದುಕಿ ಪಶ್ಚಿಮಕ್ಕ ಹ್ವಾದ್ಲು ಜೇರ್ನಿಂಗ ಎದ್ದು ಉತ್ತರಕ್ಕ ತಿರುಗಿದ.

ಹೊರಗಡೆ ಮಳೆ ತನ್ನ ರುದ್ರ ನರ್ತನವನ್ನ ಆರಂಭಿಸಿತ್ತು. ನನ್ನೊಳಗೆ ಎದ್ದ ಅಲೆಗಳಿಗೆ ದಡವೇ ಇಲ್ಲದೆ ಎತ್ತಬೇಕತ್ತ ಅಡ್ಡಾದಿಡ್ಡಿಯಾಗಿ ಹರಿಯುತ್ತಲೇ ಇದ್ದವು. ಮನದಾಗ ಯಾಕೋ ಹೇಸಿಗೆ ಎನಿಸಿ ಕಿಟಕಿ ಗಾಜನ್ನ ಸರಿಸಿ ಮಳೆ ಹನಿಯ ರುದ್ರನರ್ತನ ನೋಡಲು ಇಣುಕಿದ ಈ ಮಳೆಯನ್ನ ಬಾಲ್ಯದಲ್ಲೆಂದೂ ನನ್ನೂರಲ್ಲಿ ಕಂಡಿದ್ದೆ. ಪೂರ್ವಕ್ಕೆದ್ದು ಮುಂಗಾರು ಅಡವಿ ಹೊಲಗಳಿಂದ ಕೆಂಧೂಳನ್ನ ಎಬ್ಬಿಸಿ, ಮಾಳಿ ಬನ್ನಿ ಮಾಂಕಾಳಿ ಗುಡಿ, ಸಣ್ಣ ಹುಡ್ರ ಸ್ಮಶಾನ ಇಟಗಿ ಗುಂಡಿ, ಚೌಡವ್ವನ ಗುಡಿ ಕರಗಲ್ಲು ದಾಟುತ್ತಿದ್ದಂತೆ ಸಿಗುವ ಆಪಿನ ಗುಡುಸಲುಗಳ ನೆರಿಕೆಯನ್ನ ಕಿತ್ತು ಬಿಸಾಡಿ, ಬಡವರ ಮನೆಯೊಳಗೆ ಇರಬಹುದಾದ ಮಡಿಕೆಕುಡಿಕೆಗಳನ್ನೆಲ್ಲಾ ಹೊಡೆದಾಗಲೇ ಗಾಳಿಗೊಂದಿಷ್ಟ ನೆಮ್ಮದಿ. ಅದರ ಹಿಂದೆಯೇ ಮುಗಿಲನ್ನೆ ಸೀಳಿ ಭೂಮಿ ಪ್ರಪಾತಕ್ಕಿಳಿದು ಬಿಡುವ ಉತ್ಸಾಹದಲ್ಲಿ ಮಿಂಚು ಭಟ್ ಭಟಾರಂತ ಹೊಡೆದರೆ ಅವ್ವನ ಸೆರಗೊಳಗೆ ಅವಿತುಕೊಳ್ಳತ್ತಿದ್ದದ್ದ ಬರಿ ನೆನಪು. ಆ ಮೇಲೆ ಎಲ್ಲಿಯ ಮುಂಗಾರು ಎಲ್ಲಿಯ ಮಳೆ ಚೂರು ಪಾರು ಉದರುವ ಜುಬರಿನಲ್ಲಿ, ರಾಗಿ ಜೋಳ ಬೇಳ್ಕಂಡು ದಿಮಾಕು ಮಾಡುವದಷ್ಟೆ ಆಗಿ ಹೋಯ್ತು.

ಹನಿಗಳು ದಪ್ಪ ಆಗಿದ್ದು ಸುತ್ತ ದೂರದವರೆಗೆ ಕಣ್ಣಾಡಿಸಿದ ರಸ್ತೆಮೇಲೆ ಯಾರು ಇರ್ಲಿಲ್ಲಾ. ಮನೆಗಳೆಲ್ಲವೂ ಕದ ಮುಚ್ಕೊಂಡಿವೆ. ಬರಿ ನಡದಾಗ ಚಡ್ಡಿ ಸಿಕ್ಕಿಸಿಕೊಂಡ ಗಲ್ಲಿಯ ಏಳು, ಎಂಟು, ಹತ್ತು ಒಂಬತ್ತರ ಆಸುಪಾಸಿನ ನಾಕು ಹುಡುಗರು ಕಾಂಪೌಂಡ್ ಗೋಡೆ ದಾಟಿ ಹೊರಬಂದ ಮನೆಯ ಆಶ್ರಯದಲ್ಲಿ ನಿಂತಿದ್ದಾರೆ. ಅದರಲ್ಲಿ ಒಬ್ಬ ಎಲ್ಲರಿಗೂ ಎತ್ತರವಾಗಿದ್ದ. ಆದರೆ ಇಡಿಗುಂಪನ್ನ ಅವನಿಗಿಂತ ಗಿಡ್ಡಕ್ಕಿದ್ದ ಎರಡನೇಯವನು ನಿಯಂತ್ರಿಸಿದ್ದ. ಒರಿಯಾದಲ್ಲಿ ಮಾತಾಡಿಕೊಳ್ಳತ್ತ ನನ್ನ ಕಡೆ ನೋಡಿದರು, ನಾನು ನಗುತ್ತ ಕೈಬೀಸಿದೆ. "ಯಾವನ್ಲೆ ಅವನು ನಮ್ಮ ನೋಡಿ ನಗ್ತವ್ನೆ" ಅಂದ ಚೋಟುದ್ದ ನಾಯಕ. ಮತ್ತೊಬ್ಬ. "ಯಾವನೋ ಸನ್ಯಾಸಿ ನನ್ಮಗ ಕಿಟಕಿಯಾಕ ತಗದ" ಅಂತ ಬೇಸರವನ್ನ ತೋಡಿಕೊಂಡ. ಅವನೇನು ಹರ್ಕೊಂತನ ಬಿಡ್ರಲೇ, ಅವನು ಎರಡನೇ

ಮಾಡಿ ಮೇಲಲದಾನ, ಅದುಅಲ್ದ ಅಂವ ಯಾವೂರೊ ಏನೋ, ಅವನ್ನ ಕಟ್ಕಂಡ ಏನ್ಮಾಡ್ತೀರ ಬಿಡು" ಎಲ್ಲರಿಗಿಂತ ಸಣ್ಣವ ಉಳಿದ ಮೂವರ ಮಾತು ಕೇಳುವವ ಹೇಳಿದ ನಾಲ್ಕು ಜನ ನನ್ನ ನೋಡಿ ನಕ್ಕರು ನಾನು ನಕ್ಕು ಮಳೆಯ ಹನಿಯೊಳಗೆ ಇಳಿಯಲು ಪ್ರಯತ್ನಿಸಿದೆ. ಇಡಿ ರಾತ್ರಿ ಮಳೆ ಬಿದ್ದಾಗ ಮನಿಯಾನ ಸ್ವಾರಿ ಪಾತ್ರೆ ಪಡಗ ಇದ್ವು ಹಸಿಯಾದ ಗೋಣಿ ಚೀಲ, ದುಪ್ಪಿ ಮೈಗ ಹಿತಕೊಡದಿದ್ರು, ಮೆದಲೊಳಗೆ ಮನಸಾನಿಚ್ಚೆ ಮಲಗಬೇಕೆಂಬ ಬಯಕೆ ಸಿಕ್ಕ ಚೂರು ನೆಲಗಲ್ಲೆ ಕಾಲುಗಳನ್ನೆಳೆದು ಹೊಟ್ಟೆಯೊಳಗೆ ಅದುಮಿಕೊಂಡು ಇಡಿದೇವನ್ನ ಒಂದೇ ಮೊಳಕ್ಕೆ ನೆಲದ ಮೇಲೆ ಹೊಂದಿಸಿ ಮಲಗುತ್ತಿದ್ದೆ. ಅವ್ವ ಮಾತ್ರ ಎಲ್ಲೆಲ್ಲಿ ಪಾತ್ರೆಗಳು ತುಂಬಿವೆ ಎತ್ತಿ ನೀರನ ಹೊರಗೆ ಚೆಲ್ಲಿ ಮತ್ತೆತಂದು ಒಳಗಿಟ್ಟು, "ಹಾಳಮಳಿ ಮುಗ್ಲಾಗ ಏನ ತೂತ ಬಿದ್ದಾವೋ ಏನೋ" ಗೊಣಗುತ್ತ, ಹರಿದು ಒಳಗೆ ಬರುತ್ತಿದ್ದ ನೀರಿಗೆ ಅಡ್ಡ ಒಡ್ಡ ಕಟ್ತಾ, "ತಿಂಗಳ ಮುಂದೇ ಬಡ್ಕಂಡೆ, ಏಳ ಪಾಪದೋನಿಗ ಊರಮುಂದ ಹಳ್ಳಾದಾಗಿಂದ ಆಪು ಕೊಯ್ಕಂಡ ಬಾರೋ ನಿನ್ನ ಮಕಡೆತ್ಲಿ ಅಂತ, ನನ್ನ ಮಾತ ಎಲ್ಲಿ ಕೇಳ್ತಾನ, ಈಗ ಅನುಭವಿಸೋಕಿ ನಾನು" ಅಣ್ಣನ ಕಾಲು ಬುಡಕ್ಕೆ ನೀರು ಹರಿತಿರೋದನ್ನ ಗಮನಿಸಿ ಓಡಿ ಹೋಗಿ "ಲೇ ಜಿಗರಿ, ಎಳ್ಲಾನೀರ ಬಂತು ಅಡಿಗ" ಎಬ್ಬಿಸಲು ಪ್ರಯತ್ನಿಸಿದಳು. ಹಾಳ ಮನಿ ನಿದ್ದಿ ಯಾರಸತ್ತೊದ್ರು. ಪ್ರಳಯ ಆದ್ರು ಎಚ್ಚರಾಗ್ತಿರಲಿಲ್ಲಾ ದೊಡ್ಡೋನು ಅವನಿಗಿಂತ ಸಣ್ಣೋನು. ಅವನಿಗಿಂತ, ಅವನಿಗಿಂತ ಎಂಟಹತ್ತ ಮಂದಿ ಕೇಡಿಗ ಎರಡ ಎತ್ತ ಬ್ಯಾರೆ ಒಳಗೆ, ನೀರು ಸೋರೋದು ಅವಕ್ಕು ಬ್ಯಾಸರ ತರಸಿ ಕಾಲು ಬಾಲತಲೆ ಆಡಿಸ್ತಾ, ಸೂ, ಸೂ, ಮೂಗಿಂದ ಉಸರು ಹೊರಗ ಹಾಕ್ತಿದ್ರ, ಬ್ಯಾಸರ ತಡಿಯಾಕ ಆಗದೆ ಎರಡೂ ತಲಿ ತಲಿ ಕೂಡಿಸಿ ಜಗಳ ಸುರು ಮಾಡ್ತಿದಂಗೆ, "ಎಯ್ ನಂದಿ, ಏನ್ಯಾಗೈತಿ ಎತ್ತಿಗ, ನಿನ್ನವ ಹಡಬಿ ಮಗನ ಕಂಡು ಕುರವೆತ್ತಿ ಪಪ್ss" ಅಪ್ಪ ಕೊರಿಬೀಡಿ ಬಾಯಿಂದ ತಗದು ಗದರಿಸ್ತಿದ್ದ. ಜಿರ್‍ನಿಂಗ ತನ್ನ ಬಾಲ್ಯದ ಕನಸಿನಿಂದ ಹೊರಗ ಬರೋದಕ್ಕು ಮಳಿ ಮುಗಿಲು ಸೀಳಿ ಧಾರಾಕಾರವಾಗಿ ನೆಲಕ್ಕ ಹರಿಯೋದಕ್ಕು ಸರಿಹೋಯಿತು.

❖

## ೭. ಎಲ್ಲಿಯೂ ಸಲ್ಲದವ........

ರೈಲಿನ ವೇಗಕ್ಕಿಂತ ವೇಗವಾಗಿ ಅವನ ವಿಚಾರದ ಒಗಸಾಗಿತ್ತು. ದಾರಿಯ ನಡುವೆ ಬರುವ ಬೆಟ್ಟ ಗುಡ್ಡ ಖಾಲಿಯಾಗಿರುವ ಹಳ್ಳ ಕೊಳ್ಳಗಳನ್ನ ಹಿಂದೆ ಹಾಕುತ್ತ ಯಾವುದೋ ಕಾಲದಲ್ಲಿ ತನ್ನ ಗತವೈಭವವನ್ನ ಸಾರಿದ್ದ ಹಳೆ ಕೋಟೆಗಳು ಹಳೆಗಾಯದ ಕಲೆಯಂತೆ ಕುರುಹುಗಳಾಗಿ ಅಲಲ್ಲಿ ಉಳಿದಿರುವುದನ್ನೂ ದಾಟಿ ಅವನಿರುವ ತುರುವೆಕೊಪ್ಪಲು ನಗರ ಸೇರಿದ್ದ. ರಾತ್ರಿ ಹತ್ತು ಗಂಟೆಯಾಗುತ್ತಿದ್ದಂತೆ ಅಸ್ತಿತ್ವ ಕಳೆದು ಕೊಳ್ಳುವ ರಸ್ತೆ-ಬೀದಿಗಳಲ್ಲಿ ಸುರಾಧಿಪತಿಗಳು ನಡುರಸ್ತೆಯಲ್ಲೇ ಪ್ರತ್ಯಕ್ಷರಾಗಿ ಸಹಜವಾಗಿಯೇ ಹೊರಟವರಿಗೆ ಸವಾಲಾಗುವ ಪರಿಯನ್ನ ಯತಿರಾಜು ನೆನಪಿಸಿಕೊಂಡು ಒಳಗೆ ನಡುಗಿದ. ಸರ್ಕಾರಿ ಕಛೇರಿಯೊಂದರಲ್ಲಿ ಗುಮಾಸ್ತನಾಗಿರುವ ಯತಿರಾಜುಗೆ ಅವ್ಯಕ್ತ ಸಮಸ್ಯೆಯೊಂದು ಒಳಗೆ ಹೆಡೆಯಾಡುತಿರುವುದನ್ನ ಹೊರಹಾಕಲು ಅವಕಾಶವೇ ಸಿಗದೆ ಒದ್ದಾಡುತ್ತಿದ್ದ. ತುರುವೆ ಕೊಪ್ಪಲಿನಿಂದ ಮೂರುನೂರು ಕಿಲೋಮೀಟರ್ ದೂರದ ನಂದಿಪುರ ಎಂಬೋ ಸಣ್ಣ ಕುಗ್ರಾಮದಲ್ಲಿ ಹುಟ್ಟಿ, ಗೋಡಗಳೇ ಇಲ್ಲದ ಶಾಲೆಯೊಳಗೆ ಓದಿ-ಪಟ್ಟಣಕ್ಕೆ ಸೇರಿ ಬಣ್ಣ ಬಣ್ಣದ ಕನಸುಗಳನ್ನ ತಲೆ ತುಂಬ ತುಂಬಿಕೊಂಡು, ಹುಳುಕು ಜೋಳದ ಮುದ್ದೆ-ಮಾರುದ್ದ ಮಳಕೆ ಸಾರನ್ನ ಉಂಡು ನಾಲಿಗೆ ರುಚಿಕೆಟ್ಟಿದ್ದರು ಕನಸನ್ನ ನನಸಾಗಿಸಲು ಕಷ್ಟಪಟ್ಟಿದ್ದ.

ಕೂಲಿಮಾಡಿ, ಕೆಸರು ಹೊತ್ತು ಬದುಕಿಗೊಂದು ಅರ್ಥ ಕಂಡಕೊಳ್ಳುತ್ತಿದ್ದಂತೆ ಬದುಕಿನ ಮತ್ತೊಂದು ಬದಿಗೆ ಸಣ್ಣದೊಂದು ಬಿರುಕು ಕಾಣಿಸಿಕೊಂಡಿತ್ತು. ಇದ್ದ

ನಾಲ್ಕು ಜನರಲ್ಲಿ ಕಡೇಯವನಾದ ಯತಿರಾಜು ಸರ್ಕಾರಿ ಕೆಲಸಕ್ಕೆ ಸೇರಿದ್ದೆ ದೊಡ್ಡ ತಪ್ಪಾಗಿತ್ತು. ಒದ್ದೊಂದು ಮನೆಯೊಳಗೆ ನಂದಿಪುರದಲ್ಲೇ ಇರುವ ಮೂವರು ಭಾಗಮಾಡಿಕೊಂಡರು. ಮುದುಕ ಮುದುಕಿಯ ಸ್ಥಿತಿ ಅತಂತ್ರ, ಯತಿರಾಜು ಪರಿಪರಿಯಾಗಿ ಬೇಡಿಕೊಂಡ. "ಅವ್ವಯ್ಯ, ನಂತಾವೆ ಬಂದು ಇರಬಾರ್ದ, ನಾನೂವೇ ನಿಮ್ಮ ಮಗ ಅಲ್ವಾ, ನಾಕದಿನ ನೆಮ್ಮದಿಯಿಂದಿದ್ದು ಸತ್ರೇ ಸ್ವರ್ಗನಾರು ಸಿಕ್ಕೀತು" ಅಂಗಲಾಚಿ ಕೇಳ್ಕೊಂಡಿದ್ದ. ಊರಿನ ಪರಿಸರಕ್ಕೆ ಹೊಂದಿಕೊಂಡಿದ್ದ ಅವರು ಜಪ್ಪಯ್ಯ ಅನ್ನಲಿಲ್ಲಾ, ಅವನಿಗೆ ತಾನು ಇವರ ಮಗ ಹೌದೊ ಅಲ್ಲವೊ ಎನ್ನುವ ಅನುಮಾನ ಸುರು ಆಯ್ತು. ಮುದಕ–ಮುದಕಿ, ಮೂರಜನ ಅಣ್ಣಂದಿರು ಯತಿರಾಜನನ್ನ ನೋಡುವ ದೃಷ್ಠಿ ಭಿನ್ನವಾಗಿತ್ತು. ಅವನು ಎಷ್ಟೇ ಆದರೂ ಬುದ್ಧಿವಂತ ತಮಗಿಂತ ಭಿನ್ನ ಎನ್ನುವ ಇರ್ಷೆಯೋ ಅಥವಾ ಅವನಿಗೂ ನಮಗೂ ಏನೇ ಅಂದ್ರು ಸ್ವಲ್ಪ ಅಂತರವಿದೆ ಎನ್ನುವ ಕೀಳರಿಮೆಯೋ ಯತಿರಾಜುಗೆ ಅರ್ಥಮಾಡಿಕೊಳ್ಳಲು ಆಗಲೆ ಇಲ್ಲಾ. ಸಾಲದಕ್ಕೆ, "ನಿಂಗೆಲ್ಲಾ, ತಿಂಗಳು ತುಂಬತಿದ್ದಂಗೆಯಾ ಕೈಗೆ ಇಡಿಗಂಟು ಬಂದ ಬಿಳ್ತದೆ ನಮ್ದು ಹಂಗಲ್ಲಪ್ಲಾ ಹೊತ್ತಾರೆ ಹೋಗಿ ಗೇಯಬೇಕು ಮುನ್ನೂರ ಅರವತ್ತೈದು ದಿನವೂ ಗೇದ್ರೆ ಒಸಿ ಕಾಸ ಕಂಡೇವು." ಎನ್ನುವ ಚುಚ್ಚು ಮಾತಗಳು.

ಅವನ ಹೆಂಡತಿ ವಂದನಾಗೆ ಊರಿಗೆ ಹೋಗುವುದೇ ಬೇಡ ಎನಿಸಿತ್ತು. ಓರಗಿತ್ತಿಯ ಸೇರಿ, "ಹೂಂ ಬಂದ್ಲು ನೋಡ್ರೆ, ಮಾರಾಣಿ, ಹೆಂಗೆ ಬೆಳ್ಳಗವ್ಳೆ, ನಾಕದಿನ ನಮ್ಮಂಗ ಹ್ವಾರೆ ಮಾಡಾಕ ಬಂದ್ರೆ ಅವಳ ನಿಜ ಬಣ್ಣ ಹೊರಗ ಬೀಳ್ತದೆ." ಒಂದಾ ಎರಡ ಗಂಡನೆದುರಿಗೆ ಹೇಳಿ ಗೋಳಾಡಿದ್ದಳು. ಈ ಜನಯಾಕೆ ಹೀಗಾಡ್ತಾರೆ? ಇದೇ ಹಳ್ಳಿಯಲ್ಲಿ ಹುಟ್ಟಿ ಇದೇ ಪರಿಸರದಲ್ಲಿ ಬೆಳದು ಇದೇ ಬಾವಿ ನಾನು ಚಿಕ್ಕವ ನೀರುವಾಗ ನೀರು ಸೇದಿದ್ದು, ಬೇಸಿಗೆಕಾಲಕ್ಕೆ ನೀರು ಸಿಗುವುದು ಬಹಳ ಅಪರೂಪ ಆಗ ನನ್ನನ್ನ ನಾನು ಬೇಡಾ ಎಂದು ಹೆದರಿಕೊಂಡರು ಹಿರಿಯಣ್ಣ ಗೋಪಾಲ ಸೊಂಟಕ್ಕೆ ಹಗ್ಗ ಬಿಗದು, "ಇಳಿಯ್ಯಾ ನೀ ಏನ್ ಹುಡಗಿ ಮಾಡ್ದಂಗ ಮಾಡ್ತಿಯಲ್ಲಾ ಧೈರ್ಯ ಬತ್ತದೆ ಹೂಂ ಹಗ್ಗ ಗಟ್ಟಿ ಇಡ್ಕ" ಒತ್ತಾಯದಿಂದ ಒಳಗಿಳಿಸಿದ ನಂತರ ಸಿಕ್ಕ ನೀರನ್ನ ಊರಿಗೆ ಮುಂಚೆನೆ ಗೋರಿಕೊಂಡಿದ್ದು. ಮುಂಜಾನೆಯ ಸವಿನಿದ್ದೆಯನ್ನ ಸವಿಯುತ್ತಿರುವಾಗ್ಲೆ ಅಪ್ಪ, "ಎಲ್ಲಿ ಯತ್ರಾಜು, ಬಿರ್ನೆ ಎಳಸ್ಲಾ, ಹೊತ್ತಾಯ್ತದೆ ಎತ್ತಗಳು ಬಿಸಲಾಯ್ತಿದಂಗೆ ದಣಕೊಂತವೇ" ಹಿಂಸೆಯಾದರೂ ಅಪ್ಪನ ಬಾಯಿಗೆ ಹೆದರಿ ದೊಡ್ಡ ರಂಟೆ ಹೊಡೆಯುವಾಗ ಚೆಲ್ಲಾರ ಹೊಡೆಯಲು ಹೋಗಲಿಲ್ಲವೇ?

ಯತಿರಾಜು ಖಿನ್ನನಾಗಿದ್ದ, "ನೀ ಏನ್ಲಾ ಈಗ ದೊಡ್ಡ ಮನ್ಸಾ ನಾವು ಅಂದ್ರೆ ಇಲ್ಲೇ ಈ ಹಳ್ಳಿಯೊಳಗೆ ಬದಕೋರು, ಬಹಳ ಅಂದ್ರೆ ಕಾಸರಗೋಡು, ಮಂಗಳೂರು, ಗೋವಾ ಅಂತ ದುಡಿಯಾಕೆ ನಾಕದಿನ ಹೊರಗ ಹೋದೆವು ವಿನಃ ಎದ್ರು ಬಿದ್ರು ಈ ಹಳ್ಳಿನೆ ಗತಿ." ಅವನ ಜೊತೆಯಲ್ಲೆ ಓದಿ, ಆಟ ಆಡ್ತಿದ್ದ ಮಾದೇಶನಿಗೂ ಅವನು ಭಿನ್ನವಾಗಿ ಕಂಡಿದ್ದ ಮುಂಗಾರ ಮಳೆ ಜೋರಾಗಿ ಬಿದ್ದರೆ, ಇಲ್ಲಾ ನಡುವೆ ಬರುವ ಅಡ್ಡಮಳೆಗಳೇನಾದ ಕಣ ಹೂಯ್ದಿರೆ ತುಂಬುವ ಊರಪಕ್ಕದ ಕೆರೆಯೊಳಗೆ ಯಾರ ಬರಲಿ ಬರದೆ ಇರಲಿ ಮಾದೇಶ ಯತಿರಾಜು ಹಾಜರಿರುತ್ತಿದ್ದರು. ಹುಣಸೆ ಚಿಗುರು, ಮಾವಿನ ಫಸಲು ಆಯಲು ಇಬ್ಬರು ಒಂದಾಗೆ ಹೋಗುತ್ತಿದ್ದರು. ಊರಬೇಲಿಗಳಲ್ಲಿ ಇರಬಹುದಾದ ಓತಿಕ್ಯಾತಗಳನ್ನ ಹಿಡಿಯಲು ಕಲ್ಲು ಎಸೆಯುವುದರಿಂದ ಹಿಡಿದು ಊರಮುಂದಿನ ದೊಡ್ಡ ಮಣ್ಣಿನ ದಿಬ್ಬಗಳ ಮೇಲೆ ಆಡಿದ್ದು ಅವನ ಜೊತೆಗೆ ತಮ್ಮೂರ ಶಾಲೆಯಿಂದ ಹೇಗೊ ಪಾಸಾಗಿ ಯತಿರಾಜು ಊರಿಂದ ಅರವತ್ತು ಮೈಲಿ ದೂರದ ದಾಮನಿಂಗ್ಲ ಪಟ್ಟಣದ ಫ್ರೀ ಹಾಸ್ಟಲೊಳಗೆ ಸೀಟು ಗಿಟ್ಟಿಸಿಕೊಂಡು ಓದು ಮುಂದುವರಿಸಿದ ಮಾದೇಶನ ಮನಿಸ್ಥಿತಿ ಸರಿಯಾಗಿಲ್ಲದಕ್ಕೆ ಶಾಲೆ ಬಿಟ್ಟು ಕೂಲಿ ಮಾಡತೊಡಗಿದ. ಆದರೆ ಇಬ್ಬರು ತಮಗೆ ತಿಳುವಳಿಕೆ ಬಂದ ವಯಸ್ಸಿನವರೆಗೂವೆ ಜೊತೆ ಜೊತೆಯಾಗೆ ಆಡಿಕೊಂಡು ಕೂಡಿಕೊಂಡು ಇದ್ರು, ಮಾದೇಶನ ಮುಖದ ಮೇಲೆ ಮೀಸೆ ಚಿಗುರುತ್ತಿದ್ದ ಹಾಗೆ ಅವನಿಗೊಂದು ಮದುವೆ ಮಾಡಿಸಿ ಸಂಸಾರದ ಜವಾಬ್ದಾರಿ ಹೊರಿಸಿದರು. ಯತಿರಾಜು ಅವಾಗಿನ್ನೂ ಮೆಟ್ರಿಕನಲ್ಲಿದ್ದಾ. ಪರೀಕ್ಷೆ ಮುಗಿಸಿಕೊಂಡು ಊರಿಗೆ ಬಂದಾಗ ಮಾದೇಶನ ಸುಳಿವೇ ಇಲ್ಲಾ. ಎಂದೋ ಒಂದ ದಿನ ಕಂಡಾಗ ಕೇಳಿದ ಯತಿರಾಜು, "ಎಲ್ಲಾ ಕಾಣಾತಿಲ್ವಲ್ಲಾ ಏನ ಇಸ್ಯಾ ದುಡಿಯಾಕ ಏನಾರು ಹೋಗಿದ್ಯಾ." ಅವನ ಕಡೆಗೆ ವಿಚಿತ್ರವಾಗಿ ನೋಡಿದ ಮಾದೇಶ ನಾಚಿಕೆಯಿಂದ, "ಹಂಗೇನಿಲ್ಲಾ ಕನ್ಲಾ, ಈಗ ವಸಿ ಕೆಲ್ಸ ಕನ್ಲಾ, ಬರಾಕ ಆಗಾಕಿಲ್ಲಾ." "ಏಯ್ ಅದೇನಪ್ಪಾ, ಶ್ಯಾನೆ ಕೆಲ್ಸ ನಂಗ ತಿಳಿಯದ್ದು." ರೇಗಿಸಿದ, ಹೇಗೆ ಹೇಳ ಬೇಕು ಎನ್ನುವುದು ತಿಳಿಯದೆ ಒದ್ದಾಡುತ್ತಿದ್ದ ಮಾದೇಶನ್ನ ಯತಿರಾಜು ಗಮನಿಸತೊಡಗಿದ್ದ. ಯಾರೂ, "ರೀ ಬನ್ನಿ ಹೊತ್ತಾಯ್ತದೆ, ನಮ್ಮೂರ ಬಸ್ಸು ದಿನಕೊಂದೆಸಲ ಬರೋದು" ಹೆಣ್ಣುಧನಿ ಕರದದನ್ನ ಕೇಳಿಸಿಕೊಂಡು ನೋಡಿದ, ತನ್ನ ವಯಸ್ಸಿನ ಹುಡುಗಿ ಮಾದೇಶನ್ನ ಕರದದ್ದು ಕೇಳಿ ಪರಿಸ್ಥಿತಿಯನ್ನ ಅರ್ಥಮಾಡಿಕೊಂಡ. "ಇದಾವಿಷ್ಯಾ ಯಾವಾಗ್ಲ ಮದ್ವೆ ಮಾಡ್ಕಂಡೆ." ಮುಖದ ಮೆಲಿನ ಬೆವರು ಒರೆಸಿಕೊಳ್ಳತ್ತಿದ್ದ ಮಾದೇಶನ್ನ ಕೇಳಿದ. "ಅದೇ ಕನ್ಲಾ ಒಂದೆರಡ ತಿಂಗಳಾದ್ವು, ಬರ್ತಿನಿ ಅವರೂರಿಗ ಹೋಗಬೇಕು" ಅವನ ಉತ್ತರಕ್ಕೂ ಕಾಯದೆ ಓಡಿದ ಯತಿರಾಜು ಕ್ಷಣಮೌನವಾಗಿ

ಅವನು ಹೋದ ದಿಕ್ಕಿನ ಕಡೆಗೆ ನೋಡಿದ. ಅವನ ಮತ್ತು ಮಾದೇಶನ ದಾರಿಗಳು ಕವಲ ಒಡೆದಿದ್ದವು ಮಾದೇಶ ಸಂಸಾರಿ ತಾನು ಆಲೋಚಿಸುತ್ತ ಅವನ ಜೊತೆಗೆ ಕಳೆದ ಎಲ್ಲಾ ಘಳಿಗೆಗಳನ್ನ ನೆನಪು ಮಾಡಿಕೊಳ್ಳವ ಹುಸಿ ಪ್ರಯತ್ನ ನಡೆಸಿದ. ಅಂತಹ ಸ್ನೇಹಿತ ಮಾದೇಶನಿಗೂ ತನ್ನ ಮೇಲೆ ಇರ್ಷೆಯೋ, ಇಲ್ಲಾ ತನ್ನನ್ನ ನಿಜವಾಗಿಯೂ ಭಿನ್ನವಾಗಿ ಕಲ್ಪಸಿಕೊಂಡು ನಾನು ವಿದ್ಯೆಕಲೆತು, ನೌಕರಿ ಹಿಡಿದ ನಂತರ ನಾನು ಎಲ್ಲರಿಗಿಂತಲ್ಲೂ ಭಿನ್ನವಾಗಿ ಕಲ್ಪಿಸಿಕೊಂಡು ನಾನು ವಿದ್ಯೆಕಲೆತು ನೌಕರಿ ಹಿಡಿದ ನಂತರ ನಾನು ಎಲ್ಲರಿಗಿಂತಲೂ ಶ್ರೇಷ್ಠನೆಂದು ಈ ಜನರು ಆಲೋಚಿಸುವಂತೆ ವರ್ತಿಸುತ್ತಿದ್ದೆನೋ ಹೇಗೆ? ನೌಕರಿ ಮಾಡಲು ಊರು ಬಿಟ್ಟವರು ನಿಜವಾಗಿಯೂ ತಮ್ಮೂರಿನೊಂದಿಗಿನ ಸಂಪರ್ಕ ಕಳೆದುಕೊಳ್ಳುತ್ತಾರೆಯೇ? ಈ ನಗರಗಳಲ್ಲಿ ವಾಸವಾಗಿರುವ ಪ್ರತಿಶತ ೯೦ರಷ್ಟು ಜನ ಹಳ್ಳಿಯಲ್ಲಿ ಹುಟ್ಟಿದವರಲ್ಲವೆ? ಅವನು ಆಲೋಚಿಸುತ್ತಿದ್ದ. ವಲಸೆ ಮನುಷ್ಯನ ಮೂಲ ಸ್ವಭಾವ. ನಾಗರಿಕ ಮನುಷ್ಯ ಹುಲ್ಲುಗಾವಲು ನದಿಯ ಫಲವತ್ತಾದ ಬಯಲುಗಳನ್ನ ಹುಡುಕುತ್ತ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಿರಲಿಲ್ಲವೆ. ನಾನು ಹತ್ತು ವರ್ಷಗಳ ಕಾಲ ಊರು ಬಿಟ್ಟಿದ್ದಕ್ಕೆ ಈ ಜನರು ಹೀಗೆ ನನ್ನನ್ನು ಪ್ರತ್ಯೇಕಿಸುತ್ತಿದ್ದಾರೆ? ಯತಿರಾಜು ನೊಂದುಕೊಂಡಿದ್ದ.

ಅಂದು, ಒಬ್ಬರನ್ನೊಬ್ಬರು ಇಷ್ಟ ಪಡುವ ಒಬ್ಬರಿಗೆ ನೋವಾದರೆ ಸ್ವಂಧಿಸುವ ಮನಸ್ಸುಗಳಿದ್ದವು ಆ ಮನೆಯೊಳಗೆ. ಒಂದೇ ಸೂರಿನಡಿಯ ಮನಸ್ಸುಗಳು ಏಕತಾನತೆಯಲ್ಲಿ ತೊಡಗಿಕೊಂಡಿದ್ದವು. ನಾನು ಶಾಲೆಗೆ ಹೋಗುತ್ತಿದ್ದಾಗ ಹೆಮ್ಮೆಪುಡುತ್ತಿದ್ದ ಹಿರಿಯಣ್ಣ ಗೋಪಾಲ, ಎರಡನೇಯವನಾದ ನಂಜುಂಡ, ಮೂರನೇಯ ಮುತ್ತುರಾಜು ನಾನು ಕಾಲೇಜು ಮುಗಿಸುವವರಗೆ ಬಹಳ ಆತ್ಮೀಯವಾಗೆ ಇದ್ದರು. ಮೊಟ್ಟಮದಲಿಗೆ ಗೋಪಾಲ ಮದುವೆಯನ್ನ ಮಾಡಿಕೊಳ್ಳುತ್ತಿದ್ದಂತೆ ಹೂ ಪೊಕಳೆಗಳು ಉದರುವಂತೆ ಸಂಬಂಧಗಳು ಕಳಚಿಕೊಂಡವು. ಯತಿರಾಜುಗೆ ಇನ್ನು ನೌಕರಿಸಿಕ್ಕಿರಲಿಲ್ಲಾ ಓದಿದ್ದಾನೆಂಬ ಭಾವನೆ ಆದರೂ ಅವನ ಕೈಲಾದ ಕೆಲಸ ಮಾಡುತ್ತ ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನ ಮಾಡಿದ್ದ. ಆದರೆ ಯಾಕೊ ಪರಿಸ್ಥಿತಿ ತಿರುಗಿ ಅವನ ವಿರುದ್ಧ ನಿಲ್ಲುತ್ತಿದ್ದಂತೆ ನಂದಿಪುರ ಬಿಟ್ಟು ಪಟ್ಟಣ ಸೇರಿದ ಶತಾಯಗತಾಯ ಪ್ರಯತ್ನ ಮಾಡಿ ಸರ್ಕಾರಿ ನೌಕರಿ ಗಿಟ್ಟಿಸಿ ಈಗಲಾದರು ಪರಿಸ್ಥಿತಿ ಸುಧಾರಿಸಿತು ಎಂದು ಕೊಂಡಿದ್ದ.

ಆರಂಭಕ್ಕೆ ತನ್ನ ಕೈಲಾದಷ್ಟು ಹಣ ಕಳುಹಿಸುತಿದ್ದ ಆಗ ಮನೆ ಮಂದಿ ಎಲ್ಲಾ ಬೇರೆಯವರ ಮುಂದೆ ತಮ್ಮ ಸಹೋದರ ಪೇಟೆಯಲ್ಲಿ ಉದ್ಯೋಗ ಮಾಡುತ್ತಿದ್ದಾನೆ

ಎಂಬುದಾಗಿ ಹೇಳಿಕೊಳ್ಳುತ್ತಿದ್ದರು. ಅವನ ಮದುವೆಯಾಗುತ್ತಿದ್ದಂತೆ ಜವಾಬ್ದಾರಿಗಳು ಹೆಚ್ಚಾಗಿ ಹಣ ಕಳುಹಿಸುವುದು ನಿಲ್ಲುತ್ತಿದ್ದಂತೆ, "ನಾವು ಕಷ್ಟಪಟ್ಟು ಓದಿಸಲಿಲ್ವಾ ಈಗ ನೌಕರಿ ಸಿಕ್ಕಿದ್ದೆ ಅವನ ಪಾಡಿಗೆ ಅವನು ಹೊಂಟೋದ ನಮ್ಮ ಮಕ್ಕಳು ಮರಿಗಳನ್ನು ಕರ್ಕೊಂಡ ಹೋಗಿ ಒದಿಸಬಾರ್ದ" ಮಾತಗಳು ಬರತೊಡಗಿದವು. ತನ್ನ ಬದುಕೆ ತನಗೆ ಸವಾಲಾಗಿರುವಾಗ ಮತ್ತೊಬ್ಬರ ಕುರಿತು ಆಲೋಚನೆಯಾದರೂ ಹೇಗೆ ಮಾಡಿಯಾನು? ಕಟ್ಟಿಗೆಯಿಂದ ಹಿಡಿದು ನೀರಿನವರೆಗೆ ಕೊಂಡುಕೊಂಡೆ ಜೀವನ ನಡೆಸುವ ಪರಿಸ್ಥಿಯೊಳಗೆ ಗುಮಾಸ್ತನ ಸಂಬಳ ಯಾವ ತುದಿಗಳಿಗೂ ಮುಟ್ಟಲಾಗುತ್ತಿರಲಿಲ್ಲ. ಮಕ್ಕಳಾದ ಮೇಲಂತು ಒಂದನೇಯ ತಾರೀಖಿಗೆ ಸಾಲಗಾರರ ಮುಂದೆ ಕೈ ಚಾಚುವ ಸ್ಥಿತಿ ಯತಿರಾಜನದಾಗಿತ್ತು. ಹೇಗೊ ಒಂದು ಆವಸ್ಥೆಯಿಂದ ಮತ್ತೊಂದು ಆವಸ್ಥೆಯನ್ನ ತಲುಪಿದ್ದ, ಒಮ್ಮೊಮ್ಮೆ ಯೋಚಿಸುತ್ತಿದ್ದ. ತಾನು ದೊಡ್ಡ ಹುದ್ದೆಯನ್ನ ಪಡೆಯಬೇಕಿತ್ತು ಇಲ್ಲವೆ ಯಾವುದಾದರೂ ಲಾಭ ಬರುವ ವ್ಯಾಪಾರನಾದ್ರು ಮಾಡಬೇಕಿತ್ತು ಅಂತ. ಯಾಕಂದ್ರೆ ಮದುವೆಯಾಗಿ ಏಳೆಂಟು ವರ್ಷಗಳೆ ಆದರೂ ಹೆಂಡತಿಗೆ ಒಳ್ಳೆ ಸೀರೆಯನ್ನ ಕೊಡಿಸಿರಲಲ್ಲಾ ಇಪ್ಪತ್ತು ರೂಪಾಯಿಯ ಒಳ್ಳೆ ಅಕ್ಕಿಯ ಅನ್ನವನ್ನ ಮಾಡಿಕೊಂಡು ಊಟ ಮಾಡಲು ಆಗಿರಲಿಲ್ಲಾ. ನಗರದಲ್ಲಿ ಬದುಕಿರುವ ಶ್ರೀಮಂತರು ಆಧಿಕಾರಿಗಳು ಕಾರಿನೊಳಗೆ ಅಡ್ಡಾಡುವಾಗ ತದೇಕ ಚಿತ್ತದಿಂದ ಆಶ್ಚರ್ಯ ಚಕಿತನಾಗಿ ನೋಡುತ್ತ ನಿಂತು ಬಿಡುತ್ತಿದ್ದ.

ನಾನು ಯಾವ ಗುಂಪಿಗೆ ಸೇರಿದವನು ಹಳ್ಳಿಯಲ್ಲೂ ಸಲ್ಲದವನು ಪಟ್ಟದ ಬದುಕಿಗೂ ಹೊಂದಿಕೊಳ್ಳದವನು ನನ್ನ ಜಾಗ ಎಲ್ಲಿದೆ? ಹುಡುಕಾಟ ನಡೆಸಿದ್ದ ಅವನ ಮನಸು ಮೆದುಳಿನ ಮೂಲೆಗಳಲೆಲ್ಲಾ ತಡಕಾಡಿ ಕೊನೆಗೊಂದು ತೀರ್ಮಾನಕ್ಕೆ ಬಂದಿದ್ದ. ನಾನು ಎಲ್ಲಿಯೂ ಸಲ್ಲದವನು ನನಗೆ ಅಸ್ಥಿತ್ವವೇ ಇಲ್ಲ ಸದ್ಯಕ್ಕೆ ಬದುಕಲಿಕ್ಕೆ ನೌಕರಿ ಇದೆ. ತಿಂಗಳ ಖರ್ಚಿಗೆ ಕಛೇರಿಯೊಳಗೆ ದುಡಿದರೆ ಸಂಬಳ ಬರುತ್ತದೆ. ಊರಿಗೆ ಹೋದರೆ ಕಿತ್ತು ತಿನ್ನುವ ಅಪರಾಧಿ ಭಾವ ಅನಾಥ ಪ್ರಜ್ಞೆ ಈ ನಗರದಲಿಲ್ಲಾ ಅಷ್ಟೆ. ಇರುವಷ್ಟು ಕಾಲ ಇರುವುದೆ ನನ್ನೂರೆಂದು ಹೊಂದಿಕೊಂಡು ಬದುಕು ಬೇಕು ಎಂದು ಕೊಳ್ಳುವುದಕ್ಕೂ ಅವನು ವಾಸವಾಗಿರೋ ಲಕ್ಷ್ಮಿಪುರ ಕಾಲೋನಿ ಬರುವುದಕ್ಕೂ ಸರಿಹೋಯ್ತು.

❖

## ೮. ಚಹದಂಗಡಿಯಲ್ಲಿ ಸಿಕ್ಕಮುದುಕ

ನನ್ನ ಹುಡುಕಾಟ ನಡದೆ ಇತ್ತು. ಹೌದು ನಾನು ಏನನ್ನ ಹುಡುಕುತ್ತಿದ್ದೇನೆ? ಸುಖ-ದುಃಖ, ಪ್ರೀತಿ-ಪ್ರೇಮ, ಮಮತೆ -ತ್ಯಾಗ ಬದುಕು. ನಾನು ಉಳಿದುಕೊಂಡಿದ್ದ ಹೊಟೇಲಿನ ಎದುರಿಗಿದ್ದ ಚಹದ ಅಂಗಡಿಯಲ್ಲಿ ಚಹ ಕುಡಿಯಬೇಕು ಅನಿಸಿ ಒಂದು ಕಪ್ಪು ಚಹ ಹಾಗೂ ನನಗೆ ಇಷ್ಟವಾದ ಒಂದು ಬನ್ ತೆಗೆದುಕೊಂಡೆ ನನ್ನೆದುರಿಗೆ ಇಬ್ಬರು ಇಳಿವಯಸ್ಸಿನವರು ಕುಳಿತುಕೊಂಡು ನನಗೆ ತಿಳಿಯದ ಒಡಿಸ್ಸಿ ಭಾಷೆಯಲ್ಲಿ ಮಾತನಾಡುತ್ತಿದ್ದರು. ಪಕ್ಕದಲ್ಲಿ ಒಬ್ಬ ಜೀನ್ಸ್ ಪ್ಯಾಂಟಿನ ಹುಡುಗ ಅವರಿಗೂ ತನಗೂ ಯಾವ ಸಂಬಂಧವಿಲ್ಲ ಎಂಬಂತೆ ಚಹ ಕುಡಿದು ಬಿಲ್ಲಕೊಟ್ಟವನೆ ಹೊರಟ ಹೋದ. ನನಗೆ ಮಾತ್ರ ಇಬ್ಬರು ಮುದುಕರಲ್ಲಿ ಒಬ್ಬನ ಕುರಿತು ಆಸಕ್ತಿ ಮೂಡಿತು, ಅವನ ಪಕ್ಕದಲ್ಲಿದ್ದವ ಸ್ಥಿತಿವಂತನಿರಬೇಕು ಜೇಬಿನಿಂದ ಸುರಳಿಸುತ್ತಿ ತ್ರಿಕೋನದಾಕರದಲ್ಲಿ ಪ್ಯಾಕ ಮಾಡಿದ ಪಾನ್‌ಗಳ ಪ್ಯಾಕೇಟು ತಗದವನೆ ಒಂದನ್ನ ಬಾಯಿಯೊಳಗಿಟ್ಟುಕೊಂಡ ನನ್ನ ಬನ್ ಅರ್ಧ ಮುಗಿದಿತ್ತು, ಇನ್ನೊಬ್ಬನು ಅಸಹಾಯಕನಾಗಿ ಅವನು ಪಾನ ಅಗಿಯುತ್ತಿರುವುದನ್ನೆ ತದೇಕ ಚಿತ್ತದಿಂದ ನೋಡುತ್ತಿದ್ದ.

ಈ ಮುದುಕನ ಅಸಹಾಯಕತೆಗೆ ಕಾರಣವಾದರೂ ಏನಿರಬಹುದು? ಅವನ ಹಿನ್ನೆಲೆ ಗೊತ್ತಿಲ್ಲದ ನನಗೆ ಅವನನ್ನ ಕುರಿತು ಆಲೋಚನೆ ಯಾಕೆ ಮಾಡಬೇಕು ಎನಿಸಿತು. ಆದರೆ ನನ್ನೊಳಗಿನ ತುಡಿತ ಮಾತ್ರ ನಾನು ನಯಿಪಲ್ಲಿಯ ಹೊಟೇಲಿಗ ಬಂದ ದಿನದಿಂದಲೇ ಆರಂಭವಾಗಿತ್ತು. ಇಲ್ಲಿ ಅದೆಷ್ಟೋ ಖಾಲಿ ಕನಸುಗಳ



ಅಧಿನಾಯಕರು ಜೋಪಡಿಯಲ್ಲಿ ಬದುಕಿದ್ದಾರೆ. ಕುತೂಹಲವೆಂದರೆ ನಾನು ಬಂದ ಮಾರನೆ ದಿನ ಎದ್ದಾಗ ರಾತ್ರಿ ಐದುವರೆ ಗಂಟೆ, ಹೊರಗಡೆ ಮೈಸೂರಿನ ಮುಂಜಾನೆ ೯ರ ಬಿಸಿಲಿನಂತೆ ಪ್ರಕಾಶಮಾನವಾಗಿತ್ತು. ವಾತಾವರಣ ಗೋಡೆ ಮೇಲಿನ ಗಡಿಯಾರ ನೋಡಿದೆ ೫.೩೦ ತೋರಿಸುತಿತ್ತು ಗಾಬರಿಯಾಗಿ ನನ್ನ ಮೊಬೈಲಿನಲ್ಲಿ ನೋಡಿದೆ ಐದುವರೆ ಆಶ್ಚರ್ಯ ಕುತೂಹಲದಿಂದ ಎದ್ದವನೆ ಸಂಧ್ಯಾವಂದನೆ ಮುಗಿಸಿಕೊಂಡು ಬಟ್ಟೆ ಹಾಕ್ಕೊಂಡವನೆ ವಾಕಿಂಗ್ ಹೊಂಟೆ. ದಾರಿಯಲ್ಲಿ ಇನ್ನೊಂದು ಕೌತುಕ ಕಾದಿತ್ತು. ರಸ್ತೆ ಆ ಬದಿಯ ಗುಡಿಸಲುಗಳಲ್ಲಿ ವಾಸವಾಗಿರುವ ಮನುಜರೆಂಬ ಪ್ರಾಣಿಗಳಲ್ಲಿ ಹೆಂಗಸರು_ಯಾವ ನಾಚಿಕೆಯೂ ಇಲ್ಲದೆ ಅರೆಬೆತ್ತಲಾಗಿ ನಿಗರಿನಿಂತ ಮೊಲೆಗಳನ್ನ ಪ್ರದರ್ಶಿಸುತ್ತ ಸ್ನಾನ ಮಾಡುತ್ತಿದ್ದರು.

ಮೊದಲದಿನ ನಾನು ಬಟ್ಟೆ ಸೋಪು ಕೇಳಿದ ಪೆಟ್ಟಿಗೆ ಅಂಗಡಿಯವ ಜೋಡಿಸಿರುವ ಪ್ಲಾಸ್ಟಿಕ್ ಕಾಲನ್ನ ಸರಿಪಡಿಸುತ್ತ ನಾನು ನಾಚಿಕೆಯಿಂದ ಹೆಂಗಸರ ಕಡೆಗೆ ನೋಡುತ್ತ ನಡೆಯುತ್ತಿರುವುದನ್ನ ಗಮನಿಸುತ್ತಿರುವಂತೆ ಅನಿಸಿ ಸರಸರನೆ, ನಡೆದುಬಿಟ್ಟೆ ಛೇ, ಇವರು ಯಾಕಿ ಹೀಗೆ ಏನು ತಿಳಿಯಲಿಲ್ಲಾ, ಯಾರನ್ನಾದರೂ ಕೇಳಬೇಕೆಂದರೆ ಪರಸ್ಥಳ ಪರಸಂಕಟ, ನನ್ನೊಳಗಿನ ಎಷ್ಟೋ ಸವಾಲುಗಳನ್ನ ಧಮನಗೊಳಿಸಿ ಬಡತನ ಅಂದುಕೊಂಡು ಸಮಾಧಾನ ಮಾಡಿಕೊಂಡೆ. ರಸ್ತೆ ಈಚೆ ಬದಿಯಲ್ಲಿ ದೊಡ್ಡ ದೊಡ್ಡ ಬಂಗಲೆಗಳು. ದೊಡ್ಡ ಹೊಟೇಲ್‌ಗಳು ರಸ್ತೆಗಳ ಸ್ವಚ್ಛವಾಗಿವೆ, ಆದರೆ ಜೋಪಡಿಗಳಲ್ಲಿ ವಾಸಿಸುತ್ತಿರುವವರ ಮನೆಯ ಸುತ್ತಲು ಗಲೀಜು ನೀರು, ರದ್ದಿಕಾಗದ, ಪ್ಲಾಸ್ಟಿಕ್, ಹೊಲಸು ವಾಸನೆ ರಾಜಧಾನಿಯಲ್ಲೇ ಈ ಸ್ಥಿತಿ ಇನ್ನು ಹಳ್ಳಿಗಳ ಸ್ಥಿತಿ ಏನು?

ಆಟೋ ಚಾಲಕನ ಆಗಮನದಿಂದ ನನ್ನೆಲ್ಲಾ ಆಲೋಚನೆಗಳು ತುಂಡಾದವು, ನನ್ನೆದುರಿಗಿನ ಮುದುಕ ಪ್ಲಾಸ್ಟಿಕ ಚೀಲದಿಂದ ಒಂದು ಒರಿಯಾ ಭಾಷೆಯಲ್ಲಿರುವ ಕ್ಯಾಲೆಂಡರ್ ತೆಗೆದು ಡ್ರೈವರ್ ಮುಂದೆ ಹಿಡಿದ ಅವನು ಅದನ್ನ ಇಸ್ಕೊಂಡವನೆ ನಾಲ್ಕೈದು ಸಲ ತಿರುವಿಹಾಕಿ ಏನೋ ಸಬೂಬು ಹೇಳಿ ವಾಪಾಸ ಮಾಡಿದ! ಛೇ ಮುತ್ತಾಳ ಒಂದನ್ನ ಖರೀದಿಸಬಾರದಿತ್ತೆ' ಉದ್ಗರಿಸಿದೆ ಚಹದಂಗಡಿವನು ನನ್ನ ಕಡೆ ನೋಡಿದ. ನಾನು ಮುದುಕನ ಕಡೆಗೆ ನೋಡಿದೆ ಅವನಿಗೆ ನಿರಾಶೆಯಾಗಿತ್ತು. ಅವನು ಒಂದನ್ನಾದರೂ ಖರೀದಿಸಿದರೆ ಬಂದ ಲಾಭದಲ್ಲಿ ಒಂದು ಅರ್ಧ ಕಪ್ಪು ಚಹ ಕುಡಿಯುವ ಆಲೋಚನೆ ಮಾಡಿರಬೇಕು. ಏಕೆಂದರೆ, ಅವನ ಸುತ್ತಲು ಚಹ ಕುಡಿಯುತ್ತಿದ್ದಾರೆ. ಕಡೆಗೆ ಸಣ್ಣ ಹುಡ್ರು ರೊಟ್ಟಿ ತಿನ್ನುವಾಗ ನಾಯಿಯೊಂದು ದೈನ್ಯತೆಯಿಂದ

ಒಂದು ಗುಕ್ಕು ಬಿಸಾಕಬಹುದೆಂದು ಮಗು ಕೈಯಿಂದ ರೊಟ್ಟಿ ಮುರಿದು ಬಾಯಿಯೊಳಗೆ ತುರುಕಿ ಅಗಿದು ನುಂಗುವ ಸಂಪೂರ್ಣ ಕ್ರಿಯೆಯನ್ನ ಬಿಟ್ಟು ಬಿಡದೆ ನೋಡ್ತಾ, ಬಾಯಿಯೊಳಗೆ ಬಂದ ಜೊಲ್ಲನ್ನ ಕೆಳಗೆ ಸುರಿಸುವಂತೆ, ಚಹ ಕುಡಿಯುತ್ತಿರುವವರ ಕಪ್ಪುಗಳನ್ನ ತದೇಕ ಚಿತ್ತದಿಂದ ಗಮನಿಸುತ್ತ ಅವರು 'ಸುರ್' ಅಂತ ಎಳೆದು ನುಂಗುವುದನ್ನ ತಾನೆ ಕುಡಿದಂತೆ ಅನುಭವಿಸುತ್ತಿರುವಂತೆ ಅನಿಸಿತು.ಅವನ ಎದುರಿಗಿದ್ದ ದಾಂಡಿಗ ಮುದುಕ ಮಾತ್ರ ತನ್ನ ಪಾಡಿಗೆ ತಾನು ಎಲೆ ಅಡಿಕೆಯನ್ನ ಮೆಲ್ಲುತ್ತಿದ್ದ, "ಹಾಳ ಮನಿಯೋನು ಚಹ ಅಂತು ಕುಡಿಸಲಿಲ್ಲಾ ಕೇವಲ ಒಂದು ರೂಪಾಯಿಯ ಒಂದು ಪಾನ್ ಆದರೂ ಜೇಬಿನಿಂದ ಕೊಡಬಾರದೆ ಜಿಪುಣ, ದೊಡ್ಡ ಜಿಪುಣ" ಅಂದುಕೊಂಡೆ ಬಹುಶಃ ಅರವತ್ತೈದರ ಆಸು ಪಾಸಿರಬೇಕು ಅವನನ್ನ ನೋಡಿದರೆ ಹಿಂದೆ ಯಾವುದಾದರೂ ಉದ್ಯೋಗದಲ್ಲಿ ಇದ್ದ ಎಂದೇನು ಅನಿಸುತ್ತಿರಲಿಲ್ಲಾ, ಹೀಗೆ ಕ್ಯಾಲೆಂಡರ್ ಮಾರಿಕೊಂಡು ಜೀವನ ಸಾಗಿಸುತ್ತಿರಬಹುದು ಅನಿಸಿತು, ನನ್ನ ಕೈಯೊಳಗಿದ್ದ ಬನ್ನು ಖಾಲಿಯಾಗಿ ಚಹ ಯಾವಾಗಲೋ ಮುಗಿದಿತ್ತು. ಆದರೆ ಮುದುಕನ ಹಿನ್ನೆಲೆಯ ನನ್ನ ಹುಡುಕಾಟ ಮಾತ್ರ ಮುಗಿದಿರಲಿಲ್ಲಾ." ಹಾಂ ನನ್ನಪ್ಪನೂ ಹೀಗೆ ಕೆಲವು ಘಳಿಗೆಗಳನ್ನ ಅನುಭವಿಸಿರಬೇಕಲ್ವಾ, ಶಕ್ತಿ ಇದ್ದಾಗ ಸುತ್ತೆಲ್ಲಾ ಸೀಮೆಯನ್ನ ಒಂದು ಮಾಡಿ ದುಡಿದು ದುಡಿದು ತನ್ನ ಜೀವಿತದ ಅವಧಿಯನೆಲ್ಲಾ ಕಳೆದು ಬಿಟ್ಟ. ಆದ್ರೆ ಬೇರೆ ಮಾಡಿದಾಗ ತಾನೇ ದುಡದಿದ್ದನ್ನ ಎಲ್ಲರಿಗೂ ಹಂಚಿ ಖಾಲಿಯಾಗಿ ಕುಳಿತುಬಿಟ್ಟ ತನ್ನ ಮುಂದಿನ ಭವಿಷ್ಯಕ್ಕೆ ದಿಕ್ಕೇನು ಎಂದು ಯಾವತ್ತು ಆಲೋಚಿಸಲಿಲ್ಲಾ. ಅಪ್ಪನ ದುಡಿಮೆಯ ಫಲವನ್ನ ನಾನು ನನ್ನದು ಎಂದು ಹೆಮ್ಮೆಯಿಂದ ಎದೆ ನಿಗುರಿಸಿ ಹೇಳುತ್ತಾ ಅಡ್ಡಾಡುತ್ತೇನೆ ಅಪ್ಪ ಮಾತ್ರ ತನ್ನ ಹಳೆಯ ದಿನಗಳನ್ನ ಕೋಳಿ ಕಸದ ರಾಶಿಯಲ್ಲಿ ಕಾಳನ್ನ ಕೆದರುವಂತೆ ಯೌವ್ವನದ ಕನಸುಗಳನ್ನ ಹುಡುಕ್ತಾ ಇದ್ದ."

ಹಾಳು ವಯಸ್ಸು ಯಾವ ಹರಿ ಬ್ರಮ್ಮ ಬಂದ್ರೂನೂವೆ ತಪ್ಪಿಸಾಕ ಆಗೋದಿಲ್ಲ. ನಾಲ್ಕು ದಿನದ ಹದಿ ಹರೆಯದಲ್ಲಿ ಅದೇನ ದಿಮಾಕು, ಅದೇನು ದೌಲತ್ತು, ಗುಳಿ ಬಿದ್ದ ಕಣ್ಣು, ಬಾಡಿಬತ್ತಿರುವ ಮಕ, ಎಷ್ಟೂ ದಿನಗಳ ಹಿಂದೆ ಕೆದರಿಕೊಂಡಿದ್ದ ಮಕದ ಮೇಲಿನ ಕೂದಲು, ಹಗ್ಗ ಹೊಸೆಯುವ ಬಿಳಿನಾರಿನಂತ ತಲೆಗೂದಲು ನಿಸ್ತೇಜವಾದ ನೋಟ. ಆದರೂ ಜನರ ನಡುವೆ ಬಿಂದಾಸಾಗಿ ಬದ್ದುಕಿದ್ದಾನೆ ಬದುಕ ಬಂಡಿಯಲ್ಲಿ ಕುಳಿತು ಸಾವತರುವ ಸಾಹುಕಾರನನ್ನ ಹುಡಕುತ್ತಿದ್ದಾನೆ.

ನಾನೂ ಹುಡುಕಾಡದ ಹೊಸ ಹಾದಿಯನ್ನ ಹುಡುಕಲು ಹೊರಟುಬಿಟ್ಟೆ.

❖

## ೯. ಮರದಾಚೆ ಕುಲ ಇಣುಕಿದೊಡೆಂತಯ್ಯ

ಅಕ್ಕಪಕ್ಕದ ಮನೆಯೊಳಗೆ ಸಸಿಗಳು ನಳನಳಿಸುತ್ತಿದ್ದವು ಮಾವು, ಬಾಳೆ, ತೆಂಗು ಆ ಮನೆಯ ಸರಹದ್ದು ಗೋಡೆಯೊಳಗಿನ ವಿಶಾಲ ಬಯಲಿನಲ್ಲೂ, ಈ ಮನೆಯ ಸರಹದ್ದು ಗೋಡೆಯೊಳಗಿನ ವಿಶಾಲಬಯಲಿನಲ್ಲೂ ಸೊಂಪಾಗಿ ಬೆಳೆಯುತ್ತಿದ್ದವು. ಮನೆಗಳೊಳಗೆ ವಾಸವಾಗಿರುವ ಮನುಷ್ಯರ ನಡುವೆಯೂ ಸಂಬಂಧ ಹಚ್ಚಹಸುರಾಗಿತ್ತು. ಈ ಮನೆಯ ಮೂವರು ಹುಡುಗಿಯರು ಅವರಿಗೆ ಮಕ್ಕಳಾಗಿದ್ದರು. ಅವರು ಊರಿಗೆ ಹೋದಾಗ ಇವರೆ ಸಸಿಗಳಿಗೆ ನೀರುಣಿಸಿ ದಾರಿಹೋಕರು, ಕಳ್ಳರುಗಳಿಂದ ಕಾಪಾಡಿ ತಮ್ಮದೇ ಕೈತೋಟವೆಂಬಂತೆ ಬೆಳೆಸಿದ್ದರು.

ಈ ಮನೆಯವರು ಮೂವತ್ತು ನಲ್ವತ್ತು ನಿವೇಶನದಲ್ಲಿ ಬಹಳ ಹಿಂದೆಯೇ ಮನೆಯನ್ನು ಕಟ್ಟಿಸಿಕೊಂಡು ಇದ್ದ ಮೂವರು ಹೆಣ್ಣುಮಕ್ಕಳೊಂದಿಗೆ ಸಾರ್ಥಕ ಬದುಕನ್ನ ಬದುಕುತ್ತಿದ್ದರು. ಅವರ ಮನೆ ಪಕ್ಕದಲ್ಲೇ ಖಾಲಿಯಿದ್ದ ಮೂವತ್ತು ನಲ್ವತ್ತು ಎರಡು ನಿವೇಶನಗಳನ್ನು ಖರೀದಿಸಿದ ಮಂಗಳೂರು ಮೂಲದ ಬ್ಯಾಂಕ್ ಉದ್ಯೋಗಿ ಸುಬ್ರಹ್ಮಣ್ಯಕಿಣಿ. "ನಮಗೆ ಓಡಾಡೋದಕ್ಕೆ ತುಂಬಾ ವಿಶಾಲವಾದ ಜಾಗ ಬೇಕು" ಎಂದು ಅವರ ಹೆಂಡತಿ ಸುಮಾಕಿಣಿ,ತನ್ನ ಶ್ರೀಮಂತಿಕೆಯ ಗತ್ತಿನಲ್ಲಿ ಉಲಿದು ಪಕ್ಕದ ಮನೆಯವರ ಭಾವನೆಗೆ ಪೆಟ್ಟುಕೊಟ್ಟಳು. ಈ ಮುಗ್ಧ ಜನರು ಮಂಗಳೂರಿನವರ ಬೆಣ್ಣೆ ಮಾತಿಗೆ ಮಳ್ಳಾಗದೆ ಇರಲು ಸಾಧ್ಯವಾದೀತೆ. ಸುಬ್ರಮಣ್ಯ ಕಿಣಿ. ಮನೆ ಆರಂಭವಾಗುವ

ಮುನ್ನವೆ ಪಕ್ಕದ ಮನೆಯವರ ಸರಹದ್ದ ಗೋಡೆಯ ಮೇಲೆ ತನ್ನ ಹದ್ದಿನ ಕಣ್ಣು ನೆಟ್ಟಿದ್ದ.

"ಏಯ್, ಸಾಹೇಬ್ರೇ, ಎಂಥ ಮಾಡೋದು?" ಪಕ್ಕದ ಮನೆಯವರಿಗೆ ಹೇಳಿದ. "ಏನು ಕಿಣಿಯವರೆ ಏನು ವಿಷಯ?" ಆತ ಕೇಳಿದ. "ಎಂಥ ಇಲ್ಲಾ, ತಮ್ಮಲ್ಲಿ ಒಂದು ಕೋರಿಕೆ ಅದೇನು ಅಂದ್ರೆ ನಮ್ಮ ಇಂಜಿನೀಯರ್, ಮುಂದೆ ಕಾರುಸೆಡ್ಡಿಗೆ ಜಾಗ ಬಿಡದಂಗೆ ನಿಮ್ಮ ಸರಹದ್ದ ಗೋಡೆಗೆ ಆನಿಸಿಯೇ ಪ್ಲಾನ್ ಮಾಡಿದ್ದಾನೆ." ಕಿಣಿ ಸುಮ್ಮನೆನಾದ. ಪಕ್ಕದ ಮನೆಯಾತ, ಮುಗಳ್ನಕ್ಕು "ಅದಕ್ಕೇನಂತೆ ನ್ಯಾಯವಾಗಿ ಮೂರಡಿ ನೆಲ ಬಿಡಬೇಕು. ನಮಗೇನು ನೀವು ಬಿಡಲೇ ಬೇಕೆಂದೇನಿಲ್ಲಾ ಕಟ್ಕೊಳ್ಳಿ" ಎಂದಿದ್ದೇ ತಡ ಸುಬ್ರಮಣ್ಯ ಕಿಣಿ ಹಾಲ ಕುಡದಷ್ಟು ಸಂತೋಷಪಟ್ಟವನ ಕಟ್ಟಿಯೇ ಬಿಟ್ಟ.

ಮನೆ ವಿಶಾಲವಾಗಿಯೇ ಕಟ್ಟಿಸಿದ ಕಿಣಿ ಬಂದ ಹೊಸದರಲ್ಲಿ ಅನ್ಯೋನ್ಯವಾಗಿಯೇ ಇದ್ದ. ಸುಮಾಕಿಣಿಪಕ್ಕದ ಮನೆಯವರೊಂದಿಗೆ ಆರಂಭದಲ್ಲಿ ಸಲುಗೆಯಿಂದಲೇ ಇದ್ದಳು. ಈ ಮನೆಯ ಸಸಿಗಳು ಬೆಳೆದು ಮರವಾಗಲು ಸಮಸ್ಯೆಯ ಸುಳಿಯೊಂದು ಸುಳಿದಿತ್ತು. ದೊಡ್ಡಮನೆಯ ಕಿಣಿ ಸಣ್ಣಬುದ್ಧಿ ತೋರತೊಡಗಿದ. ಮಕ್ಕಳೇ ಇಲ್ಲದ ಗಂಡಹೆಂಡತಿ, ಪಕ್ಕದಮನೆಯವರು ತಮಗಿಂತಲೂ ಕೀಳು ಎಂದು ತಿಳಿದೊಡನೆ ಕೆಂಡಮಂಡಲವಾಗಿ ಬೆಳೆದು ಅವರದೇ ಸರಹದ್ದು ಗೋಡೆಯಾಚೆ ಇಣುಕಿದ ಕರಿಬೇವಿನ ಕುಡಿಗಳನ್ನು ಕ್ರೂರವಾಗಿ ಕಡಿದು ಹಾಕಿದ ಸುಮ, ಬಾಳೆಯ ಗೊನೆ ಬಾಗುತ್ತಿದ್ದಂತೆ ಗಿಡ ಎಳೆದು ಎಳೆಗೊನೆಯನ್ನು ಕಿತ್ತು ಕುಲದ ಸೇಡು ತೀರಿಸಿಕೊಂಡಳು. ಪ್ರತಿದಿನ ಹಿಂಸೆಯನ್ನು ತಾಳದ ಪಕ್ಕದ ಮನೆಯವರು ಕೇಳರು "ಏಯ್, ನಿಮ್ಮಂಥವರ ಜೊತೆ ನಮಗೆಂತ ಮಾತು" ತುಂಡರಿಸಿ ಬೆನ್ನ ಹಿಂದೆಯೇ ಬಾಗಿಲು ದಢ್ ಎಂದ ಸದ್ದು. ಈ ಮನೆಯರಿಗೆ ತಪ್ಪಿನ ಅರಿವಾಯಿತು. "ನಾನು ಅವತ್ತೆ ಬಡ್ಕಂಡೆ, ಅವರ ಬೆಣ್ಣೆಗೆ ಕರಗಬೇಡಿ, ಅಂತ ನನ್ನ ಮಾತು ಕೇಳಲಿಲ್ಲಾ, ಮೂರಡಿ ಜಾಗಾನು ಹೋಯ್ತು ಮನಸ್ಸಿನ ನೆಮ್ಮದಿಯ ಹಾಳಗಹೋಯ್ತು" ಹಣೆಹಣೆ ಬಡ್ಕಂಡು ಔವುಡಗಚ್ಚಿ ಅವಮಾನ ನುಂಗಿಕೊಂಡು ಬದುಕ ತೊಡಗಿದರು. ಬಿಟ್ಟಷ್ಟು ಅವಮಾನ ಹೆಚ್ಚ ತೊಡಗಿತ್ತು ಗಾಳಿಗೆ ತಿರುಗಲು ಗೋಡೆಯಾಚೆ ಬಿದ್ದರೂ ತುಳು ಭಾಷೆಯಲೊಮ್ಮೆ, ಕೊಂಕಣಿಯಲ್ಲಿ ಕಡೆಗೆ ಕನ್ನಡದಲ್ಲಿ ಮಾತುಗಳನ್ನು ತಡಾಯಿಸಿಯೇ ಬಿಡುತಿದ್ದಳು.

ಸುಬ್ರಮಣ್ಯಕಿಣಿಯ ಉಪಟಳ ಇಷ್ಟಕ್ಕೆ ಕೊನೆಯಾಗಲಿಲ್ಲಾ. ಮಕ್ಕಳಿಲ್ಲದ ಅವರಮನೆಗೆ ಬರತ್ತಿದ್ದ ಅವನ ಸಂಬಂಧಿಕರ ಮತ್ತು ಹೆಂಡತಿ ಕಡೆಯವರ ಗಂಡು ಹುಡುಗರು

ಪಕ್ಕದ ಮನೆ ಹುಡುಗಿಯರನ್ನ ಛೇಡಿಸತೊಡಗಿದರು. ತನ್ನ ಶ್ರೇಷ್ಠತನವನ್ನು ಆಗಾಗೆ ತೋರಿಸಿ ಪಕ್ಕದ ಮನೆಯವರನ್ನು ಕೀಳೆಂದು ನಿರೂಪಿಸುವುದರಲ್ಲೇ ಖುಷಿಪಡುತ್ತಿದ್ದರು. ಈ ಮನೆಯವರಾದರೂ, ನಾಯಿಬಾಲ-ಕುದುರೆ ಜುಟ್ಟು ಎಂದು ಕ್ಯಾರೆ ಎನ್ನದಂಗೆ ಇರಲು ಆರಂಭ ಮಾಡಿದಾಗ ಕಿಣಿ ದಂಪತಿಗಳಿಗೆ ಮತ್ತಷ್ಟು ಅವಮಾನವಾದಂತಾಯ್ತು. ಸಾಲದಕ್ಕೆ ಮೂವರು ಹುಡುಗಿಯರು ಓದುವುದರಲ್ಲಿ ರ್‍ಯಾಂಕ್ ಬೇರೆ ಬಂದು ಒಳ್ಳೊಳ್ಳೆ ಪದವಿ ಪಡೆದು ಕೊಳ್ತಿದಂಗೆ "ಇವತ್ತು, ಕೆಳ ಜನರದ್ದೇಕಾಲ, ರಿಜರವೇರ್ಷನ್ ಮಂದಿ ಏನಾದ್ರೂ ಮಾಡತಾರೆ ನಮ್ಮ ಕುಲದವರಿಗೆ ಎಲ್ಲಿ ಕೆಲ್ಸಸಿಗುತ್ತದೆ? ಜೋರಾಗಿ ಮಾತಾಡಿಕೊಂಡ್ರು.

ತಾವೆ ತುಪ್ಪಮೊಸರು ತಿಂದು ತಾಳ್ಮೆಯಿಂದ ಇರೋರು ಅಂದ್ಕೊಂಡವರಿಗೆ ಭ್ರಮ ನಿರಸನವಾಗಿತ್ತು. ಪಕ್ಕದ ಮನೆಯವರು ಚಕಾರ ಎತ್ತದಾದಾಗ ತಾಳ್ಮೆಗೆಟ್ಟು ಕಿಣಿ, ಜಗಳ ಆಗಲೇ ಬೇಕೆಂದು ನಿರ್ಧರಿಸಿದ ಸಮಯಕ್ಕೆ ಸರಿಯಾಗಿ ಬಾಳೆಗಿಡದ ರೆಕ್ಕೆಯೊಂದು ಸರಹದ್ದು ಗೋಡೆದಾಟಿ ಅವರ ಗೋಡೆಯೊಳಕ್ಕೆ ಇಳಿದಿತ್ತು. ಆಹಾ ಇದೇ ಸರಿಯಾದ ಸಮಯ ಅಂದ್ಕೊಂಡವರೆ. ಬಯ್ದದೆ, ಜಗಳಕ್ಕೆ ಬಾರದವರ ಹತ್ರ ನಮ್ದೇನು ಕೆಲ್ಸ ಅಂದವರೆ ಸೀದಾ ರಾಮಕೃಷ್ಣನಗರ ಪೋಲೀಸ್ ಠಾಣೆಯಲ್ಲಿ ಪಕ್ಕದಮನೆಯವರ ಬಾಳೆ ಗಿಡದ ಗರಿಯ ಮೇಲೆ ಕೇಸುಕೊಟ್ಟರು. ಸಾಲದಕ್ಕೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳದಿದ್ದರೆ ಆವನ ಕುಲದವನೇ ಆದ ಎಂ.ಎಲ್.ಎ. ಹತ್ರ ದೂರು ಕೊಟ್ಟು ಎತ್ತಂಗಡಿ ಮಾಡಿಸುವುದಾಗಿ ಇನ್ಸ್‌ಪೆಕ್ಟರ್ ಇಲ್ಲದಾಗ ಧಮಕಿಕೊಟ್ಟು ಬರಲು. ಠಾಣೆಗೆ ಬಂದ ಇನ್ಸ್‌ಪೆಕ್ಟರ್ ಅಂಡುಸುಟ್ಟಬೆಕ್ಕಿನಂತೆ, ಬೈಕ್ ತೆಗೆದು ಕೊಂಡು ವಿಳಾಸ ಹುಡುಕಿಕೊಂಡು ಬಂದೇ ಬಿಟ್ಟ, ಖುದ್ದು ಸ್ಥಳ ತಪಾಸಣೆಗಾಗಿ. ಕಿಣಿಯವರ ಮನೆ ಮತ್ತು ಆತ ದೂರುಕೊಟ್ಟ ಮನೆ ಪರೀಕ್ಷಿಸಲು ಕಿಣಿ ಹೇಳಿದ ಹಾಗೇನು ಪರಿಸ್ಥಿತಿ ಇರಲಿಲ್ಲಾ. ಆದರೂ ಮೇಲ್ಜಾತಿಯವರು ಸಾಲದಕ್ಕೆ ಆ ಪ್ರದೇಶದಲ್ಲಿ ಅವರದೇ ಜಾತಿಯ ಶಾಸಕ, ಅವನು ಮಹಾ ಅನಾಗರಿಕ. "ನಾಗರೀಕತೆಯ ಕಾಲದಲ್ಲೂ ಜಾತಿ ಎಂಬ ಅನಾಗರಿಕ ಪದ್ಧತಿಯನ್ನು ನಂಬಿಕೊಂಡು ಶತಾಯಗತಾಯ ಪಾಲಿಸಿಕೊಂಡು ಬಂದಿರೋ ಕಿಣಿಯಂತಹ ಜನರಿಂದಲೇ ಈ ದೇಶದ ಸ್ಥಿತಿ ಹಿಂಗಾಗಿರೋದು" ಅಂತ ಆಲೋಚನೆ ಮಾಡುತ್ತಲೆ ಇನ್ಸ್‌ಪೆಕ್ಟರ್ ಪಕ್ಕದ ಮನೆಯವರನು ಕರೆದು ವಿಚಾರಿಸಿದ.

ಕಿಣಿಯ ನರಿಬುದ್ಧಿ ಚಾಣಾಕ್ಷತನದ ಮಾತುಗಳು ಜಾತಿಯ ದರ್ಪ ಗ್ರಹಿಸಿದ ಇನ್ಸ್‌ಪೆಕ್ಟರ್ ಇಡಿ ಅವನ ಭಾಗದ ಸರಹದ್ದು ಗೋಡೆಯೊಳಗೆ ಓಡಾಡಿ ಬಂದು "ರೀ


ಕಿಣಿ ನಿಮಗೆ ನಾಚಿಕೆ, ಮಾನ ಮರ್ಯಾದೆ ಏನಾದ್ರು ಇದೇ ಏನ್ರೀ. ಅಲ್ಲಾ, ಪಾಪದ ಜನ ತಮ್ಮ ಪಾಡಿಗೆ ತಾವು ಬದುಕುತ್ತಿದ್ದಾರೆ ಯಾವತ್ತಾದರೂ. ನಿಮಗೇನಾದರೂ ತೊಂದರೆ ಕೊಟ್ಟಾರೇನ್ರೀ" ಇನ್ಸ್‌ಪೇಕ್ಟರ್ ತಾಳ್ಮೆ ಕಳ್ಕೊಂಡಿದ್ದ "ಉಪಾಯದಿಂದ ಪಕ್ಕದಮನೆಯವನ ಮೂರು ಅಡಿ ಜಾಗವನ್ನು ಗುಳಂ ಮಾಡಿ ಕಾರ್ ಪಾರ್ಕಿಂಗ್ ಮಾಡ್ಕೊಂಡು, ಅವರ ಒಳ್ಳೆತನದ ದುರುಪಯೋಗ ಪಡೆದು, ಈಗ ಕ್ಯಾತೆತೆಗಿತಾ ಇದ್ದಾನಲ್ಲಾ ಬಡ್ಡಿಮಗಾ" ಇನ್ಸ್‌ಪೆಕ್ಟರ್ ಮನಸ್ಸಿನೊಳಗೆ ಸುಳಿದ ವಿಷಯ ಹೊರಗೆ ಪ್ರಸ್ತಾಪ ಮಾಡದೆ. "ಹೂಂ ಏನಂತೀರಿಕಿಣಿ ನಿವು ಊರಲ್ಲಿಲ್ಲದಾಗ ನಿಮ್ಮ ಮರಗಳನ್ನು ಮುಟ್ಟಿ ನೀರ ಹಾಕಿದ್ರಲ್ರೀ. ಛೇ ಎಲ್ಲಾ ಮರಗಳ ಕುಲಕೆಟ್ಟು ಹೋಯ್ತು" ಇನ್ಸ್‌ಪೆಕ್ಟರ್ ಟೀಕಿಸಿದ. "ಅಂತದ್ದೇನು ಇಲ್ಲ ಮರಾಯ್ರೇ ಹಾಗೇ ಸುಮ್ನೇ" ನಾಲಿಗೆ ತೊದಲಿತ್ತು "ಏಯ್ ಕಿಣಿ ಮತ್ತೊಂದ್ಸಲ ಇಂತ ಕೇಸೇನಾದರೂ ಕೊಟ್ರೇ ನಿಮ್ಮನ್ನ ಲಾಕಪ್‌ನಲ್ಲಿ ಹಾಕ್ತಿನಿ, ಅಲ್ಲ ಕಣ್ರೀ ಮರಗಳು ಮನಸಾನಿಚ್ಛೆ ಬೆಳಿತವೆ, ಅದಕ್ಕೆ ನಿಮ್ಮಪಕ್ಕದ ಮನೆಯವರು ಹೇಗೆ ಹೊಣೆಯಾಗುತ್ತಾರೆ? ಆ ಗಿಡ ಮರಗಳನ್ನು ನೋಡಿ ಕಲಿರಿ. ಅವು ಹೇಗೆ ಪರಸ್ಪರ ಒಂದನೊಂದು ಸಹಿಸಿಕೊಳ್ಳುತ್ತವೆ, ತಮ್ಮ ಪಾಡಿಗೆ ತಾವು ಇರ್ತವೆ ಹಾಗೆ, ಅಕ್ಕಪಕ್ಕದ ನೀವು ಇರೋದ ಕಲೀರಿ ನಾಳೆ ಸತ್ತಾಗ ನಿಮ್ಮ ಹೆಣಗಳನ್ನು ಸಹ ಒಂದ ಜಾಗದಲ್ಲಿ ಹೂಳಲ್ಲ." ಆತ ಮಾತಾಡ್ತಲಿದ್ದ. ಕಿಣಿ ಮಾತ್ರ ತನಗಾದ ಸೋಲನ್ನ ಸಹಿಸಿಕೊಳ್ಳೋದಕ್ಕೆ ಹಿಂಸೆ ಪಡುತ್ತಿದ್ದ. ಬಾರದ ನಗೆಯನ್ನ ಒತ್ತಾಯದಿಂದ ತುಟಿಯವರೆಗೆ ತಂದು ಪಕ್ಕದ ಮನೆಯನ್ನು ಕಂಡು ವಿಷದ ನಗೆ ನಕ್ಕು 'ರಾಮ ರಾಮ' ಎನ್ನುತ್ತ ಈಗ ಮುಟ್ಟಿಸಿಕೊಂಡು ಒಳಗೆ ಗೋಮೂತ್ರದಿಂದ ಕೈತೊಳೆಯುವುದೆಂದು ನಿರ್ಧರಿಸಿ ಮನಸ್ಸಿಲ್ಲದೆ ಹಸ್ತಲಾಘವ ಮಾಡಿದವನೆ ಒಳಗೆ ಓಡಿದ. ಕಾಂಪೊಂಡಿನ ಎರಡು ಬದಿಯ ಮರಗಳು ಅವನ ಕಂಡು ಕಿಲಕಿಲನೆ ನಕ್ಕಂತಾಗಿ ಹಿಂದಕ್ಕೆ ತಿರುಗಿದ. ಅಲ್ಲಿ ಇನ್ಸ್‌ಪೆಕ್ಟರ್ ಮತ್ತು ಅವನ ಪಕ್ಕದ ಮನೆ ಶತ್ರು ಕೈಮಿಲಾಯಿಸುತ್ತಿದ್ದರು. ಯಾರೋ ಅವನ ಅಸ್ಥಿತ್ವವನ್ನೇ ನಾಶಗೊಳಿಸಿದಂತೆ ಭಾಸವಾಗಿ ಮುಂದಿನ ಕ್ರಿಯೆಗೆ ನಡೆದ.

❖



# ೧೦. ಹಳೆ ತಲಿಗಳು,

ಗಾರಿ ಕಟ್ಟಿ ಬೇವಿನ ಮರದ ಹತ್ರ ಮಂದಿ ಜಮಾಯಿಸಿದ್ರು, ಅವತ್ತೇನು ಹಬ್ಬ ಅಲ್ಲ ಹರಿದಿನಾನು ಅಲ್ಲ. ಆದ್ರ ಕೆಂಪಮಂದಿನ ಓಡ್ಸಾಕ ನಮ್ಮ ಜನ ಪಟ್ಟಪಾಡನ್ನ ಒಳ್ಳೆ ರಸವತ್ತಾದ ಪುರಾಣದ ಕತಿ ಮಾಡಿ ಹೇಳ್ತಿದ ಆ ಮುದಕ. ಇಡಿ ಊರ ಜನಕ ಆತನ ಮ್ಯಾಲ ಅದೇ ನಂಬಿಕಿ, ಗೌರವ. ಆತನ ಮಾತು ನಡಿತಿತ್ತು ಅವಾಗಿನ್ನು. ಮನ್ನೆ ದೆಕರಿಕಿ ಇಲ್ದೆ ಆ ಮುದುಕ ಸತ್ತಾಗ ಇಡಿ ಊರಿಂದೂರೆ ಮರಗಿತ್ತು. ಇಡಿ ಊರಿಗೆ ರಾವು ಹಿಡದಂಗಿತ್ತು. ಯಾಕಂದ್ರ ಮುದ್ಕ ಊರ ಜನರ ನಾಡಿಯೊಳಗ ಮೀಡಿಯೊ ಅದಮ್ಯ ಚೈತನ್ಯವಾಗಿದ್ದ. ಮುಂಗಾರಿನ ರೋಹಿಣಿ ಮಳಿಗ ಬಿತ್ತಿದ ಹೈಬ್ರಿಡ್ ಜ್ವಾಳ,ಕಾರಹುಣಿಮ್ಮಿಗಾಗಲೇ ಕಳೆಗ ಬರ್ತಿದಂಗೆ ಮಳಿ ಸರಿತಂದ್ರ ಊರ ಮಂದಿನೆಲ್ಲಾ ಕಲೆ ಹಾಕ್ಕೊಂಡು ಊರಮಂದ್ಲ ಹನಮಪ್ಪನ ಗುಡಿಯೊಳಗೆ ಕಟ್ಟ ಭಜನಿ ಹಾಕ್ಸಿ, ಇಡಿ ತಾಂಡದ ದೇವರುಗಳಿಗೆಲ್ಲಾ ಎಣ್ಣಿದೀಪ, ಊದಿನ ಕಡ್ಡಿ ಹಚ್ಚೊ ಕೆಲ್ಸ ನಡೀತಿತ್ತು. ಒಂದೊಮ್ಮೆ ಮಳಿ ಬೀಳ್ತಿತ್ತು, ಒಮ್ಮೊಮ್ಮೆ ಆಗ್ತಿರಲಿಲ್ಲಾ. ಹಳೆ ಕಾಲದ ಪವಾಡಗಳನ್ನ ಕತಿ ಮಾಡಿ ಹೇಳೋದಲ್ಲದೆ ಇದ್ದಕ್ಕಿದಂಗೆ ಪಕ್ಕದ ಕೂಸಿನ ಕಟ್ಟಿ ತಾಂಡಕ್ಕೂ ಆತನ ಧನಿ ಕೇಳೋ ಹಂಗ  ಎತ್ತರ ಧನಿ ಮಾಡಿ ಕೋಲಾಟದ ಪದಗಳನ್ನ, ದೊಡ್ಡಾಟ, ಬಯಾಲಾಟದ ಪ್ರಸಂಗಗಳನ್ನ ಮಧ್ಯದಾಗ ತೂರಿಸಿ ಬಿಡ್ತಿದ್ದ. ತಾಂಡದ ಸುತ್ತಲ ಹಳೆಹುಣಿಸಿ ಮರದ ಮೇಲೆ ಯಾವ ಬ್ರಮ್ಮ ರಕ್ಕಸ ಐತೆ, ಅದರ ಹಿನ್ನೆಲೆ ಏನು? ಅನ್ನೊದನ್ನ ಪಾಡಾಗೆ ತಿಳುವಳಿಕೆ ಬರೊವರಿಗೂ ಹೇಳ್ತಿದ್ದ. ಪಕ್ಕದ ತಾರೆಹಳ್ಳಿ,



ಮಾರಸಗೊಂಡಳ್ಳಿ, ತಿಂಗಳಳ್ಳಿ, ಚಾವೂರುನಲ್ಲಿ ನಡಿಯೊ ವರ್ತಮಾನ ಭೂತಕಾಲದ ಸಂಗತಿಗಳನ್ನ ಒಳ್ಳೆ ಬಾತ್ಮಿದಾರನ ಹಾಗೆ ವಿವರಸುತ್ತಿದ್ದ. ಅದ್ರಲ್ಲೂ, ಹೆಣ್ಣು-ಗಂಡಿನ ನಡುವೆ ನಡೆಯೋ ಹಾದರದ ವಿಷಯವನ್ನ ಹೇಳೋದ್ರಲ್ಲಿ ನಿಸ್ಸಿಮನಾಗಿದ್ದ. ಎಲ್ಲಾ ಮುಗಿದ ಮೇಲೆ ಅದರ ನೀತಿ ಸಾರವನ್ನ ಹೇಳೋದನ್ನ ಮರಿತಿರಲಿಲ್ಲಾ. ಯಾವುದು ಸರಿ ಯಾವುದು ತಪ್ಪು ಅನ್ನೋದನ್ನ ಖಂಡ ತುಂಡಾಗೆ ನಮ್ಮೆದರಿಟ್ಟು "ನಿಮ್ಮ ಆಯ್ಕೆ ಕಣ್ರಪ್ಪ" ಅಂದವನೆ ನಿಲ್ಲದಂಗೆ ಎದ್ದುಹೊಕ್ಕಿದ್ದ.

ಅಂವ ನಮಗ ಮಹಾಭಾರತದ ಸಂಜೆಯನಾಗಿದ್ದ "ಲೇ ಹುಡ್ರಾ ಆವಾಗಿನ್ನೂ ಓಟ ಹಾಕೋದು ಸುರು ಆಗಿತ್ತು" ಅಂತೇಳಿ ಆರಂಭಿಸಿದರೆ ಎರಡ ತಾಸು ನಾವು ಅಲ್ಲೇ ಅಂಟ್ಕೊಬೇಕು. ನಮ್ಮತಾಂಡದಮಂದಿ ಮಾಡ್ತಿದ್ದಕಳ್ಳಭಟ್ಟಿ ಸಾರಾಯಿಗ ಅರ್ಧ ಚಣ್ಣದ ಪೋಲೀಸರು ಕುದರಿ ಮ್ಯಾಲ ಬಂದು ಹಳ್ಳ, ಕೊಳ್ಳ, ಹೊಲ, ಮನಿಯೊಳಗ ಎಲೆಲ್ಲಿ ಭಟ್ಟಿಗಳಿದ್ದವೋ ಅವನೆಲ್ಲಾ ದ್ವಂಸ ಮಾಡಿ ಕೈಗಸಿಕ್ಕವರ ಅಂಡ ಹರಿಯೋ ಮಟ ಹೊಡಿಯೋದನ್ನ ನಾವಂತು ಬಾಯಿ ಬಿಟ್ಕಂಡ ಕೇಳ್ತಿದ್ವಿ.

ಮುಂಗೋಳಿ ಕೂಗಾಕು ಮುಂಚೆ ಎದ್ದು ಸಗಣಿ-ಕಸ ಹೊಡೆದು ದೊಡ್ಡ ಪುಟ್ಟಿಯೊಳಗ ತುಂಬ್ಕೊಂಡ ಹೋಗಿ ತಿಪ್ಪಿಗಿ ಸುರವಿ, ಎತ್ತ ಕಟ್ಟೊತಾವ ಮೂಲಿಯೊಳಗ ಮಾಡಿರೊ ಗ್ವಾತದ ಗುಂಡಿಯಿಂದ ಎತ್ತಗಳ ಗ್ವಾತ ಮಣ್ಣಿನ ಕುಂಬದೊಳಗ ತುಂಬ್ಕೊಂಡ ಹೋಗಿ ಸುರುವಿ, ಜೆಲ್ಲಿ ತಗೊಂಡ ಹೋಗಿ ಬಣವಿಯಿಂದ ಮೇವ ಹಿರ್ಕಂಡ ಬಂದು ಒಂದು ಸುತ್ತು ಮೇವ ಹಾಕಿ, ತಿಂದಿಂದ ನೀರ ಕುಡಸ್ಕೊಂಡ ಗಳೆ ಹೊಲ್ದಾಗ ಇರಬೇಕಾರ ತಾಂಡದಾಗ ಕೋಳಿಕೂಗತ್ತಿತ್ತು. ಅಷ್ಟೊತ್ನಾಗೆ, ಕೆನೆ ಮೊಸರು ರಾತ್ರಿ ಉಳದ ರೊಟ್ಟಿನೋ, ಮುದ್ದಿನೋ ತುದಿಗಾಲ ಮ್ಯಾಲಕುತ್ಕಂಡ ಉಂಡ ಜೆರಗಿನೀರ ಕುಡ್ಕಂಡ ಹೋಗ್ತಿದ್ವಿ ಮದ್ಯಾಹ್ನ ಸೂರ್ಯನ ಬಿಸಲು ನೆತ್ತಿ ಮ್ಯಾಲ ಬಂತಂದ್ರೆ ಸರಿಯಾಗಿ ಒಂದ ಗಂಟೆ ಆಯ್ತು ಅಂದಂಗೆ, ಆವಾಗ ವಾಚಕಟ್ಟೊ ಭೂಪತಿ ಯಾರು? ಹರ್ಕ ಪಂಚೆ ಹೊಲ್ಕೊಳಾಕ ಕಾಸಿರತಿರಲಿಲ್ಲಾ. ಕೂಲಿಗ ಹ್ವಾದ್ರ, ಒಂದುವರಿ ಸೇರು ಮಣ್ಣರಾಗಿ ಕೊಡ್ತಿದ್ರು, ಜನ ಜಾಸ್ತಿ, ಕೂಲಿ ಕಮ್ಮಿ ಸಾವುಕಾರರ ಹೆಂಗಸರಿಗೆ ಬರಬಾರದ ದೌಲತ್ತು ಬಂದಿತ್ತು ರೊಕ್ಕ ಕೇಳಿದ್ರ, ಅಣಿ ದಮ್ಮಡಿ ಕೊಡ್ತಿದ್ರು ಮಂದಿ ತಾವ ಧಾನ-ಧರ್ಮ ಇದ್ದಿದ್ಕ ಮಳಿ ಅನ್ನೋದು ಹೊಯ್ಯಿತ್ತು ಅಂದ್ರ ಹೇಳಬಾರ್ದು. ಎತ್ತಗಳು ದಣಿತಾವಂತ ಗಳೆ ಬಿಟ್ಟ ಕೆರಿಯೊಳಗ ಈಜ ಹೊಡ್ಸಿಕೊಂಡ ಬಂದು ಗ್ವಾಂದ್ಲಿಕಟ್ಟಿ ಮೇವ ಹಾಕಿದ್ರ ಸಂಜಿಮಟಾನು ಮೆಕಳಸ್ಕೊಂತ ಎತ್ತಗಳು ಕುಂತ್ರ, ರೈತಾಪಿ ಮಂದಿ, ರಗಸಪಟ್ಟಿ ನೆನೆಹಾಕಿ, ಬಡದು

ಹಗ್ಗ ಹೊಸಿಯಾಕ ಭೆಂಡಿ ಮಾಡೋದು. ಹಳೇದಿದ್ರ ಅದನ್ನ ಉಕ್ಕಡ, ನಾತು, ಹಗಡ, ಕುಂಟಿಮಿಣಿ, ರಂಟಿಮಿಣಿ, ಹೇರ ಹೇರಾಕ ಹೊರ್ಜಿ ಮಿಣಿ, ನಾಕತ್ತಿನ ರಂಟಿ ಕಟ್ಟೊ ಹೊರ್ಜಿ ಮುಂತಾದ ಅನೇಕ ಹಗ್ಗಗಳನ್ನ ಹೊಸ್ಕೊಂತ ಕುಂತ ಬಿಡ್ತಿದ್ರು. ಮನಿತುಂಬ ಆಕಳು, ಎಮ್ಮಿಹಾಲು ಹೈನು. ನಾಟಿಕೋಳಿಗಳ ರಾಶಿ ಮೆಣಸಿಕಾಯಿಮಡಿ ಮಾಡಿ ಸುತ್ಲು ಚಂಡೂವು, ಹೀರೇಕಾಯಿ, ಸ್ವಾರೆಕಾಯಿಬಳ್ಳಿ, ಸಣ್ಣಗಾಳು, ಧನಿಯಾ ಅಲ್ಲಿಲ್ಲಿ ಒಂದ ನಾಕು ಈರುಳ್ಳಿ ಸಸಿ ಸಾಕುಮನಿಗ. ಆ ಮುದ್ಕ ಮಾತಾಡ್ತಲೇ ಇದ್ದ.

"ಲೇ ಬೇವರ್ಸಿಗಳ ನಾವ ಕುಡದಷ್ಟು ಹಾಲು ಈಗ ನೀವು ನೀರ ಕುಡ್ದಷ್ಟು ಆದೀತು. ತುಪ್ಪದಾಗ ಕೈ ತೊಳಿತಿದ್ವಿ, ಹೊಳಗಿ ಏನಾರು ಮಾಡಿದ್ರ ಅವು ಮುಳಗೋ ಮಟಾನುವೇ ತುಪ್ಪ ಗಡಗಿಯಿಂದ್ಲೆ ಸುರಿತಿದ್ರು, ಯಾರ ನೋಡಿದ್ರು ತೊಲಿತುಂಡನಂಗಿದ್ರು, ಎಲ್ಲಾ ಕಾಲದ ಮಹಿಮೆ" ಮುಗುಲನೋಡಿ ದೀರ್ಘನಿಟ್ಟುಸಿರು ಬಿಡ್ತಿದ್ದ 'ಓ......... ಎಷ್ಟೊಂದು ಫರಕ್'. ತನಗಲ್ಲದ ಬದುಕಿನ ವಿಪರ್ಯಾಸಕ್ಕೆ ಸೋತು ಸುಣ್ಣವಾಗಿದ್ದ ಕಾಲೊಳಗೆ ಶಕ್ತಿಕಳ್ಕೊಂಡು ಕಣ್ಣು ದೃಷ್ಯ ಮಂಜಾಗಿ ಎದಿಗೂಡಿನ ಚರ್ಮ ಸುಕ್ಕುಗಟ್ಟಿದ ಮೇಲೆ ಬದಕಬಾರ್ದು ಆತನ ವಾದ. ಆದ್ರೆ ಸಾವೆಂಬ ದೂರ ದೂರಿನ ಪಯಣಿಗ ಬಂದು ಕರ್ಕೊಂಡು ಹೋಗೋವರಿಗೂ ಕಾಯಬೇಕು. ಯಾವಗಲೋ ಇಂಗಿ ಹೋದ ಕಣ್ಣೀರು ಜುಕ್ಕಜುಲ್ಲಿಯಿಂದ ತಿಣುಕಿ ಒಂದೇ ಹನಿಯನ್ನ ಕಣ್ಣಂಚಿಗೆ ತುಂದುಕೊಂಡ.ಇಂತ ಅನೇಕ ಮಂದಿ ತಾಂಡದೊಳಗ ಬದುಕ್ಯಾರ. ಮದ್ವಿ ಆಗ್ತಿದಂಗೆ ಹೇಣ್ತಿ ಮಾತ ಕೇಳ್ಕಂಡು ಅಪ್ಪ-ಅಮ್ಮನ ಧಿಕ್ಕರಿಸಿ ಕಾಫಿ ಸೀಮಿಗೊ ಇಲ್ಲಾ ಕೂಲಿ ಮಾಡಾಕ ಮನಿ ಬಿಡೊ ಮಕ್ಕಳು ಅವರನ್ನ ಸಾಕೊದಕ್ಕ ಪಟ್ಟ ಪಡಿಪಾಟ್ಲನ್ನ ಒಂದ ದಪನಾರುವೆ ನೆಪ್ಪ ಮಾಡ್ಕೊಳ್ಳದೆ ರೆಕ್ಕೆ ಬಲಿತ ಹಕ್ಕಿ ಗೂಡಬಿಟ್ಟು ಪುರ್ರಂತ ಹಾರ್ಕೊಂಡ ಹೋಗೊ ಹಂಗೆ ಅನಾಥರಾದ ಮುದುಕರುಗಳ ಬದುಕು ಅಸಹನೀಯವಾಗಿತ್ತು. ಒಂದ ಗುಟಕು ಚಹಕುಡಿಯೊಕು ಮಂದಿ ಮುಲಾಜ ಕಾಯಬೇಕು.

ಅವನಿಗಿರೊ ಮೂರನಾಕು ಮಕ್ಕಳು ಅವನ ಹೇಳೊ ವಿಚಾರಗಳಿಗೆ ಬೇಜಾರಾಗಿ ಯಾವಗಲೋ ಹೊರಗಹಾಕಿದ್ರು. ಒಬ್ಬನಂತು, ಅವರಿವರ ಹಿಂದೆ ಸುಮ್ಮನೆ ಸುತ್ತಾಡ್ಕೊಂಡು ಹೆಂಡ ಸರಾಯಿ ಕುಡ್ಕಂಡ ಊರ ಸೇರೋದೆ ಅಪರೂಪ. ದೊಡ್ಡೊನು ಯಾವುದೋ ಗೀಳಿಗೆ ಬಿದ್ದು ಊರೂರು ಸುತ್ತತ್ತಿದ್ದ. ಕೂಲು ಊರುತ್ತಲೇ ಕೂಲಿ ಮಾಡ್ತಿದ್ದ ಅವನಿಗಿಂತ ವಯಸ್ಸು ಕಮ್ಮಿ ಇರೋ ಆತನ ಹೇಣ್ತಿನೂ ಕೂಡ ಕೂಲಿ ಮಾಡಿ ನೆರಕಿ ಮನಿಯೊಳಗ ರೊಟ್ಟಿ ಸುಟ್ಟು ಹಿಂಡಿ ಕಿವುಚಿ ಉಂಡು ಕಾಲ ಕಳಿತ್ತಿದ್ದರು.



ಅಪ್ಪನ ಹಾದಿ ಹಿಡಿಯಾಕ ಮನಸ್ಸಿಲ್ಲಿದ ಮಕ್ಕಳ ಬದುಕು ಅದೋಗತಿಗಿಳಿದಿತ್ತು. ತಾಂಡದಾಗ ಈಗ ಸಂದಿಗೊಂದಿಗೊಂದೊಂದು ಚಹದಂಗಡಿಗಳು. ಮಂದಿ ಕೆಲ್ಸ ಮರ್ತು ಅಂಗಡಿ ಕಟ್ಟಿ ಹಿಡ್ಕೊಂಡಾರ. ಹೇಣ್ತಿ ಹೆಂಗಾರ ದುಡ್ಕಂಡ ಬರ್ತಾಳ, ಅವಳಿಗ ಪುಸಲಾಯ್ಸಿನೋ, ಇಲ್ಲಾ ಹೊಡೆದು ಹೆದರಿಸಿ ಕಾಸು ಕಿತ್ಕೊಳೋದು, ಇಸ್ಪೀಟು, ಅಡ್ಡೆಗಳು ಹನ್ಮಪ್ಪನ ಗುಡಿ, ಸೇವಾ ಭಾಯನ ಮಟ್ಪೋ, ಸಾಲಿಕಟ್ಟೆ ಇಲ್ಲಿಕ್ರ ಯಾವುದಾರು ರಂಡ ಮುಂಡೆ ಮನಿಯೊಳಗೆ ಇಪ್ಪತ್ನಾಕ ಗಂಟಿನೂ ನಡಿತಾನೆ ಇರ್ತಾವ ಅಲ್ಲಿ ಸೇರ್ಕೊಂಡು ಕಾಸಿದ್ರೆ ಆಡೋದು ಇಲ್ಲಿಕ್ರ ಮುಂಜಾನಿಂದನೂ ಸಂಜಿ ಮಟ ಆಟ ನೋಡ್ತಾ ಕುಂದ್ರೋದೆ ಕೆಲ್ಸ ಇರೋ ಒಂದೆರಡೆಕ್ಕರೆ ಹೊಲಗಳು ಬೀಳ ಬಿದ್ದಿದ್ವು, ಎಲ್ಲಿ ಸಿಗದಿದ್ದರೂ ದಲ್ಲಾಳಿ ಅಂಗಡಿಯೊಳಗೆ, ಅದ ಮಾಡ್ತಿನಿ ಇದ ಮಾಡ್ತಿನಿ ಅಂತೇಳಿ ಕೈಸಾಲ ಸಿಕ್ಕೆ ಸಿಗ್ತಿತ್ತು. ಅದನ್ನ ತಂದು ಅತ್ಲಿಂದ್ಲೆ ಕುರಿ ಕಳ್ಳು ಪಚ್ಚಿ ತಲೆಮಾಂಸದ ಜೊತಿಗ – ಆರೇಳ ಬಾಟಲಹೆಂಡ, ಸರಾಯಿ ಕುಡದ್ರ ಹೊಲ್ದಾಗ ಪೀಕ ಬಂದಂಗೆ. ಕೊಟ್ಟ ಸಾವಕಾರ "ಲೇ ನಿನ್ನವ್ವ ಬೇವರ್ಸಿ ಸೂಳಿಮಗನ, ತಗೊಂಡಾಗ ಎಂಥ ಚೆಂದನ ಗಿಲಿಟ್ ಮಾತಾಡ್ದೆ. ಈಗ, ನಿನ್ನ ಹೇಣ್ತಿನ ಯಾವನಿಗಾರು ಅಡ ಇಟ್ಟು ದುಡ್ಡ ಕಟ್ಟು" ಅಂತೇಳಿ ಮನಿಮುಂದ ಕುಂತ್ಕೊಂಡಾಗ ಅವೇ ಹಳೇ ಸುಳ್ಳಿನ ವರಸೆ ತಗದು, "ನಮ್ಮ ತಾಯಿ ಅಣಿಗು ಮುಂದಿನ ಬೆಳಿಗ ಕಟ್ತಿನಿ ಧಣಿ ಹ್ವಾದ ಸರ್ತಿ, ಹೊಲ್ದಾಗ ಬೆಳಿನ ಆಗ್ಲಿಲ್ಲಾಂತೀನಿ" ಅವನು ಹೇಳಿದ ಸುಳ್ಳು ಸಿದಾ ಸಾವುಕಾರನ ಎದಿನಾಟಿ ಆಚೆ ಬಂದಿದ್ದೆ ಓತಿಕ್ಯಾತಕ್ಕೆ ಬೇಲಿ ಸಾಕ್ಷಿ ಅನ್ನೊ ಹಂಗೆ ಮತ್ತೊಬ್ಬ ತಯಾರಾಗೆ ಕುಂತಿರ್ತಾನೆ. "ಹೌದು ಧಣಿ ಪಾಪ ಮಳಿ ಹೆಚ್ಚಾಗಿ ಅವನವ್ವನ ಟಿಸ್ ಮಳಲು ಬೆಳಲೇ ಇಲ್ಲಾ, ಏಯ್ ಅವನೇನು ಊರ ಬಿಟ್ಟು ಓಡಿಹೊಗ್ತಾನ. ಇಲ್ಲೇ ಇರ್ತಾನೆ ಬಿಡಿ".ಸಾವುಕಾರ ಬಾಯ ಮುಚ್ಕೊಂಡು ಬಂದದಾರಿಗ ಸುಂಕವಿಲ್ಲ ದಂಗೆ ವಾಪಾಸಾಗ್ತಿದ್ದ.

ಒಂದೊಮ್ಮ ಇಡಿ ಊರಿಗೆ ಶ್ರೀಮಂತ ಅಲ್ದಿದ್ರುವೆ ಸ್ಥಿತಿವಂತನಾಗಿ ಬದುಕಿದ್ದ ಮುದ್ಕ "ಬೇ ತಂಗಿ ಆಟ ಎಲಿಕೊಡಬೇ ಯಾಕೋ ಹಾಕ್ಕೊಬೇಕು ಅಂತ ಅನ್ನಾಕ ಹತ್ಯತಿ." ಕಿವಿ ಮಟ ಹಲ್ಲು ಗಿಂಜಿದ್ದ, ಅವಳೇನು ಅಂದ್ಕೊಂಡ್ಲೋ ಅಂತೇಳಿ ಒಳಗೆ ನೊಂದ್ಕೊಂಡಿದ್ದ "ಕೂಳ ಹೆಚ್ಚಾದ್ರ, ಕೂಗಾಟ ಹೆಚ್ಚು", ದಿನಂಪ್ರತಿ ತಾಂಡಕ ಒಂದಲ್ಲ ಒಂದಕಾರಣಕ್ಕ ಪೋಲೀಸರು ಬರಾಕ ಹತ್ರು. "ಸೂಳಿಮಕ್ಕಳು ಕುಡ್ಕಂಡ ಬಿದ್ಕೊಳ್ಳೋದು ಬಿಟ್ಟು ಒಣ ಉಸಾಬರಿ ಮಾಡ್ತಾರ. ಪೋಲಿಸರು ಅಂಡ ಹರಿಯೋ ಮಟ ಹೊಡ್ದು, ದುಡ್ಡು ಕಸ್ಕೊಂಡೆ ಬಿಡೋದು" ಮುದಕ ಹೇಳೋದ ಹೇಳಿ, ಸುತ್ಲು ನೋಡ್ದ ಯಾರು



ಇಲ್ಲಿದಕ್ಕ ಒಬ್ಬನೆ ನಕ್ಕ. "ಕಾಲಕೆಟ್ಟ ಹೋತಪ್ಪ, ಕೆಟ್ಟ ಹೋತು. ಅವನ ಮಗಳು ಇವನ ಕೂಡ ಓಡೋದ್ಲು ಅಂತೇಳಿ ಕೆಲವರಂತಾರ, ಇವನ ಮಗಳು ಮತ್ತೊಬ್ಬನ ಕೂಡ. ಸ್ಥಿತಿ ಯಾವಾಗ ಸುಧಾರಿಸುತ್ತೊ ಯಾವನ ಬಲ್ಲ. ನಮ್ಮ ಕಾಲದಾಗು ನಡಿತಿದ್ವು ಇಲ್ಲಂತೇನಿಲ್ಲ ಆದ್ರ ಒಳಗೊಳಗೆ ಮುಚ್ಕೊಳ್ತಿದ್ವು. ಯಾರ ಬಲಿಷ್ಠ ಇರ್ತಾನೋ ಅವನ ಮಾತ್ರ ಇಂತಹದಕ್ಕ ಕೈ ಹಾಕ್ತಿದ್ದ." ಒಳಗೊಳಗೆ ನಗ್ತಿದ್ದ. ಯಾಕಂದ್ರ ಊರ ಮಂದಿ ಅವನ ಸಂಬಂಧದ ಬಗ್ಗೆನು ಗುಸುಗುಸು ಮಾತಾಡ್ತಿದ್ರು ಮಹಾಘಾಟಿ ಮುದಿಯ, ಇವ್ನೇನ ಕಮ್ಮಿ ಅಲ್ಲ. ಅದ್ಯಾವದೋ ಊರಿಂದ ಬಂದ ಗಂಡ ಹೆಂಡ್ರನ್ನ ಬುಟ್ಟಿಗ ಹಾಕ್ಕೊಂಡು, ಅವನ ಹೊಲಮನಿ ಕೆಲ್ಸ ಮಾಡ್ಕೊಂಡಿದ್ದಲ್ಲದೆ, ಆ ಹೆಂಗಸನ್ನು ಲಪಟಾಯಿಸಿಕೊಂಡಿದ್ನಂತೆ. ಈಗ ಕಾಣಕ ಮಾತ್ರ ಭಾಳ ಸಾಚಾನಂಗೆ ಕಾಣ್ತನೆ ಆದ್ರ, ಊರ ಉಳದ ಜನಕ್ಕಿಂತ, ಅವನ ವ್ಯಕ್ತಿತ್ವ ಭಿನ್ನವಾಗಿತ್ತು. ಅವನ ವೈಯುಕ್ತಿಕತೆ ಏನೇ ಇದ್ರು ಬಹಳ ತಿಳ್ಕಂಡಿದ್ದ. ಅವನ ಜೊತಿಗ ದನ ಕಾದೋರು, ಎತ್ತ ಮೇಯಿಸಿದೊರು ಬಾಡಗಿ ಬಂಡಿಕಟ್ಟಿ ಶೇಂಗಾ ಹೇರಿದಾಗ ಕೆಂಪಮಂದಿಕುದ್ರಿ ಸವಾರಿ ಮಾಡಿದ್ದನ ಕಂಡೋರ ಸ್ಥಿತಿ ಹಿಂಗ ಐತಿ. ಇಡಿ ತಾಂಡಕ್ಕೆ ಮಾದರಿಯಾಗಿದ್ದ ಡಮ್ಮನಾಯ್ಕ ಅವನ ಒಂಬಂತ್ತ ಮಂದಿ ಅಂದ್ರ ಮುದುಕನಿಗೆ ಬಹಳ ಗೌರವ. ಎಲ್ಲರು ಮದ್ವಿಯಾಗಿ ವಾರ ಒಪ್ಪತಿಗೆ ಮನಿ ಎರಡ ಮಾಡಿದ್ರ ಡಮ್ಮನಾಯ್ಕನ ಮಕ್ಕಳು ದುಡದು ವರ್ಷಕ್ಕ ಒಂದ್ರಂಗ ನೂರಾರ ಎಕ್ಕರಿ ಜಮೀನು ಖರೀಧಿಸಿದ್ರು. ಅವರಾಯ್ತು ಅವರ ದುಡಮಿ ಆಯ್ತು. ಊರ ಉಸಾಬರಿಗೆ ಹೊಗ್ತಿರಲಿಲ್ಲಾ. ಹೆಂಗಾನ ಮಾಡಿ ಮನಿ ಮುರಿಬೇಕಂತ ನಾಯಿ ಬುದ್ಧಿವೂ ನರಿಬುದ್ಧಿವೂ ಸಾಮ ಬೇಧ ದಂಡಗಳನ್ನ ಉಪಯೋಗಿಸಿ ನೋಡಿ ಸುಸ್ತಾದ್ರು ಅವರ ಮಾತ್ರ ಜುಪ್ ಅನ್ಲಿಲ್ಲಾ. ಅದ್ಯಾಕೋ ಶಿಸ್ತಿಂದ ನಡಿತಿದ್ದ ಡಮ್ಮನ ಸಂಸಾರದ ಮ್ಯಾಲ ಶನಿವಕ್ರಿಸಿ, ಕೊನೆ ಮಗನ ಸೊಸಿ ಬಂದಾಕಿನ ಆಸ್ತಿನೆಲ್ಲಾ ಪಾಲು ಮಾಡ್ಸಿಯೇ ಬಿಟ್ಲು. ಡಮ್ಮನಾಯ್ಕನಿಗಿಂತ ಹೆಚ್ಚು ನೊಂದಕೊಂಡೋನು ಆ ಮುದ್ಕ.

ವಾರದವರಿಗೂ, ಯಾರಕೂಡ ಮಾತಾಡಲಿಲ್ಲಾ. ಮನದಾಗಿನ ಸಂಕಟ ತಡಿಯಾಕ ಆಗದೆ, ದಾರಿ ಮ್ಯಾಲಸಿಕ್ಕ ಅವನ ಲಂಗೋಟಿ ಗೆಳೆಯನ ಮುಂದ, "ಕಾಲ ಭಾಳ ಕ್ರೂರಿ ಕಣಪ್ಪ, ಇದ್ದೊಂದ ಒಳ್ಳೆ ಮನೀನು ಬಿಡ್ಲಿಲ್ಲಾ, ಹರದು ಹಂಚಿಬಿಟ್ಟ ಯಾವ ಅಡ್ನಾಡಿನನ ಮಗನ ವಕ್ರದೃಷ್ಟಿ ಬಿತ್ತೋ ಆ ಮನಿಮ್ಯಾಲ" ಅವನು ಹೇಳ್ತಾನೆ ಇದ್ದ ಕಿವಿ ಕೇಳದ ಇನ್ನೊಬ್ಬ ಮುದ್ಕ ಹಂಗೆ ಮುಂದ ಹೊಂಟಿದ್ದ. ಅವನೇನು ಪ್ರತಿಕ್ರಿಯೆ ವ್ಯಕ್ತಪಡಿಸದನ್ನ ಕಂಡು, "ಥು, ಇವ್ನಾಪ್ನ, ಹೋಗಿ ಹೋಗಿ ಕೆಪ್ಪನ ತಾವ ಮಾತಾಡ್ತಿದ್ದಿನಿ,"

ಹಣಿ ಹಣಿ ಬಡ್ಕಂಡು ಮುಂದ ಹೋದ. "ನಾನು ಹಿಂಗಾಗ ಬಾರದಿತ್ತ. ಈ ಜಗತ್ತಿನ ಕೆಟ್ಟ ವ್ಯಾಪಾರನ ಕೇಳದ ಸ್ಥಿತಿನಾದ್ರು ಬರ್ತಿರಲಿಲ್ಲಾ. ಕೇಳಬೇಕಂತೇಳಿ ಮಾತಾಡೊ ಮಂದಿ ಎದಿಗೂಡು ಮುರಿಯೋ ಹಂಗ ಒದಿಬೇಕು ಅನ್ಸುತ್ತೆ ಆದ್ರ ಹೊಟ್ಯಾನ ಸಿಟ್ಟು ರಟ್ಟಿಯೊಳಗಿಲ್ಲ. ಇದು ನನ್ನ ಟೈಂ ಅಲ್ಲಾ. ನಾನೇನಿದ್ದರು ಗೆದ್ಲ ಹಿಡದಿರೋ ಒಣಮರ. ಸುತ್ಲು ಚಿಗುರಿಕೊಂಡು ಜಂಬಪಡ್ತಿರೋ ಹರೆಯದ ಮರಗಳನ್ನ ನೋಡ್ತಾ, ನನ್ನ ದಿನಗಳನ್ನ ನೆನಪು ಮಾಡಿಕೊಳ್ಳಬೇಕು ಅಟೇಯ". ಅವನ ಆಲೋಚನಾ ಲಹರಿ ಸಾಗೇ ಇತ್ತು. ಯಾರೊ ಕೂಗಿದಂಗಾಗಿ ವಾಸ್ತವಕ ಬಂದ ಮುದ್ಕ. ಅವನು ಮತ್ತು ಅವನಂತ ಕೈಲಾಗದೋರು ಈಗ ವರ್ತಮಾನದಲ್ಲಿ ಚಾಲ್ತಿ ಇಲ್ಲದ ನಾಣ್ಯಗಳು. ಪಕ್ಕದೂರಿನ ಬಾಂಬ್ರ ಚಿಟ್ಟಣ್ಣ ಮಕ್ಕಳನ್ನ ಶ್ಯಾನೆ ಓದಿಸಿದ, ಅಲ್ಲೆಲೋ ಅಮೇರಿಕದಾಗ ಅದಾವಂತೆ ಊರ ಮಾರಿನೋಡೆ ಇಲ್ಲ. ನೀವ್ಯಾಕೆ ಹಳ್ಳಿಯಲ್ಲಿದ್ದೀರಿ, ಪ್ಯಾಟೆಗ ಬಂದು ವೃದ್ಧಾಶ್ರಮ ಸೇರಕೂಂಡ ನೆಮ್ಮದಿಯಿಂದ ಇರ್ರಿ ಅದೇಟು ಖರ್ಚು ಬಂದೀತು ನಾನ ಕೊಡ್ತೀನಿ. ಅಂತ ಪೋನ್ ಮಾಡಿದ್ನಂತೆ "ಅಲ್ಲಾ ಮುಂಡೇವಕ ಏನ ಗೊತ್ತು, ನಮ್ಮ ಬೇರಗಳಿರೊದು ಇಲ್ಲೀಂತ" ಭಟ್ರು ಮರಗಿ ಮುದಕನ ಮುಂದೆ ಹೇಳಿದ್ರಂತೆ.

ಅದ್ಯಾವದೋ ದೂರದ ಊರ್ನಾಗ ಓದ್ತಿರೊ ಕೊಂಡೇಟನಾಯ್ಕ ಅನ್ನೊ ಹುಡಗ ಊರಿಗ ಬಂದ್ರ ಊರಿನ ಎಲ್ಲಾ ಕತಿಯನ್ನ ಚಾಚು ತಪ್ಪದೆ ಒಪ್ಪಸ್ತಿದ್ನಂತೆ ಮುದಕ ತಾಂಡೆ ದುರ್ಗವ್ವನ ಗಾರಿಕಟ್ಟಿ ಮ್ಯಾಲ ಕುತ್ಕಂಡು ಏನೋ ಹೇಳ್ತಿರ ಬೇಕಾರ, ಯಾರೊ ಪ್ಯಾಟಿಯಿಂದ ತಾಂಡಕ ಬಂದ್ರು, "ಅದ್ಯಾರಲೇ ಕೊಂಡೇಟಿ" ಮುದುಕ ಕೇಳ್ದ "ಯಾರೋ ಪ್ಯಾಟಿಮಂದಿ" ಕೊಂಡೇಟಿ ಅಷ್ಟೆ ಉತ್ತರ ಹೇಳಿ ಸಮ್ಮನಾದ. "ಅದ್ಯಾದೊ ಹುಡಗ ಹೊಂಟಂಗೈತೆ," ಮಂಜಗಣ್ಣಲೇ ದಿಟ್ಟಿಸಿ ಹೇಳಿದ. ಅಲ್ಲೆ ಹಗ್ಗ ಹೊಸಿತಿದ್ದ ನಾಚು, "ಹುಡ್ಗ ಅಲ್ಲ ಬಿಡಮುದ್ಕ, ಹುಡುಗಿ ಹಂಗೆ ಖರಾಪು ತಕ್ಕೊಂಡೈತೆ." ನಕ್ಕ "ಶಿವ ಶಿವ ತಂದೆ ಕಾಪಾಡೋ. ಅಲ್ರೆಲೆ, ದೇವರು ಹೆಣ್ಣಮಕ್ಕಳಿಗ ಕೂದ್ಲ ಕೊಟ್ಟಾನ. ಎಲ್ಡಜಡಿ ಬಾಚ್ಕೊಂಡು, ಮಲ್ಲಿಗಿ ಹೂವ ಮುಡ್ಕಂಡ್ರ ಲಕ್ಷಣವಾಗಿ ಕಂಡಾವು, ಇದೇನಿದು ಅಸಹ್ಯ ಖರಾಪು" ಇನ್ನು ಏನೋ ಕತಿ ಆರಂಭಿಸೊ ಮದ್ಲು ಕೊಂಡ "ಏಯ್, ಅದು ನಿನ್ನ ಕಾಲ, ಈಗ ಅದು ಬದಲಾಗೈತಿ ಈಗಿನ ಹುಡ್ರು ಕಿವಿಗ ಓಲೆ, ಹಿಂದ ಜಡೆ ಬಿಟ್ಕಂಡು ನಾವೇನು ಹೆಂಗಸರಿಗಿಂತ ಕಮ್ಮಿನ ಅಂತ ಸುರುಹಚ್ಕೊಂಡಾರ ನೀ ಎಲ್ಲಿ ಹಚ್ಚಿ ಗಪ್ಪಾಗು" ಅಂದಿದ್ಕ "ಛೇ, ಹಿಂದ ಹಿಂಗಿರಾಕಿಲ್ಲ. ನಮ್ಮ ಹೆಂಗಸರು ಮನಿ ಬಿಟ್ಟಂದ್ರ ತಿಲಿಮ್ಯಾಲ ಸೆರಗಿರ್ತಿತ್ತು ನೆಲ್ದಾಗ ಮುಕ ಇಟ್ಟು ಹೊಂಟ್ರ ನೋಡಿದೋರಿಗ ಗೌರವ

ಬರ್ತಿತ್ತು. ಸೀರಿನ ಹೊಂಟೋತು, ಅದೇನೊ ಪಟ್ಣದವು ಹಾಕೊ ನೇಟ್ಟಿ ಅಂತಪ್ಪ ಅವನ
ಹಾಕ್ತನೆ ಸುಡಗಾಡು ಯಾವಾಗ ನೋಡಿದ್ರು ಕೈಯಾಗ ರೇಡಿವೆ ಅಂತದ ಇಡ್ಕಂಡ
ಅದೇನ ಮಾಡ್ತವ್ರೋ" ತನ್ನ ಕಾಲದ ಮಾತನ್ನ ನೆನಪು ಮಾಡ್ಕಂಡ. ಮುದಕನ ತಿಳವಳಿಕ
ಹೆಚ್ಚಿಸಬೇಕಂತ ಕೊಂಡನಾಯ್ಕ "ಯಜ್ಜ, ನೇಟ್ಟಿ ಅಲ್ಲಾ ಅದು ನೈಟಿ ರೆಡಿಯೋ
ಅಂದ್ಯಲ್ಲ ಅಲ್ಲ ಮೊಬೈಲ ಪೋನು. ಹಿಂದ್ಕ ಶ್ರೀಮಂತರ ಆಟ ಪೋನು ಇಟ್ಕಂಡಿದ್ರು
ಈಗ, ದನ ಕಾಯೋನು ಕುರಿಕಾಯೋನು ರಂಟಿ ಹೊಡಿತಾನೆ ಹೊಲದಿಂದ
ಮಾತಾಡ್ತಾನೆ. ಆಟು ಮಜ್ಜಗಿ ತಂಬಾ ಊಟ ತಂಬಾ, ಅಂಥ" ಹೊಸ ಯುಗದ
ಆವಿಷ್ಕಾರಗಳ ಅಚ್ಚರಿಯನ್ನ ಮುದುಕನೆದುರಿಗೆ ಅರುಹಿದ. "ಥತ್ ತೇರಿಕೆ, ಹಿಂಗೆನಲ
ಕೊಂಡ. ಹೂಂ, "ಎದಿಯಾಳದಿಂದ ಉಸಿರು ಹೊರ ಹಾಕಕ ನೋಡ್ದ ಉಸಿರ
ಇಲ್ಲದ ನಿಸ್ತೇಜ ದೇಹದೊಳಗಿಂದ ಉಸರೆ ಬರಲಿಲ್ಲಾ. "ಇನ್ನೇನ ನೋಡೋದೈತು.
ಶಿವನೆ ಕರ್‍ಕಳಪ್ಪ ನನ್ನ ಸಾಕಾತು ಈ ಕಲಿಗಾಲ. ನಿನ್ನ ಪಾದ ಪೂಜೆ ಮಾಡ್ಕಂಡ
ಬಿದ್ದಿರ್ತಿನಿ ಅತ್ಲಗೆ" ಅನ್ಕೊಂಕ ಎದ್ದ ಹೊಂಟ.

ಅದೇ ಕೊನೆ ಮುದಕ ಮಕ್ಕೊಂಡೋನು ಮ್ಯಾಕ ಎಳಲೇ ಇಲ್ಲ ಊರಾಗ
ಜ್ಞಾನಿಯಂತಿದ್ದ ಮುದಿಯ ಹೊದ್ನಂತ ಕೊಂಡಾ ಭಾಳ ಸಂಕಟ ಪಟ್ಟಿದ್ದ.

❖

# ಚೋಕ್ಕನ ರೊಟ್ಟಿ ಕನಸು.

ಮುಂಜಾನಿ ಹೊತ್ತಾರೇ ಉಂಡಿದ್ದ ರಾಗಿ ಅಂಬಲಿ, ಐದಾರ ಸುತ್ತು ಊರ ಮುಂಚಿನ ದೀಪಮಲಿ ಕಂಬ, ಮ್ಯಾಗಿನ ಓಣಿ ಕಲ್ಡಿ ಆಡಿಸಾಕಂತ ಬಂದೋನ ಹಿಂದ ಸುತ್ತೋದ್ರಾಗ ಕರಗಿ ಹೋಗಿತ್ತು. ಚೊಕ್ಕ ಎಷ್ಟು ಹಸದಕೊಂಡಿದ್ನಂದ್ರ, ತಿನೋದು ಏನಾರು ಸಿಕ್ಕರು ಗಬಗಬಾಂತ ತಿಂದು ಬಿಡೋ ಹಂಗ ಅನಿಸಿತ್ತು. ಕಳ್ಳೆಲ್ಲಾ ಕಿತ್ಕೊಂಡ ಬಂದಂಗಾಗಿ, ಕೌದಿತಗೊಂದು ಹೊಟಿತೆಳಗ ಹಾಕ್ಕೊಂದು ಮಕ್ಕೊಂದ. ಅವನ ತಮ್ಮ ಬೋರ ಅವನ ನಳ್ಳಾಟ ನೋಡ್ತಾ ಕುಂತ್ಕೊಂಡಿದ್ದ. "ಯವ್ವ ಸತ್ನೆ ಯಪ್ಪೊ ಹಾಂ ಹೂಂ," ಅಂತ ಜೋರಾಗೆ ನಳ್ಳಾಕ ಹತ್ತಿದ. ಬೋರ ಓಡಿ ಹೊದವನೆ ಗುಡಸಲ ಬಾಗಲ ತಗದು ದೊಡ್ಡ ಸ್ವಾರಿಯಿಂದ ತಣ್ಣನೆ ನೀರು ತಂದು "ಯಣ್ಣ ಇಕ್ಕ ತಣ್ಣೀರ ಕುಡಿ ಹೊಟ್ಟಿ ತಣ್ಣಗ ಅಕ್ಕೈತಿ" ಅಂದ. ಚರಗಿ ತಗೊಂಡು ಗಟಗಟಾಂತ ಖಾಲಿಮಾಡಿ ಎದ್ದ ಕುಂತ.

ಓಡಬೇಕು ಅನಿಸಿ ಓಡತೊಡಗಿದ, ಅಲ್ಲಿ ಇಲ್ಲಿ ಅಂತ ಊರೆಲ್ಲಾ ತಿರಗಾಡಿ ಗುಡಸಲ ತಾವ ಬಂದ. ಅವನ ಚಿಗವ್ವನ ಮಗಳು ಚಿಂಚಲಿ ಅಂಗ್ಯೆಯಾಗ ರೊಟ್ಟಿ ಹಿಡ್ಕೊಂಡು ಒಂದೊಂದೆ ತುತ್ತು ಮುರದು ತಿನ್ನೋದನ್ನ ಎಡಗಡೆಯಿಂದ ಬಾಲ ಅಲಗಾಡಿಸ್ಕೊಂತ ನಾಯಿ ನೋಡ್ತಾ ನಿಂತಿತ್ತು ಅದೇ ಟೈಮಿಗ ಬಂದ ಚೊಕ್ಕ ಗಕ್ಕನೇ ನಿಂತು ಕೈ ಬಾಯಿಯ ಕ್ರಿಯೆಯನ್ನು ತದೇಕ ಚಿತ್ತದಿಂದ ನೋಡ್ತಾ ನಿಂತ್ಕೊಂಡ, ಕೊಲಾಣಿ

ಸಪ್ಪಿನ ಪಲ್ಯೆ ಬಿಸಿಬಿಸಿ ರೊಟ್ಟಿ ಉಂಡು ಎಷ್ಟೋ ದಿನಗಳಾಗಿದ್ವು, ಎಷ್ಟುಬ್ಯಾಡ ಅಂತಂದ್ರು ಮನಸು ತಡಿಲೇ ಇಲ್ಲಾ. "ಎ ಚಿಂಚಲಿ ನಿನಿಗ ಅಕ್ಕ ಅಂತೀನಿ, ಒಂದ ಗುಕ್ಕು ರೊಟ್ಟಿಕೊಡ್ತೀಯಾ?" ಅಂತ ಕೇಳಿದ. "ಹೂಂ ಬಾರೋ ದೊಡಪ್ಪ, ನಮ್ಮವ್ವ ಯಾರಿಗೂ ಕೊಡಬ್ಯಾಡ ಅಂದಾಳ" ಅಂದ್ಲು. "ನಾಳೆ ಆಡಾಕ ಬರ್ತಿಯಲ್ಲಾ ಅವಾಗ ನಾನು ಕುದರಿ ಆಗಿ ನಿನ್ನ ಹೊತ್ಕೊಂತೀನಿ, ನಿನಗ ಯಾರು ಹೊಡಿದಂಗ ಮಾಡ್ತೀನಿ, ಒಂದೇ ಗುಕ್ಕು ಕೊಡು, ನಾಳೆ ನಮ್ಮವ್ವ ರೊಟ್ಟಿ ಮಾಡಿದ್ರ ಕೊಟ್ಟಿ ಬಿಡ್ತೀನಿ "ಅಂತ ಹಳ ಹಳಿಸಿದ" ಎ ಹೊಗ ನಿಂದೇನ ಹಚ್ಚಿ" ಅಂದಾಕೆ ಅವರ ಗುಡ್ಲ ಕಡೀಗ ಹ್ವಾದ್ಲು, "ಇವನವ್ವನ ಏನ ಸೊಕ್ಕಿನ್ಯಾಗದಾಳ, ನಮ್ಮವ್ವ ನಮ್ಮಪ್ಪ ಅವರಿಗ ಹೊಡದಿದಕ್ಕ ಕೊಡ್ಲಿಲ್ಲಾ, ನಾನು ಬರ್ತೀನಿ ಕೆಲ್ಸಕ ಅಂದೆ ನಿನ್ನ ಮೈಯಾಗ ಪಾಡಿಲ್ಲ, ಮನಿಯಾಗಿದ್ದು ಹುಷಾರಾಗು ಆ ಮ್ಯಾಲ ಬರಾಕಿ ಅಂತೇಳಿ ತಪ್ಪಿಸಿ ಹೋಗಿದ್ಲು ಅವನ ಅವ್ವ, ಕೆಂಜೀರಿ. ಹ್ವಾದ ವರ್ಷ ಚಿಂದಬರ ಭಟ್ರ ಹೊಲ್ದಾಗ ಕಳೆ ಕೀಳೊ ಮುಂದ ಸಾಲ ಹಿಡಿಯೋ ಸಂಬಂಧ ಹುಟ್ಟಿದ ಜಗಳ ಮನಿಮಟ ಬಂದು ಚಿಗಪ್ಪ ಧಾನು ಹೆಂಡ ಕುಡ್ಕೊಂಡು, "ಏ ತಮ್ಮಣ್ಣ ಬಾರೋ ಹೊರಗ, ಒಂದ ಕೈ ನೋಡೆ ಬಿಡ್ತೀನಿ" ಅಂತ ಜೋಲಿ ಸಿಗದೆ  ಗುಡಸಲಿನ ಮೂಲಿಯೊಳಗ ಬಿದ್ದವನೆ, "ಎ ನಂಗ ದೂಕಿ ಬೀಳಸ್ತಿ ಏನಲೇ ಅಂತೇಳಿ ಕೆಟ್ಟಕೊಳಕ, ಮಾತಿನೊಳಗ ಬೊಯ್ಯಕ ಸುರುಮಾಡಿದ. ಅವಬ್ಬರನ್ನೂ ಹಡದಾಕಿ ಒಬ್ಬಾಕಿನೆ ಅನ್ನೊದು ಮರತಹೋಗಿತ್ತು. ಅವನ ಬಾಯಿ ಕೇಳಿಸಿಕೊಂಡ ಧಾನು ಚಿಗಪ್ಪನ ಇಬ್ಬರೂ ಹೆಂಡಂದಿರೂ ಏಳೆಂಟ ಹೆಣ್ಣ ಹುಡುಗಿಯರು ಕೈಯಿಗ ಸಿಕ್ಕಿದನ್ನ ತಗೊಂಡು ಅವರ ದೊಡ್ಡಪ್ಪ ತಮ್ಮಣ್ಣ ಗುಡಸಲ ಮುಂದ ಜಮಾಯಿಸಿದ್ರು, ತೆಪ್ಪುಸರಿ ನೋಡದೆ ಕತ್ಲಾಗ ಯಾರ ಮಕಕ ಯಾರ ಗುದ್ದಿದ್ರೋ ಅಂತು ಮುಂಜಾನಿ ಪೋಲೀಸ್‌ರು ಹಾಜರಾಗಿ ಇಬ್ಬರ ಕಡೀಗೂ ಎಬ್ಕೊಂಡು ಹೋಗಿದ್ರು, ಅವತ್ತಿಂದ ಅಕ್ಕಪಕ್ಕದ ಗುಡಸಲಿನ ಮುಂದಿಗ ಆಗ್ತಿರಲಿಲ್ಲಾ. "ಅದಕ್ಕೆ ಆ ಹುಡುಗಿಯರು ಏನತಿಂದ್ರು ಚೂರು ಕೊಡಂಗಿಲ್ಲ" ಚೊಕ್ಕ, ಬಾಯಿ ಒಣಗಿಸಿಕೊಂಡು ಕುಂತ್ಕೊಂಡ.

ಬೇವಿನ ಮರದ ಬಡ್ಡಿಗ ಕುಂಡಿ ಆನಿಸಿಕೊಂಡು ಏನೋ ಯೋಚಿಸ ತೊಡಗಿದ. ಮೈಲಿ ದೂರದ ಮೈಲಾಪುರಕ್ಕ ಶೇಂಗಾ ಆರಿಸಾಕಂತ ನಸಕಿನ್ಯಾಗ ಎದ್ದು ಸೊಂಟದಮ್ಯಾಲ ಎಲ್ಡ ರೊಟ್ಟಿ ಕಟ್ಕೊಂಡು, ಕೈಯಾಗ ಒಂದ ಚೀಲ ಕುರ್ಚಿಗಿ ಹಿಡಕೊಂಡ ನಿದ್ದಿಗಣ್ಣಾಗ ತುಕಡಿಸ್ಕೊಂತ, ಅಂಬಲಿ ಉಂಡು, ಒಂದ ರೊಟ್ಟಿ ಹಸಿಮೆಣಸಿನ ಕಾಯಿ ಚಟ್ನಿ ಹಿಡ್ಕೊಂಡು ಹೆಂಗಸರ ಹಿಂದ ನಡದದ್ದೆ ನಡದದ್ದು ಮೈಲಾಪುರ ಮುಟ್ಟೋದ್ರಾಗ



ಕಾಲು ಮಾತಾಡ್ತಿದ್ವು, ಅವಾಗಾಗಲೇ ಬಿಸಲು ಬಂದಿರ್ತಿತ್ತು, ಮೊಳಕಿ ಹೊಂಟಿರೋ ಜಾಗದಾಗ ಕುರ್ಚಿಗಿಯಿಂದ ಗೆಬರಿ ಒಂದ ಬೀಜ ಚಲೋ ಇತ್ತಂದ್ರೂ ಮುಂದಿನ ಸಣ್ಣ ಮಳಕಿ ಇದ್ರ ಚಿವುಟಿ ಸಿಪ್ಪಿ ಸಮಕ ತಂಗು ಇಡಿ ಶೇಂಗಾ ಕಾಣೋ ಹಂಗ ಮಾಡಿ ಚಿಲದಾಗ ಹಾಕೊಂದು ಮಣ್ಣೊಳಗ ಮತ್ತ ಶೇಂಗಾ ಇದ್ರ ಖುಷಿಯಿಂದ ಮಣ್ಣನ್ನ ಒರೆಸಿ ಚೀಲದೊಳಗ ಹಾಕ್ಕೊಂಡು ಚೀಲ ಮಡಿಚಿ ಚಣ್ಣದೊಳಗ ಸಿಕ್ಕಿಸಿಕೊಳ್ತಿದ್ದ. ಒಂದ ಹೊಲ್ದಾಗ ಸಿಗದಿದ್ರ ಮತ್ತೊಂದ ಹೊಲ ಹಕ್ಕಿ ಪಕ್ಷಿಗಳು ಕಾಳಿಗ ಅಲ್ದಾಡೋ ಹಂಗ, ಸಂಜಿ ಯಾಗೋವರಿಗ ಅಲದಿದ್ದೆ ಅಲದಿದ್ದು. ನಾಕ ಸೇರು ಐದಸೇರು ಆರ್ಸಿ, ಮೈಲಾಪುರದ ಸಣ್ಣ ಖುಶೇಖನ ಅಂಗಡಿಗ ಒಯ್ದು ಹೆನ್ನೆರಡಣೆಗ ಸೇರು, ಎಂಟಣೆಗ ಸೇರಿನಂಗ ಹಾಕಿ ಐದ ಪೈಸೆಗೆ ತಿನ್ನಾಕ ತಗೊಂದು, ಊರಿನ ಹೆಂಗಸರ ಕೂಡ ಊರ ಹಿಂದಿನ ಹುಸೇನಿ ಹೆಂಡದ ದುಖಾನಿಗ ಹೋಗಿ ಅವರು ಕುಡಿಯೋದನ್ನೆ ನೋಡ್ತಿದ. ಹುಳಿಹೆಂಡ ಕುಡದಿಂದ ತಲಿಯೊಳಗಿನ ಹುಳಗಳೆಲ್ಲಾ ಬುಳು ಬುಳು ಅಂದಂಗಾಗಿ ಕೊಳಕ ಸೆರಗಿನಿಂದ ತುಟಿ ಒರೆಸಿಕೊಂಡು ಮುಂದಿದ್ದ ಉಪ್ಪನ ನೆಕ್ಕೋದ ನೋಡಿ ತಡಿಕೊಳ್ಳಾಕ ಆಗದೆ ಪಾವಲಿ ಕೊಟ್ಟು ಅರ್ಧ ಬಾಟಲಿ ಖರೀದಿಸಿದ. ಹೆಂಗಸರೆಲ್ಲಾ ದಂಗಾಗಿ ಚೊಕ್ಕನನ್ನೆ ನೋಡಿದ್ರು," ಬಿಸಲಾಗ ಉರಿಉಚ್ಚಿ ಆಗೈತ ಬೇ "ಅಂದವನೆ ಹಿಂದ ಮುಂದ ನೋಡದೆ ಮಡಕಿಗ ಸುರುವಿಕೊಂಡು ಒಂದೇ ಉಸರಿಗ ಅರ್ಧಮುಗಿಸಿದ ಅವನಿಗೂ ಅದೇ ಅನುಭವ ಆತು. ಅವನ ವಾರಗಿಯ ಬೀರಿ, ಅವನನ್ನೆ ನೋಡ್ತಿದ್ಲು. ಮಳಿ ಮಾಡಾಗಾಕ ಹತ್ತೈತಿ ಜಲ್ದಿ ಮುಗಿಸರಿ ಅಂದ್ಲು. ಯಜಮಾನಿಯೊಬ್ಬಳಿಗ ಸಿಟ್ಟೆ ಬಂತು, "ಈ ಕೀದ ಇದ್ದಿದ್ದೆ ನೋಡವ ಮೂಣಿ ಮನಿಗ ಹೋಗಿ ಏನ ಹುಡ್ರಿಗ ಮಲಿ ಉಣಸಾಕಿ ಅದಿ ಏನು, ಹೋಗಾನಂತ ಇರು" ಅಂದ್ಲು, "ಹೊರಗ ನೋಡ ಬೇ ಮಾಡ ಹೆಂಗ ಮುಚ್ಕೊಂಡೈತಿ ಮುಂಗಾರಿ ಮಳಿ ಹೆಂಗ ಹೊಡಿತೈತಿ ಯಾರಿಗೊತ್ತು." ಅಂತ ತನ್ನ ಅವಸರ ತೋರಿಸಿಕೊಂಡ್ಲು. ಚೊಕ್ಕಗ ನಿಶೆ ಆದಂಗಾತು, "ಬೀರಿ ನೀ ಹೇಳೊದು ಖರೆ ಐತ್ನೋಡು, ಏನ ಮಾಡ, ಬಿಳಲಿ ಬಿಡು ಮಳಿ, ಭೂಮಿ ತಾಯಿನಾರು ತಂಪಾಗಲಿ ದನಗಳಿಗ ಕುಡಿಯಾಕ ನೀರಾರು ಅಗತೈತಿ, ನಮ್ಮೂರ ಕೆರಿ ತುಂಬಿದ್ರ ಬಾವಿಯೊಳಗ ನೀರ ಬರತೈತಿ, ಹಿಂದ್ಲೂರಿ ಹೋಗೋದು ತಪತೈತಿ" ಖಾಲಿ ಚೀಲ, ಕುರ್ಚಿಗಿ, ಬುತ್ತಿ ಅರವಿ ತಗೊಂಡ ವನೆ ಎದ್ದ, ಕತ್ತಲು ಗವ್ ಅನ್ನೊ ಹಂಗಿತ್ತು, ಹಿಂದ ಒಬ್ರು, ಮುಂದೊಬ್ರು ದೊಡ್ಡ ಹೆಂಗಸರು, ನಿಶೆಯೊಳಗ ಯಾವದೋ ಹಳೆ ಪುರಾಣ ತಕ್ಕೊಂಡು, ಹೆದರ್ತಾವಂತ ಸಣ್ಣ ಹುಡ್ರನೆಲ್ಲಾ ನಡಕ ಮಾಡ್ಕೊಂಡು ಹೊಂಟಿದ್ರು.

ಇದ್ದಕ್ಕಿಂದಂಗ ಚಟ್ ಚಟ್ರಂತ ಸಿಡ್ಲು ಮುಗಿಲು ಸಿಳ್ಕೊಂಡು ರಪ್ಪಂತ ನೆಲಕಬಿತ್ತು, ಹುಡ್ರೆಲ್ಲಾ ಕಿಚೋ ಅಂತ ಚೀರಿಕೊಂಡು ದಿಕ್ಕಪಲಾದ್ರು, ಚೊಕ್ಕಗ ಕುಡದದ್ದೆಲ್ಲಾ ಇಳದ ಹೋಗಿತ್ತು. ಬೀರಿ ಹೆದರಿ ಅವನನ್ನ ಹಟ್ಟಿಯಾಗಿ ಹಿಡ್ಕೊಂಡಿದ್ಲು ಯಾರು ಎಲ್ಲಿಗ ಹೊದ್ರೊ ತಿಳಿಯಲೇ ಇಲ್ಲಾ, "ಓಡು ಬೀರಿ ಓಡು ಮತ್ತ ಸಿಡಲು ಬಡಿತೈತಿ" ಅಂತೇಳಿ ಕೈ ಹಿಡ್ಕೊಂಡು ಓಡಿದ, ಬಾಯಿ ಒಣಗಿ ಬುರಗ ಬರಾಕ ಹತ್ತಿತ್ತು ಇಬ್ರೂ ಹೌ ಹಾರಿದ್ರು, ಕತ್ಲಾಗ ದಾರಿ ಕಾಣವಲ್ದು, "ಎ ಸಣ್ಣವ್ವ, ದುರ್ಗಿ, ಚಿಗವ್ವ, ಗೊಮ್ಲತ್ತಿ" ಜೋರಾಗಿ ಬೊಬ್ಬಿ ಹಾಕೊಂತ ಓಡಿದ್ರು ಗಾಳಿ ಜೋರಾಗಿತ್ತು, ಯಾರ ಸುಳಿವೂ ಸಿಗಲಿಲ್ಲಾ, ದೊಡ್ಡ ಬಾವಿ ತಾಗ ಬಂದಾಗ ದೊಡ್ಡ ಹೊಲ್ದಾನ ಬ್ರಹ್ಮರಾಕ್ಷಸ ನೆನಪಾತು, ಕಾಲು ಓಡಲಿಲ್ಲಾ. "ಹನ್ಮಪ್ಪ ಕಾಪಾಡು, ತಾಳಿದುರ್ಗವ್ವ, ತುಂಬಿನ ದುರ್ಗವ ತಾಂಡೆ ದುರ್ಗಿ ನೀನೆ ಕಾಪಡವ್ವ" ಬೀರಿ ಜೋರಾಗಿ ಒದರಿದ್ಲು. ಚೊಕ್ಕ ಹನ್ಮಪ್ಪ ನೀನೆ ಅದಿಯಪ್ಪ" ಅಂತ ಮನಸಿನೊಳಗ ಅಂದ್ಕೊಂಡವನೆ ಬೀರಿ ಕೈಹಿಡ್ಕೊಂಡು ಜೋರಾಗಿ ಓಡತೊಡಗಿದ, ಎಷ್ಟ ಓಡಿದ್ರು ಹೊಲ ಮುಗಿಯವಲ್ಲದು, ಓಡಿದ್ರು ಓಡಿದ್ರು ಕಾಲು ಸೋಲಾಕ ಹತ್ತಿದ್ವು, ಈರವ್ವ ಹುಡ್ರು ಹೆದರ್ತಾವಂತೇಳಿ, ಜೋರ ಜೋರ ಓಡಿ ಬಂದಿದ್ಲು "ತಮ್ಮಾಚೊಕ್ಕ, ಎ ಬೀರವ್ವ, ಹೆದರ ಬ್ಯಾಡ್ರಿ ಓಡಿ ಮಳಿ ಸುರಿತೈತಿ ಏನ ಮಾಡೋದವ್ವ ನಾವು ಪಡ್ಕೊಂಡ ಬಂದಿದ್ದೆ ಆಟು, ದಿಕ್ಕಿಲ್ಲಿದ ಬದಕು ನಮ್ದು", ಉಸರು ಹಾಕಿದ್ಲು. ಕೆರಿ ಏರಿ ಬಿಟ್ಟು ದೊಡಮಾಳಿ ಕಡೀಗ ಬರಾಕು ಮಳಿ ಹನಿ ಸುರು ಆಗಾಕು. ಎಲ್ಡ ಮೈಲಿ ದೂರ ಗಾಳಿ ಮಳಿಯಾಗ ಗಡಗಡ ನಡಗ್ತಾ ಮನಿಸೇರೊದ್ರಾಗ ಸರವತ್ತಾಗಿತ್ತು. ಮನಿಗ ಬಂದಂದ್ದೆ ಅಂಗಾತ ಬಿದ್ಕೊಂಡ ಬಿಟ್ಟ, ಅವನವ್ವ ಕೆಂಚೀರಿ, ಆ ಮಳಿಯೊಳಗ ಒಂದ ಹಿಡಿ ಪುಳ್ಳಿಗ ಬೆಂಕಿ ಹಚ್ಚಿ, ಹರಕಂಗಿ ಚೆಣ್ಣಾನ ಕಳಚಿ, ಹಿಂಡಿ, ಒಂದ ಕಡಿ ಒಣ ಹಾಕಿ, ಬರೆ ಬರ್ತ್ಲ ನಿಲ್ಲಿಸಿಕೊಂಡು ತಲಿ ಬರೆಸಿ ಬೆಂಕಿ ಕಾಸಿದ್ಲು, "ಜಲ್ದಿ ಬರಾಕಿಲ್ಲೇನಪ್ಪ ಮಳಿಗಾಲ" ಅಂದ ಅವನಪ್ಪ ಚೆಂಡ್ರ, ದವಡಿ ಹಲು ಥಂಡಿಯೊಳಗ ಅಮಡಗಟ್ಟಿದ್ವು, ಚೋಳ ಅಲಗಾಡ ಸಾಕ ಪ್ರಯತ್ನಪಟ್ಟ, ಮೈ ಕಾವೇರ್ತಿದ್ದಂಗ ತನ್ನತಾನೆ ಬಿಚ್ಚಿಕೊಂಡು, ರಾತ್ರಿಲ್ಲಾ ಮೈ ಸೂಡ್ಕ ಹತ್ತು. ಕೆಂಚೀರಿ ಸಾಸವಿಕಾಳು ಬೆಳ್ಳೊಳ್ಳಿ ಅರದು ಸಿಮೆಣ್ಣಿಯೊಳಗ ಕಲಸಿ ತಲಿಗ ಸವರಿಂದ, ಹಂಗ ಕಣ್ಣ ಮುಚ್ಚಿದ.

"ಚ್ಯೂ, ತಿವ್ ಬುಳ್ಳಿ, ತಿವ್." ಅಂತ ಸುಡ ಸುಡೊ ಮತ್ತೊಂದ ರೊಟ್ಟಿ ಹಿಡ್ಕೊಂಡ ಬಂದ ಚಿಂಚಲಿ ನೋಡಿ, ಮೆಲ್ಲಗ ಸರದ "ಒಳಗ ನಮ್ಮ ಇಟೊಂದು ಹಿಟ್ಟ ಕಲಸ್ಕೊಂದ ರೊಟ್ಟಿ ಮಾಡಾಕ ಹತ್ಯಾಳ" ಅಂದ್ಲು, 'ಮತ ನನಗೊಂದು ತಗೊಂಬಾ ಹೋಗು"

ಅಂದ ಇಲ್ಲಪ್ಪ ಹೊಡಿತಾಳ" ಅಂದವಳೆ ನಾಯಿ ಬಾಲ ಆಡೋದ ನೋಡಿ ಜೋರಾಗಿ ಕರದು ಓಡಿದ್ಲು. "ಎ ಚೋಳಾ ನೀ ಹೋಗಿ ಚಿಗವ್ವಂತಾವ ಒಂದ ರೊಟ್ಟಿ ಇಸ್ಕೊಂಬಾರಲೇ" ಅಂದ "ಹೋಗೋ ಮರಾಯ ನಾವು ಅವರು ಜಗಳಾಡೀವಿ ನಾ ಒಲ್ಲೆ ನೀನ ಬೇಕಾರ ಹೋಗಂದ." ನಾ ದೊಡ್ಡಾವ ನಾನ ಹೊದ್ನೆಪ್ಪ ಅಂತಂದ್ರ ಗದರಿಸಿ ಕಳಸ್ತಾಳ, ನೀನ ಹೋದೆ ಅಂದ್ರ ಕೊಡ್ತಾಳ, ಹೋದಾರ ಹೋಗಿ ನೋಡು ಅಂತ ಹವಾಹಾಕ ತೊಡಗಿದ. ಅರೆ ಏನಾರ ಅಂದ್ರ ನಿನ್ನ ಹೆಸರ ಹೇಳಾವನೋ ನಾನು, ಅಂದ "ಹೂಂ, ಆತಪ, ಏನೂ ಅನಂಗಿಲ್ಲಾ ರೊಟ್ಟಿ ಅಂದ್ರ ಏನ ಯಾಲಕ್ಕಿ ಹಿಟ್ಟಲ್ಲ ಹೋಗು" ಅಂತ ನುಗ್ಗಿಸಿ ಹಿಂದ ನಿಂತು ನೋಡು ತೊಡಗಿದ.

ಚೋಕಾ, ಅಂಜ್ಕೊಂಡ್ಲೆ ಒಂದೊಂದೆ ಹೆಜ್ಜಿ ಹಾಕ್ಕೊಂತ ಒಳಗ ಇಣಕಿದ, ರೂಪ್ಲಿ, ಒಂದ ರೊಟ್ಟಿ ಹಂಚ ಮ್ಯಾಲ ಒಗದು ಹಂಚಿನ ಮ್ಯಾಲಿದ ರೊಟ್ಟಿ ತಗದು, ಬೆಂಕಿ ಕೊಡದ ಮ್ಯಾಲ ಆನ್ಸಿದ್ಲು. ಹಿಟ್ಟಿನ ಕೈಯಿಂದ್ಲೆ ಬುಡ್ಡಿ ಚೀಲ ತಗದು ಡಬ್ಬಿ ತಗದು, ಚಿಟಗಿ ನಶ್ಯಾಪುಡಿ ತಕ್ಕೊಂಡು ಗಸ್ ಗಸ್ ತಿಕ್ಕಿ ಒಂದ ಸಲ ಫ್ಲ ಅಂದ್ಲು. ಪಾತ್ರಿಯೊಳಗಿಂದ ನೀರ ತಗೊಂಡು ರೊಟ್ಟಿ ಮ್ಯಾಲ ತಿರುವಿ, ಕೆಂಡದ ಮ್ಯಾಲಿನ ರೊಟ್ಟಿಯನ್ನ ತಗದು ಪುಟ್ಟಿಗ ಎಸದು, ಕಟಗಿ ಸಂದಿಯೊಳಗ ಪಿಚ್ಚಂತ ಉಗುಳಿದ್ಲು. ಎಲ್ಲಾನು ನೋಡ್ತಿದ್ದ ಚೊಕ್ಕ ಹೆದರ್ಕೊಂತೆ "ಚಿಗವ್ವ ರೂಪ್ಲಿ ಚಿಗವು" ಅಂದ. ಒಲಿಗ ಅಡ್ಡ ಕೈ ಹಿಡದು, "ಯಾರದು" ಅಂದ್ಲು. ನಾನ ಚಿಗವ್ವ ಚೋಕಾ" ಅಂದ "ಹೂಂ ಎನ ಬಂದೆ" ಅಂದ್ಲು ಅಟ ಬೇಕಾಗಿತ್ತು ಸಿದ್ ರೊಟ್ಟಿ ಪುಟ್ಟಿತಾವ ಹೋಗಿ ನಿಂತ. "ನಮ್ಮಣ್ಣ ಚೋಳಗ, ಮತ." ತಡವರಿಸಿದ ಎನಾತ ಬೊಗಳಲ ಬಾಡಕಾ" ಅಂದ್ಲು "ಮತ ಅವನಿಗ" ಅಂದ ನ್ಯಾಲಗಿಯಿಂದ ಹಲ್ಲಾನ ನಶ್ಯಾಪುಡಿಯನ್ನ ಒರೆಸಿ, ಕದಗಿ ಪಕ್ಕಕ್ಕ ಪಿಚಕಂತ ಉಗಳಿ "ಹೂಂ ಮುಂದೇಳಂದ್ಲು" "ಒಂದ ರೊಟ್ಟಿ ಕೊಡಾಕಂತ" ಅಂದ ಎಲ್ಲಿತ್ತೊ ಸಿಟ್ಟ "ಹೊಗ್ಯ ಚಾಡತಾನನ ಮಗನೆ, ನಿಮ್ಮಪ್ಪ ದುಡದ ತಂದಾನೇನಲಾ" ಅಂತ, ಬಿಸಿ ಬಿಸಿಯಾದ ಚುಂಚ ಶಾಲೆಗೊಂದು ಬಲಗೈ ಮ್ಯಾಲ ಬರಿ ಎಳದು ಬಿಟ್ಲು. "ಎಪ್ಪಾಸತ್ನೊ, ಯವ್ವಾ ಸತ್ನೊ, ಯಣ್ಣ ಬಾರೋ, ಸತ್ತೆ," ಅಂತ ಹೆದರಿ ಚಣ್ಣದಾಗ ಉಚ್ಚಿ ಹೊಯ್ಕಿಂಡ. ಚೋಳಗ ಗಾಬರಿ ಆತು, ಹೊರಗ ಬಂದ ಅವನ ತಮ್ಮನ ಕೈ ಹಿಡದು ನೋಡಿದ ಕೈ ಯಾಗಿನ ಚರ್ಮ ಸುಲದ ಬಂದಿತ್ತು. ಕೆಟ್ಟಸಿಟ ಬಂತು, ಕಲ್ಲತಗೊಂದು ಜೋರಾಗಿ ಗುಡಸಲಿಗ ಬೀಸಿದವನೆ ಓಡಿ ಹೋದ.

ಕತ್ತಲಾಗತ್ತಿದಂಗೆ ಅವನೆದಿ ಹೊಡಕೊಳ್ಳಕ ಹತ್ತಿತ್ತು. ಅವನ ತಮ್ಮನಿಗ, "ಯಾರಿಗೂ ಹೇಳ ಬ್ಯಾಡ ನಿನ್ನ ಮಾತ ಕೇಳಿದ್ರ ಅಪ್ಪ ಚರ್ಮಾಸುಲಿತಾನ" ಅಂದ. ಉರಿತಿದ್ರು ಅಣ್ಣನ ಸಂಕಟ ನೋಡಲಾರದೆ ಹೇಳಂಗಿಲ್ಲಾ. "ಆದ್ರ ಯಾರಾರ ಕೇಳಿದ್ರ?" ಅನುಮಾನಿಸಿದ, ಹೌದಲ್ಲ, ವಿಚಾರ ಮಾಡಿದ, ಅವನನ್ನ ಮನಿತಾಗ ಬಿಟ್ಟು, ಹನ್ಮಂತ ದೇವರ ಗುಡಿತಾಗ ಆಡಾಕ ಓಡಿದ. ರಾತ್ರಿ ಕತ್ತಲಾದ್ರು, ಮನಿಗ ಹೋಗಾಕ ಮನಸಾಗಲಿಲ್ಲಾ ಗುಡಿತಾಗ ಯಾರೋ ಗುಳೆದವರು ಬಂದಿದ್ರು. ಅವರ ಹುಡ್ರತಾವ ಮಾತಾಡಕೊಂತ ಕುಳಿತು ಬಿಟ್ಟ "ತಮ್ಮನ ಕೈಯಾಗಿನ ಗಾಯ ನೋಡಿ, ಅಪ್ಪ ಕೇಳ್ತಾನ ಅವನು ಎಲ್ಲಾನೂ ಹೇಳಿ ಬಿಡ್ತಾನ, ನನ್ನ ಹುಡುಲಿ ಹೊಡಿತಾರ." ಯೋಚನೆ ಬಂದಾಗ ಸಣ್ಣಗ ನಡಕ ಬಂತು. ಗುಳೇದ ಮಂದಿ ಉಣ್ಣಾಕ ಕುಂತ್ರು. ಅವನಿಗೂ ಹಸಿವಾತು ಆದದ್ದ ಆಗಲಿ ಅಂದವನೆ ಮನಿಕಡಿಗ ನಡದ.

ಚೊಕ್ಕ ಅವನಪ್ಪನ ಪಕ್ಕದಾಗ ಮಕ್ಕೊಂಡಿದ್ದ. ಅವನವ್ವ ಒಳಗ ಮುದ್ದಿ ಕೂಡ್ಸಾಕ ಹತ್ತಿದ್ಲು. ಅಕ್ಕ ಹಿಂಡಿ ಅರಿಯಾಕ ಹತ್ತಿದ್ಲು ಯಾರಿಗೂ ಗೊತ್ತಿಲ್ದಂಗ ಒಲಿ ಮುಂದ ಹೋಗಿ ಕುಂತ. ಯಾರು ಏನೂ ಮಾತಾಡದಕ್ಕ ಹೋದ ಜೀವ ಮತ್ತೆ ಬಂದಂಗಾತು ಎಲ್ಲರಿಗಿಂತ ಮದಲೇ ಒಂದ ಮುದ್ದಿ ಉಂಡವನೆ ಮೂಲಿಯೊಳಗ ಮುದರಿಕೊಂಡ

❖

## ೧೨. ಅವನಂತರಾಳದ ಮಾತುಗಳು....

ತನ್ನ ವಿಚಾರಗಳಿಗೆ ನಿಲುಕದ ಸಂಗತಿಗಳು ನಡೆಯುತ್ತಿದ್ದರಿಂದ ಮುದುಕ ಮಂಚನಿಗೆ ಬದುಕು ದುಸ್ತರವೆನಿಸ ತೊಡಗಿತು. ತಾನು ಬದುಕಿದ ಬದುಕನ್ನ ಮಕ್ಕಳಿಂದ ಅಪೇಕ್ಷಿಸಿ ನಿರುಪಾಯನಾಗಿ ತನ್ನ ಪಾಡಿಗೆ ತಾನು ದುರಗವ್ವನ ಗುಡಿಯನ್ನ ಆಶ್ರಯಿಸಿದ್ದ. ಒಬ್ಬ ಮಗ ದುಡಿತವನ್ನು ಬಿಟ್ಟ ನಾಟಕದ ಗೀಳನ್ನ ಅಂಟಿಸಿಕೊಂಡು. ಊರೂರು ಪೇಟೆ ಬಾರಿಸುತ್ತಾ ನಾಟಕ ಕಲಿಸುತ್ತಾ ಊರುರು ತಿರುಗಿ, ಹೆಂಡತಿ ಮಕ್ಕಳನ್ನು ಕೂಲಿ ಮಾಡಿಕೊಂಡು ಬದುಕುವಂತೆ ಮಾಡಿದ್ದ. ತಾನೂ ಕೂಲಿ ಮಾಡಿಕೊಂಡೆ, ಶ್ರಮವಹಿಸಿ ಸಹವಾಸ ಬೆಳೆಸಿ, ಮಕ್ಕಳಿಗಾಗೆ ಕೆರೆಯ ಹಿಂದೆ ನೀರುಣ್ಣುವಂತಹ ಐದು ಎಕ್ಕರೆ ಜಮೀನನ್ನ ಮಾಡಿದ್ದ. ದೊಡ್ಡವ ಊರೂರು ತಿರುಗಾಡಿ ಊರಿಗೆ ಬರುವುದೇ ಅಪರೂಪವಾಗ ತೊಡಗಿದಾಗ ಹನುಮ ಇದ್ದ ಗದ್ದೆಯಲ್ಲಿ ಅರ್ಧ ಭಾಗವನ್ನ ಮಾರಿ ನುಂಗಿ ನೀರು ಕುಡದಿದ್ದ. ಮುದುಕ ಮಂಚ ಸುದ್ಧಿ ಕೇಳಿ ಮೂಲಿ ಹಿಡಿದಿದ್ದ. ತನ್ನ ತನವನ್ನ ಮಕ್ಕಳಲ್ಲಿ ಕಾಣಲು ಯತ್ನಿಸಿ ವಿಫಲನಾದ ಚೊಂಚಜ್ಜ. ತನ್ನ ದುಃಖ ಮರೆಯಲು ಹನುಮವ್ವನ ಮನಿಯನ್ನ ಹಿಡಿದಿದ್ದ. ಹರೆಯದಲ್ಲೆಂದೋ, ಹನುಮವ್ವ ದಿಕ್ಕಿಲ್ಲದೆ ಬಿರ್ನಳಿಗೆ ಬಂದಾಗ, ಯೌವ್ವನದಲ್ಲಿ ಭಾರಿ ಪೈಲವಾನನಂತಿದ್ದ ಮಂಚ ಹನುಮವ್ವ ಇಟ್ಕಂಡಿದ್ನನಂತೆ. ತಾನು ಬಯಸದಿರುವುದು ನಡೆಯ ತೊಡಗಿದಾಗ ಮಂಚ ಮೌನವಾಗೆ ಮಸಣ ಸೇರುವ ದೇಹಕ್ಕೆ ವ್ಯಾಮೋಹವಾದರೂ ಏಕೆ? ಎಂಬ ನಿಶ್ಚಯಕ್ಕೆ ಬಂದಿದ್ದ.



ತಾನು ಯುವಕನಾಗಿದ್ದಾಗ ಊರ ಸುತ್ತೆಲ್ಲಾ ಭಯಂಕರ ಕಾಡು, ಈಚಲು ತಾಳೆ ಮರಗಳು ಬೀರನಳ್ಳಿ ಗಡಿ ತುಂಬೆಲ್ಲಾ ತುಂಬಿ ಕೊಂಡಿದ್ದವು. ಗೋಮಾಳದ ತುಂಬಾ ದೊಡ್ಡ ದೊಡ್ಡ ಈಚಲು ಮರಗಳು ಸ್ವಾತಂತ್ರ್ಯ ಹೋರಾಟಗಾರರು ಓಡಿ ಬಂದು ಅವಿತುಕೊಂಡಿದ್ದರಂತೆ ಚೊಂಚಜ್ಜ ತಮ್ಮ ಮನೆಯಿಂದ ರೊಟ್ಟಿ ಮಾಡಿಕೊಂಡು ಹೋರಾಟಗಾರರಿಗೆ ಕೊಟ್ಟು ಪೋಲಿಸರು ಬರುವ ಸುಳಿವು ಸಿಕ್ಕರೆ ಹೇಳುವುದಾಗಿ ಹೇಳಿದ್ದನಂತೆ. ಶಾಲೆಗೆ ಹೋಗದಿದ್ದರೂ ಊರಲ್ಲಿ ಮಾತಾಡುವ ವಿಷಯದಿಂದಲೇ ಸ್ವಾತಂತ್ರ್ಯ, ಗಾಂಧೀಜಿ, ನೆಹರೂ, ಕುರಿತು ತಿಳಿದುಕೊಂಡಿದ್ದ. ಹರಿಹರ ಆಗ ಒಂದು ಸಣ್ಣ ಊರು. ಶೇಂಗಾದ ಗಾಡಿ ಕಟ್ಟಿಕೊಂಡು ಹೋದಾಗ, ಕೆಂಪು ಮುಖದ ಬ್ರಿಟಿಷರನ್ನು ಕಂಡು ಇವರೇ ಇರಬೇಕು ನಮ್ಮನ್ನ ಆಳುತ್ತಿರುವ ಜನರೆಂದು ಊಹಿಸಿದ್ದನಂತೆ. “ಈ ಪಾಠಿ ಕೆಂಪ ಜನ ಅದಾರಿವರು ನಮ್ಮ ತಾಳಿ ಮರದಾಗ ಒಂದೆರಡು ಕೆಂಪ ಮಂಗ್ಯಾ ಬಿದಿದ್ದವು ಹಿಂಗ ಗಟ್ಯಾಗಿ ಹೇಳ ಬ್ಯಾಡಲೋ ಮಾತಗಿತು ತಿಳದೀತು” ಅಂತ ತಾಕೀತು ಮಾಡಿದ್ದಳಂತೆ. “ಎ ಬಾರಬೆ ತಿಳದ್ರ ತಿಳವಲ್ದು ನೀ ಯಾಕ ಹೆದರ್ತಿ ಎತ್ತಿ ಬಂಡ್ಯಾಗ ಹಾಕ್ಕೊಂದು ಹೋಗಿ ಬಿಡೋನಂತ” ಅಂದಿದಕ್ಕ ಅವರವ್ವ ಹೆದರಿ ಗಪ್ಪಾಗಿದ್ದಳಂತೆ. ಹೀಗೆ ಒಂದು ಆಣೆ ಕಾಲದ ಲೆಕ್ಕಚಾರದಿಂದ ಹಿಡಿದು ಇವತ್ತಿನ ಸಾವಿರ ರೂಪಾಯಿ ವ್ಯವಹಾರ ಕಂಡು ಉಲ್ಟಾ ಪಲ್ಟಿಯಾದ ಆರ್ಥಿಕ ವ್ಯವಸ್ಥೆಯ ಕುರಿತು ಕರಾರುವಕ್ಕಾಗಿ ಲೆಖವನ್ನ ಒಪ್ಪಿಸುತ್ತಿದ್ದ ಮುದುಕ. ಕೋಲಾಟದಲ್ಲಿ ನಿಸ್ಸಿಮ. ಮೈ ಕುಣಿಸಿ ಕೋಲನ್ನ ಹಾಕಿದನೆಂದರೆ ನಿಂತವರ ಕಾಲುಗಳು ಕುಣಿಯಲು ಆರಂಭಿಸುತ್ತಿದ್ದವು. ಅದಕ್ಕೆ ಹನಮವ್ವ ಮರುಳಾಗಿರಬೇಕು, ಅನಾಥ ಹನುಮವ್ವಳಿಗೆ ಗುಡಿಸಲು ಹಾಕಿ ಕೊಟ್ಟು, ಅಂಗಡಿ ಇಡಲು ಹಣ ಒದಗಿಸಿದಾಗ ಹೆಂಡತಿ ಜುಂಜವ್ವ ಇರಿಸು ಮುರಿಸುಗೊಂಡಿದಕ್ಕೆ ಸೊಂಟ ಮುರಿಯುವಂತೆ ಹೊಡೆದಿದ್ದ. ನಸುಕಿನಲ್ಲಿ ಮೊಸರು ರೊಟ್ಟೀ ತಿಂದು ಗಳೆ ಕಟ್ಟಿಕೊಂಡು ಹೋಗುವುದು, ಬಿಸಿಲು ಎರುವುದರೊಳಗೆ ಎತ್ತುಗಳ ಮೈತೊಳೆದು ಕಾಡಿಗೆ ಅಟ್ಟಿ ಹುಲ್ಲು ಮೇವು ಮಾಡಿ, ಹಾಲು ಮಾರಲು ಕೆಲಗಿಗೆ ಹೋಗಿ ಬರುವುದರೊಳಗೆ ಸೂರ್ಯ ತನ್ನ ದಿನದ ಪಯಣ ಮುಗಿಸಿ ಬಾನೊಳಗೆ ಮರೆಯಾಗುತ್ತಿದ್ದ. ಅದೇ ರೂಢಿಗತವಾದ ಬದುಕು, ಬೇಸರವೆಂಬುದಾಗಲಿ ಸೋಮಾರಿತನವೆಂಬುದು ಹತ್ತಿರ ಸುಳಿಯುತ್ತಿರಲಿಲ್ಲ. ಹದಿನೈದು ರೊಟ್ಟಿ ಅನ್ನ ಮಜ್ಜಿಗೆ ಚೆರಿಗೆ ಎತ್ತಿದಾಗ ಮುಗಿಯುತ್ತಿತ್ತು ಊಟದ ಕೆಲಸ. ಕೆಲಸ ಮತ್ತು ಊಟಕ್ಕೆ ಹಿಂದೂ ಮುಂದೂ ನೋಡುತ್ತಿರಲಿಲ್ಲಾ. ಅದೇ ತನ್ನ ಮಕ್ಕಳು–ಮುಂಜಾನೆ ಎದ್ದೊಡನೆ ಪುಟ್ಟನ

ಚಹಾದಂಗಡಿ ಸೇರಿದರೆಂದರೆ ಮಾತು ಕತೆ ಮುಗಿಸಿ ಹೊರ ಬರುವುದದಲ್ಲೆ ಹೊತ್ತು ನೆತ್ತಿಯ ಮೆಲೆ ಬಂದು ಬಿಸಿಲು ಚುರುಗುಟ್ಟುತ್ತಿರುತ್ತದೆ. ಊಟದ ಶಾಸ್ತ್ರ ಮುಗಿಸಿದವನೇ ಮತ್ತೆ ಊರ ಮುಂದಲ ಶಾಲೆಯ ಕಟ್ಟೆಯ ಮೇಲೋ ಅಥವಾ ದುರಗವ್ವನ ಗುಡಿಯಲ್ಲಿ ನಾಲ್ಕು ಜನ ಪಡ್ಡೆ ಹುಡುಗರು ಗುಂಪಾಗಿ ಇಸ್ಪೀಟಿನ ಆಟ ಪ್ರಾರಂಭವಾಯಿತೆಂದರೆ ಹೆಂಡಿರ ಕೊರಳ ತಾಳಿ ಮನೆಯೊಳಗಿನ ಕಾಳು ಕಡಿ ಯಾವುದೂ ಉಳಿಯುತ್ತಿರಲಿಲ್ಲಾ. ಮಂಚ ಅಪ್ಪಿತಪ್ಪಿಯೂ ಗರಿಗಳನ್ನ ಮುಟ್ಟಿರಲಲ್ಲಾ. ಪೇಟೆಯಲ್ಲಿ ಶ್ರೀಮಂತರು ಆಡುತ್ತಾರೆ ಎಂದು ಕೇಳಿದ್ದ. ಹಳ್ಳಿಗೆ ಬಂದ ಆಟವನ್ನ ನೋಡಿ, ಹಳಹಳಿಯಿಂದ ತನ್ನ ಓರಿಗೆಯವರೊಂದಿಗೆ ತನ್ನ ಮನಸಿನಾಳದ ನೋವನ್ನ ತೋಡಿಕೊಂಡಿದ್ದ ಅವರ ಮಕ್ಕಳು ಅದೇ ಜಾಡನ್ನ ಹಿಡಿದಿರುವುದರಿಂದ ಅವರಿಗೂ ಮಾತಾಡಲು ಬಾಯಿ ಕಟ್ಟಿದಂತಾಗುತ್ತಿತ್ತು ಜೇಬಿನಲ್ಲಿ ಹಣವಿಟ್ಟುಕೊಂಡು ತಿರುಗಾಡುವುದೇ ಅಪರಾಧವೆಂದು ತಿಳಿದ ಕಾಲ ಒಂದಿತ್ತು. ಆದರೆ ಇವತ್ತು ಚೋಟುದ್ದ ಹುಡುಗರು "ಕೀಸೆಯೊಳಗ ಗರಿ ಗರಿ ನೋಟನ ಹಾಕಿಕೊಂಡು ದಿಮಾಕ ಮಾಡಕೊಂತಾ ತಿರಗಾಡ್ತಾರ" ಚೊಂಚಜ್ಜನ ಕುಲುಮೆಯಾದ ಎದೆಯೊಳಗಿಂದ ಸಿಡಿದ ಶಬ್ದಗಳಿವು.

ಮಂಚ ಮಾಯಾವಾಗುತ್ತಿರುವ ಹನುಮಪ್ಪನ ಓಕಳಿ ಉಚ್ಛಾಯದ ಕುರಿತು ಮರಗುತ್ತಾನೆ. ಪಾಳುಬಿದ್ದ ಹನುಮಪ್ಪನ ಗುಡಿಯ ಕಲ್ಲುಗಳನ್ನ ಊರ ಮಂದಿ ಒಂದೊಂದಾಗೆ ಒಯ್ದು ತಮ್ಮ ತಮ್ಮ ಮನೆಯ ಅಂಗಳಕ್ಕೆ ಹೊಂದಿಸಿಕೊಂಡು ದೇವರನ್ನ ಬಯಲೊಳಗೆ ನಿಲ್ಲಿಸಿದ್ದಾರೆ. ಅದಕ್ಕೆ ಈ ಹಾಳೂರು ಬೀರನಳ್ಳಿಗೆ ಮಳೆ ಆಗುವುದಿಲ್ಲಾ. ಕಾಲ ಒಂದಿತ್ತು, ತೇರಿನ ಬಂಡಿ, ಬಂಡಿಯ ಮುಂದೆ ದೀಪ ಹಿಡಿದ ಜನ, ರಾತ್ರಿ ಹನ್ನೆರಡರ ಸುಮಾರಿಗೆ ತೇರಿನ ಗಾಲಿಗೆ ಹುಮ್ಮಸ್ಸಿನಿಂದ ಕಾಯಿ ಹೊಡೆಯುವ ಜನರ ಗುಂಪು. ಅದನ್ನ ಆರಿಸಲು ಬಡಿದಾಡುವ ಹುಡುಗರು, ಮೂರನೇ ದಿನ ಓಕಳಿ, ಅಂತರಗಾಯ ಹರಿಯಲು ಹೊಂಡು ಹಾಕುತ್ತಿದ್ದ ತಾನು ತನ್ನ ಗಳೆಯರನ್ನ ಬೆನ್ನು ಹತ್ತಿ ನೀರು ಚೆಲ್ಲುತ್ತಿದ್ದ ಊರ್ಮನಿಮಂದಿ. ಸಂಜೆ ದೇವರ ಪಲಕ್ಕಿ ಹಿಡಿದು ಕಥೆ ಕೇಳುವ ಜನ, ತಿರುಗಿ ಮೂರನೇ ದಿನ ಬೂತ ಮಲ್ಲನನ್ನ ಆಡಿಸುವಾಗ ಹೆಣ್ಣು ಗಂಡೆನ್ನದೆ ಕಿಕ್ಕಿರಿದು ನೋಡುತ್ತಿದ್ದ ಅವಿಸ್ಮರಣೀಯ ಕ್ಷಣ ಒಂದು ತನ್ನ ತಲೆಮಾರಿಗೆ ಇಲ್ಲವಾದುದನ್ನ ನೆನಪಿಸಿಕೊಂಡು ಮರಗ ತೊಡಗಿದ. ಮುಂಗಾರು ಮಳೆ ಭೂಮಿಗೆ ಬೀಳುವುದೇ ತಡ, ಶೇಂಗಾ, ಜೋಳ, ನವಣಿ, ಸಜ್ಜಿ, ಹತ್ತಾರು ಬೀಜಗಳನ್ನ ಹೊಲದಲ್ಲಿ ಬಿತ್ತಿ ಹುರುಪು ಹುಮ್ಮಸಿನಿಂದ ರಾತ್ರಿ ಕತ್ತಲಾಗುವವರೆಗೆ ಗಳೆ ಹೊಲದಲ್ಲೆ, ಬಿತ್ತಿಗೆ ಊಟ

ಮಾಡಿಸುವ ರಾರೋ, ಎಡಿ ಮಾಡಿ ಊಟಕ್ಕೆ ಕರೆಯುವರ್ಯಾರೋ. "ಇವತ್ತಿನ ಹುಡ್ರಿಗ ಅದೆಲ್ಲಾ ಹ್ಯಾಂಗ ತಿಳಿಬೇಕು." ಜೋಕಟ್ಟಿ ಹತ್ರ, ನಾವು ಎಮ್ಮಿ ಕಾಯಲು ಹೋಗುತ್ತಿದ್ದಾಗ, ಭಯಂಕರ ಮಳೆಯಿಂದಾಗಿ ಆಳೆತ್ತರ ಗುಂಡಿಗಳು ಒಂದ ಸಲಾ ನಾನು ಮುಳುಗಿ, ನಮ್ಮ ಸಂಗವ್ವನ ಮಗಳು ಪೆದ್ದಿಪಾಮಿ ಇರದಿದ್ರೆ ಇದನೆಲ್ಲಾ ಹೇಳಾಕ ನಾ ಬದುಕಿರತಿರಲಿಲ್ಲಾ ಎಂದು ತಾ ಕಳೆದ ಬಾಲ್ಯದ ನೆನಪನ್ನ ಕಣ್ಣು ಕಟ್ಟುವಂತೆ ವರ್ಣಿಸುತ್ತಾನೆ. ತಾನು ಚೋಮ್ಲವ್ವ, ದರಸಪ್ಪನ ಹೆಂಡತಿ ಮರಗವ್ವ ಸಣ್ಣವರಿರಬೇಕಾದರೆ ದನ ಕಾಯಲು ಹೋದಾಗ, ಅವರಲ್ಲಿ ನಾನೇ ಸಣ್ಣವ ಅವರು ನನ್ನ ಮರ್ಮಾಂಗದ ಮೇಲೆ ಬೋಕಿ ಬಿಲ್ಲಿಯನಿಟ್ಟು, "ಕೊಡೋ ನಮ್ಮಪ್ಪ ಮರಗ್ಗಿರ ಕೊಟ್ಟೆವರ, ನನಗ ಕೊಡವಲ್ಲಿ". ಎಂದು ಏನೋ ವಿಚಿತ್ರ ಆಟ ಆಡ್ತಿದರಂತೆ ಅದು ನನಗ ಈಗ ತಿಳಿವಲ್ಲು ಏನಂತ, ಆದ್ರ ಮರಗವ್ವ  ಮನ್ನೆ ಮನ್ನೆ ಸತ್ತಳು ಪಾಪದ ಹೆಂಗಸು, ಎರಡ ಹೆಣ್ಣ ಬೊಡಿಗಳಿದ್ದವು ಪಾಪ ಅವಕ್ಕೂ ಸರಿಯಾಗಿ ದಾರಿ ತೊರಿಸಲಿಲ್ಲಾ. ಅವು ಯಾರ ಯಾರದೋ ಹಿಂದ ತಿರಗ್ತಾವ, ಇನ್ನ ಚೋಮ್ಲವ್ವಗಂತು ಮಕ್ಕಳೇ ಆಗಲಿಲ್ಲಾ ಬಿಂಗ್ಯಾನೂ ಸತ್ತದತ್ತಕ ತಗೊಂಡ ಮಗ ಮೂಸಿ ನೋಡವಲ್ಲಾ. ಬಿಂಗ್ಯಾ, ಯಾವಳನ್ನೊ ಕರಕೊಂಡು ಬಂದು ಇಟಕೊಂಡಿದನಂತೆ ಅವಳ ಮಗ ಅದೇನೋ ನೌಕರಿ ಮಾಡ್ತಾನಂತ ಅವನಾದರೂ ಬಂದು ನೋಡಬಾರ್ದ. ಹಿಂಗ ಕಣಪ್ಪ ವಯಸ್ಸಾದ ಮೇಲೆ ಈ ಜೀವ ಯಾರಿಗೂ ಬ್ಯಾಡ ಅಕೈತಿ. ದುಡಿವಾಗ, ದುಡದು ದುಡದು ನನ್ನ ಮಗನ ಸಲುವಾಗಿ, ನನ್ನ ಸೊಸಿ, ನನ್ನ ಮೊಮ್ಮಗನ ಸಲುವಾಗಿ ಎಂದು ರಟ್ಟೆಯೊಳಗಿನ ಕಸು ಹೋಗೋ ವರಿಗ ದುಡದು ದುಡದು ಎಲ್ಲಾದನ್ನೂ ದುಂಡಗ ಮಾಡಿದ್ವಿ, ಆದ್ರ ನಾನು ದುಡದಿದ್ದು ಈ ಕಾಲಕ್ಕ ನನಗ ಉಣ್ಣಾಕ ಬಾಯಿ ಇಲ್ಲಾ, ಹೂಂ ಎಂದು ನಿಟ್ಟುಸಿರ ಬಿಟ್ಟು.

ಬೂತ ಕಾಲದ ನೆನಪುಗಳನ್ನ ಮೆಲಕು ಹಾಕ್ಕೊಂತ ಬದಕೀನಿ ತಮ್ಮ ಎಂದು, ಆತ್ಮಿಯವಾಗಿ ಮಾತನಾಡುವ ಮುದುಕ ಗ್ರಹಣ ಹಿಡಿದ ಬದುಕಿಗೆ ಚಾಲನೆ ಕೊಡಲು ತವಕಿಸುತ್ತಾನೆ. ಹರೆಯದ ಹುಡುಗರನ್ನ ಸೇರಿಸಿ ಕೋಲು ಭಜನೆ ನಾಟಕದ ಹವ್ಯಾಸ ಹುಟ್ಟಿಸಲು ಹಂಬಲಿಸಿ, ಅವು ನಿರಾಸಕ್ತಿ ತಳಿದಾಗ ಅದರ ಹಿನ್ನೆಲೆಯನ್ನ ಹುಡುಕಲು ಹವಣಿಸುತ್ತಾನೆ. "ಎ ನಿನ್ನೆ ದ್ಯಾವೂಣಗೇರಿಗ ಸಿನೀಮಾ ನೋಡಾಕ ಹೋಗಿದೆವು ಬಿಡಜ್ಜ ಈ ಕೋಲ ಪಾಲು ನಮಗ್ಯಾಕ" ಎಂದ ಗಣೇಶಿನ ಬೆನ್ನಲ್ಲಿ ಬಾಸಾಳ ಬರೋ ಹಂಗ ಹೊಡಿಬೇಕು ಅನಸ್ತು, ಆದ್ರ ಅವನು ತಿರುಗಿ ಹೊಡದಾನು ಅನೋ ಕಲ್ಪನೆಯಿಂದ, "ಒಳ್ಳೆ ಕೆಲಸ ಮಾಡಿರಲೇ ತಮ್ಮಾ" ಎಂದು ಸುಮ್ಮನಾದ. ಈ ಜನ್ಮದಾಗ ಉದ್ದಾರ ಆಗೋದಿಲ್ಲಾ ಒಂದ ಸಲಾ, ಬೆಳೆಯೆಲ್ಲಾ ಇಳ್ಳೆ ಹಂಗಾಮಿಗ ಬಂದಾಗ ಮಳಿ ಕೈಕೊಡ್ತು.

ಮಂದಿ ಕಂಗಾಲಾದ್ರು, ನಾನು ಭಾಗ್ಯ, ಭೂರ್ಯ, ಸೇರಿಕ್ಕೊಂಡು ಹನಮನ ಕರದು ವಿಚಾರ ಮಾಡಿ ಕಟ್ಟುನಿಟ್ಟಾಗಿ ಬಜನೆ ಮಾಡೋದು ಅಂತ ತಿರ್ಮಾನ ಮಾಡಿದ್ವಿ, ಹನಮಂತ ದೇವರ ಗುಡಿಯೊಳಗ ನಾಕ ನಾಕ ದಿನ ಉಪಾಸ ಇದ್ದು ಕಟ್‌ಭಜನಿ ಮಾಡಿದ್ವಿ, ತಗೋ, ಧೋ....ಧೋ ಅಂತ ಮಳಿ ಸುರಿತು. ನಮ್ಮ ಮನಸು ಸ್ವಚ್ಛ ಇದು ಸ್ವಾಮಿನ ಭಜಿಸಿದ್ರ, ಖಂಡಿತಾ ನಮ್ಮಕೈ ಬಿಡೋದಿಲ್ಲಾ ಮಳಿ ಸುರಿತಿದ್ರ, ನೋಡಂಗ ಒಂದ ಛಂದ ಆನಂದ ಆ ಕಾಡು ರಾಶಿರಾಶಿ ನವಿಲು ಗುಬ್ಬಿ ಗೊರವಂಕಗಳು, ಪುತುಪುತು ಅಡ್ಡಾಡೋ ಮೊಲಗಳ ಸಾಲು, ಸಣ್ಣ ಸಣ್ಣ ಗುಂಡಿಯೊಳಗ ಪುಳು ಪುಳು ಎನ್ನುವ ಮೀನು ಈಗ ಬರಿ ಕನಸಿನ ಮಾತು. ಈಚಲು ಬತ್ತಿಮರ, ತಾಳೆಮರ ಯಾವಗೋ ಹಾಳಾದವು ಊರ ಮುಂದಿನ ಗೋಮಾಳ, ಜೋಕನಕಟ್ಟಿ, ಕಿರುಬನ ಕಟ್ಟಿ, ದೊಡ್ಡ ದೊಡ್ಡ ಮಾಳಿಗಳನ್ನ, ಜನ ಹೊಡದು ಬಿತ್ತಾಕ ಸುರು ಮಾಡ್ಯಾರ. ಇನ್ನ ಈ ಕೆರಿ, ಏಳು ಕರಿ ಹೊಡದು ನೀರ ಬಂದ್ರು ಇದು ತಡದಿತ್ತಂತ. ಹಿಂದ ಒಂದ ಸಲಾ, ಮದವಿ ದಿಬ್ಬಣ ಹೊಂಟಿತಂತ, ಮಳಿ ಯಾವಾಗಲೊ ಆರಂಭವಾಗಿತ್ತು. ಹಳ್ಳ ಸ್ವಲ್ಪ ಇರಬಹುದೆಂದು ಇಳಿದಿರಬೇಕು ಇಡಿ ದಿಬ್ಬಣಕ ದಿಬ್ಬಣಾನೇ ಹೆಣದ ರಾಶಿಯಾಗಿ ಕೆರಿಯೊಳಗ ತೇಲತಿತ್ತು. ಇವತ್ತು ಹಾಳು ಹಾಳ ಸುರಿಯಾಕ ಹತ್ಯೆತಿ. ಮಂಚ ಎತ್ತು ಎಮ್ಮಿಗಳಂತೆ ಮೆಲಕು ಹಾಕುತಿದ್ದ. ಮಧ್ಯ ಮಧ್ಯ ಹೇಮರೆಡ್ಡಿ ಮಲ್ಲಮ್ಮ, ಇಲ್ಲಾ ಲವ-ಕುಶ, ನಾಟಕದ ಸನ್ನಿವೇಶಗಳನ್ನ ಹಾಡಿ ಥಾಡಿ ಹೇಳುತ್ತಿದ್ದ. ಎಂಬತ್ತೈದು ವರ್ಷದ ತನ್ನ ನೆನಪುಗಳು ತನ್ನೊಳಗೆ ಕೊರೆಯುತ್ತಿದ್ದಿದನ್ನ ಸಹಿಸದೆ ಚಡಪಡಿಸಿ, ಒಂದೇ ಸಲಕ್ಕೆ ಉಸುರಿದ್ದ. ಮಕ್ಕಳು ಆಸ್ತಿಯನ್ನ ಮಾರಿ ಬದುಕಲು ಪ್ರಾರಂಭಿಸಿದಾಗ, ಮುದುಕ ತಾನು ಯಾರ‍್ಯಾರದೋ ಮನೆಯಲ್ಲಿ ಬಿಕ್ಷೆ ಬೇಡಿ ಉಂಡು, ದುರಗವ್ವನ ಮಡಿಲಿಗೆ ತಲೆಇಟ್ಟು "ಅವ್ವ ಮಹಾತಾಯಿ ಇನ್ನೂ ಎಷ್ಟು ದಿನಾಂತ ಈ ಪಾಪದ ಪ್ರಪಂಚವನ್ನ ಕಣ್ಣಾರೇ ನೋಡಿ ಕೊರಗಲು ಬದುಕಿಸಿದ್ದಿ ತಾಯೇ ಕಣ್ಣು ಮುಚ್ಚಿಸಿ ಬಿಡವ್ವ" ಎಂದು ಬೇಡಿಕೊಳ್ಳುತ್ತಿದ್ದ. ಬದುಕಿನ ಏರಿಳಿವುಗಳನ್ನಾ ಹತ್ತಿ ಇಳಿದು ಸಾಕಾದರೂ ಹುಮ್ಮಸ್ಸು ಮಾತ್ರ ಹಾಗೇ ಇತ್ತು. ಚೊಂಚಜ್ಜ ಮಾತ್ರ ತನ್ನ ಹಳೆ ನೆನಪುಗಳನ್ನ ಕನವರಿಸುತ್ತಲೇ ಇದ್ದಾನೆ. ಅರ್ಥ ಮಾಡಿಕೊಳ್ಳದ ಮಕ್ಕಳ ಪಾಡನ್ನ ನೋಡಿ ಮಲಮಲ ಮರಗುತ್ತಾನೆ ಮತ್ತೆ ಬಾರದ ಆ ದಿನಗಳು ಈಗ ಬರಿ ನೆನಪುಗಳು ಎಂದು ತಿಳಿದಾಗ ಬೇಗ ಈ ಬದುಕಿನಿಂದ ಬಿಡುಗಡೆ ಪಡೆಯಲು ಬಡಿದಾಡುತ್ತಾನೆ ಆದರೆ ಸಾವು ಮಾತ್ರ ಅವನನ್ನ ಹತ್ತಿರಕ್ಕೆ ಕರೆಯುತ್ತಲೇ ಇಲ್ಲಾ.

❖

## ೧೩. ಕನಸಿನಾಚೆಯ ಕಳವಳ

ಅರ್ಧಸುಟ್ಟಿದ್ದ ಹಸಿ ಮೆಣಸಿನಕಾಯಿಯನ್ನ ಹುಳ್ಳಿ ಮಳಕಿ ಸಾರು, ಒಂದಿಂಚು ಹೆಪ್ಪು ಕಟ್ಟಿಕೊಂಡ ಮುದ್ದಿ ಜೊತಿಗ ಕಿವುಚ ತೊಡಗಿದ ಡೊಕಳಿಯಾ ಅವನ ಒಡಕು ಸಿಲಾವಾರಿನ ತಾಟಿಂದ ಸಾರು ಸೋರಿ ಹೊಂಟಿತ್ತು. ಇಡಿ ಹಾಸ್ಟಲಿನೊಳಗ ಉಳದಿದ್ದೋರು ಅಂದ್ರ ಎಸಲ್ಸಿ ಹುಡ್ರು, ದೂರದ ಊರಿನವರು ಉಗಾದಿ ಹಬ್ಬ ಬಿಟ್ಟು ಪರೀಕ್ಷೆ ಬರಿಯಾಕಂತ ಉಳಕೊಂಡಿದ್ರು. ಹ್ವಾದ ಸಲಾನು ತಪ್ತು, "ಆಟ ದೂರ ಮತ್ತೇನ ಬರ್ತಿ ಮಗ ನಾವೇನು ಉಗಾದಿ ಮಾಡಂಗಿಲ್ಲಾ, ಹಾಸಲಾಗ ಹಾಕೋದ್ದನ್ನ ಹೊಟ್ಟಿ ತುಂಬ ಉಂಡು ಇರು" ಅವನಪ್ಪ ಬಾಬುರಿ ಹೇಳಿದ್ಕ, ಮುಂಚಿನ ವರ್ಷ ಲಗೋರಿಯೊಳಗ ಬೆನ್ನು ಉರಿಯೋ ಹಂಗ ಹೊಡದಿದ್ದ ಅವನ ಶತ್ರು ಮ್ಯಾಗಿನೋಣಿಯ ಮಾದ್ಯಾನ ಬೆನ್ನನರ ಮುರಿಯೋ ಯೋಚನೆ ಬಿಟ್ಟು ಪರೀಕ್ಷ ವಾರ ಮುಂದಿದ್ರು ಹಾಸ್ಟಲ ಬಿಡಲಿಲ್ಲಾ. "ಯಾಕರ ಈ ಪರೀಕ್ಷ ಉಗಾದಿ ಟೈಮಿಗ ಬರತೈತೋ" ಅಂದ ಕಾಳ ಹಾಸ್ಟಲಿನ ಎಲ್ಲಾ ಹುಡುಗರ ಟ್ರೆಂಕಿನ ಬೀಗ ಮುರದು ರೊಟ್ಟಿ, ಚಟ್ನಿ, ಚೂರು ಪಾರು ಕಾಸು ಎಗರಿಸುತ್ತಿದ್ದ ನಿಪುಣ. ತಟ್ಟಿ ಮೇಷ್ಟ್ರು, "ಲೇ ನೀವೇನ ಓದತೀರೋ, ಇಡಿರಾತ್ರಿ ಕುಂತ ಓದೋನಂದ್ರ ಕಾಳ ಒಬ್ನೆ ಅವನೊಬ್ಬನೆ ಪಾಸಾಗೋದು" ಅಂತ ಬಾಕಿ ಹುಡ್ರಿಗ ಹೆದರುಸುತ್ತಿದ್ದ. ಮುದ್ದಿಯನ ಮುರಿಯಾಕ ಪ್ರಯತ್ನಿಸಿದ ಹೆಪ್ಪು ಸುಲಭವಾಗಿ ಬರೋ ಹಂಗ ಕಾಣಲಿಲ್ಲಾ. ಒತಟ್ಟಿಗ ಬೆಳ್ಳ ಹಾಕಿದವನೆ ಎಬ್ಬಿ ಜೋರಾಗಿ ಎಳದ. ಅರ್ಧ ಮುದ್ದಿ ಅದರ ಜೊತಿಗ ಬಂತು, ಹಾ ದೊಡ್ಡ

ಹೊಳಗಿ ನೋಡ್ರಲೇ ಇವತ್ತು ಹೊಳಗಿ ಹಬ್ಬ ಅಲ ಮಂದಿ ಊರಾಗ ಹೊಳಗಿ ತಿನ್ನಾಕ ಹತ್ತಿರಬೇಕು, ಅಂದವನೆ ಸಾರಿನ್ಯಾಗದ್ದಿ ಹೊಳಗಿ ಅಂದ್ಕೊಂಡ ತಿನ್ನ ತೊಡಗಿದ.

ಹುಡ್ರೆಲ್ಲಾ ಹಾಸ್ಟಲಲ್ಲೆ ಸಾವುಕಾರನಾದ ಬಸವನ ಹಿಂದ ಹೊಂಟಿದ್ರು, ಊರಿಂದ ಅವರಪ್ಪ ಹೊಳಗಿ ತಗೊಂದು ಬಂದಿದ್ರು, ಬಸವ ಯಾರಿಗೂ ಕೇರ್ ಮಾಡದೆ ಖುಷಿಯಿಂದಲೇ ಹೊಂಟಿದ್ದ. ಹೊಳಗಿ ವಾಸನಿ ಘಮ ಅಂತ ಮೂಗಿಗ ಅಡರಿತ್ತು ಆಜು ಬಾಜಿನ ರೂಂ ಹುಡ್ರೆಲ್ಲಾ ವಾಸನಿ ಹಿಡ್ಕೊಂಡು ಅಂವ ಹೊಳಗಿ ಕೊಡದಕ್ಕೆ ಗಲಾಟಿ ಮಾಡ್ಕೊಂತ ಬರ್ತಿರೋದನ್ನ ಕೇಳಿದ ಅಣ್ಣಿ ವಾರ್ಡನ ಅಪ್ಪ "ಎ ದನವೆ ನಿಮ್ಮಪ್ಪಂದೇನೊ ಬಾಗಲ ಮುರದ್ರ ಯಾವಾನ ಕೊಡ್ತಾನ, ಕದಮುರ್ದಿಯಲೇ" ಅಂತ ಕೂಗಿಕೊಂಡ ಬಂದಿದ್ಕ, ಎಲ್ರೂ ಓಡಿದ್ರು. ಡೊಕೊಳಿಯಾ ಮಾತ್ರ ಮಾರನೇ ದಿನ ಇರೋ ವಿಜ್ಞಾನ ಪುಸ್ತಕ ತಕೊಂಡು ಓದ ತೊಡಗಿದ. ಬೇರು ಕಾಂಡ, ಅಪದಮನಿ, ಅಭಿದಮನಿ ಏನೊಂದರ ತಲಿ ಬುಡಾನೇ ಅರ್ಥ ಆಗಲಿಲ್ಲಾ. ಊರೊಳಗ ನಡಿಯೋ ಉಗಾದಿ ಹಬ್ಬ ಆಗೊ ಪರಿ ನೆನಪಾಗ ತೊಡಗಿತು. ಮದಲ ದಿನ ಅಮಾಸಿಗ ದ್ವಾಸಿ ತ್ವಾಗಿ ವಡ್ರಾಗಿ ಹಿಟ್ಟಿನ ದ್ವಾಸಿ ಮೆತ್ತ ಮೆತ್ತಗ ಏನ ಹಿತ ಅಂತಿ, ಮಾರನೇ ದಿನ ಮನಿ ಮುಂದಿನ ಗುದ್ದಮನ ಕಟ್ಟಿ ಬೇವಿನ ಗಿಡದಾನ ಬೇವಿನ ತಪ್ಪಲು ತಗೊಂದು ಬೇವಿನ ಹೂ ಹರದು ಬೆಲ್ಲಾ ಹಾಕಿ ಬೇವು ಬೆಲ್ಲ ಮಾಡೋದು ತಪ್ಪಲ ಹಾಕಿ ಉಗರ ಬೆಚ್ಚನ ನೀರು, ಸ್ವಾರಿಗ ಸುರಕೊಂಡು ತಪ್ಪಲು ಹಾಕ್ಕೊಂದು ಜಳಕ ಮಾಡಿಂದ ಒಡ್ರಾಗಿಲೇ, ಒತ್ತಿ ಶಾವಿಗಿ, ಬೆಲ್ಲದ ನೀರು ಕಲಿಸಿ ತಿಂದ್ರ, ಏನ ಮಜಾ ತುರಾ ಮುಚ್ಚಿ ಆಡಾಕ ರೊಕ್ಕ ಇಲ್ಲದಕ್ಕ ಕಳದ ಸಲ ಅವ್ವ ಕೊಂಡ ತಂದಿದ್ದ ರಾಗಿ ಗಂಟನ್ನ ಬಿಚ್ಚಿ ಅಂಗಿಯೊಳಗ ಹಾಕೊಂದು ಓಡಿ ಹೋಗೊ ಮುಂದ ಅಪ್ಪ ಬಂದಿದ್ಕ ಗರ್ಕಂತ ನಿಂತಿದ್ದೆ ಹೊಳ್ಳಿ ಮನಿ ಸೇರಿದ್ದು, ಡೊಕಳಿಯ ಬೆವತ್ತಿದ್ದ. ಬಸವ ಒಳಗ ಬಂದವನೆ, "ಬಾರಲೇ ಡೊಕಳಿಯ ಒಂದರ್ಧ ಹೊಳಗಿ ಕೊಡ್ತೇನಿ ನಮ್ಮಪ್ಪ ಬಂದು ಊರಾಗ ಅದೇನೊ ಕೆಲ್ಸ ಐತಂತ ಕರ್ನಾಟಕ ಬಸ್ಸಿಗ ಹ್ವಾದ, ನೀ ಮಗನ ನನ ಪಕ್ಕದ ಊರಿನೋನು, ನಿಂಗ ಬಿಟ್ಟುತಿಂದ್ರ ಹ್ಯಾಂಗ, ಆದ್ರ ಬೋಳಿ ಮಕ್ಕಳು ನಾಯಿ ಹಂಗ ಕಾಯಾಕ ಹತ್ಯಾರ ಲೇ ಹೊರಗ ಆಮ್ಯಾಲ ಯಾವನೂ ಇಲ್ದಾಗ ಕೊಡ್ತೇನಿ" ಅಂದ. ಡೊಕಳಿಯಾನ ಬಾಯಿಯೊಳಗ ನೀರಾಡಾಕತ್ತು. ಆದ್ರ ನಿರಾಶೆ ಆದ್ರೂ ತೋರಿಸಿಕೊಳ್ಳದೆ, "ತಿನ್ನಾನಂತ

ಬಿಡು", ಅಂತ ಗೋಣಿ ತಟ್ಟು ಹಾಸ್ಕೊಂಡು ಮಲಗಿದ. ವಿಜ್ಞಾನ ಪುಸ್ತಕ ಮಕಕ ಅಡ್ಡ ಹಿಡಕೊಂಡು ಮನುಷ್ಯ ದೇಹದ ರಚನೆ ಕುರಿತು ಓದ ತೊಡಗಿದ. ನಿದ್ದಿ ಅದ್ಯಾವಗೋ ಬಂದಿತ್ತು, ಕನಸಿನೊಳ ಹೊಳಗಿ ಹಿಡದು ಮಂದಿ ಉಧೊ, ಉಧೋ ಅಂತೇಳಿ ತಾಳಿಮರದ ದುರ್ಗವನ ಗುಡಿಕಡಿಗ ಓಡಿ ಹೊಂಟಿದ್ರು, ಒಂದು ಕುಡಕಿ, ಅದ್ರಾಗೊಂಡ ತುಂಡು ಕೆಂಪು ಅರವಿ ಚೂರು ಒಂದು ಖಾರಿಕ ಐದ ಪೈಸಾ ರೊಕ್ಕ ಎಲ್ಲಾನು ಪತ್ರಾವಳಿ ಎಲಿ ಮ್ಯಾಲ ಹಿಡಕೊಂಡು ಗುಡಿ ಮಟ ಓಡಿದವರೆ, ಬನ್ನಿ ಪತ್ರಿ ಗಿಡದ ಬುಡದಾಗ ಇಟ್ಟಿದ್ದೆ ಓಡಿದರು, ತಾಳಿಮರದ ತಾವ ಹೊಂಚ ಹಾಕ್ಕೊಂದೆ ಕುಂತಿದ್ದ ದನ ಕಾಯೋರು, ಕುರಿ ಕಾಯೋರು, ಕಟಗೀಗ ಬಂದೋರು ಕೂಲಿ ಕೆಲಸಕಂತ ಬಂದವರೆಲ್ಲಾ ಹೊಳಗಿ ತಗೊಳಾಕಂತ ಮುಗಿ ಬಿದ್ರು ಥೋಕಳಿಯಾ ಅವೇಷದಿಂದಅವರ ನಡಕ ನುಗ್ಗಿದ ಮಂದಿ ನಾಮುಂದ ನೀಮುಂದ ಅಂತೇಳಿ ನುಗ್ಗಿದ್ರಾಗ ಎಲ್ಲಿ ಬಂದ್ನೋ ಥೊಕಳಿಯ ಎಲ್ಲರ ಕಾಲೊಳಗ ಸಿಕ್ಕಾಕಿಕೊಂಡಿದ್ದ. ಕೈಯಾಗ ಬಾಚಿಕೊಂಡಿದ ಹೊಳಗಿ ಹಂಗೆ ಇತ್ತು ಉಸರ ಮಾತ್ರ ಎದಿಯೊಳಗ ಸಿಕ್ಕಾಕಿಕೊಂಡಿತ್ತು. ಗಡಬಡಿಸಿ ಎದ್ದ, ಎದಿಮ್ಯಾಲ ಪುಸ್ತಕ ಬಿದ್ದಿತ್ತು ಅವಕಾಶ ಸಿಕ್ರ ಬರಿಯಾಕಂತ ಮಾಡಿ ಇಟ್ಟಿದ್ದ ಕಾಫಿ ಚೀಟಿಗಳೆಲ್ಲಾ ಪಕ್ಕದಾಗ ಬಿದ್ದಿದ್ವು "ಎಂಥ ಕನಸ ಮರಾಯಾ" ಆಕಳಿಸಿದ, ಪುಸ್ತಕ ಮಡಿಚಿಟ್ಟು "ಈ ಹಬ್ಬಗಳು ಯಾಕಾರ ಬರ್ತಾವೋ, ನಮ್ಮಂತ ಬಡಮಂದಿ ಮನಿಯೊಳಗ ಓಲಿ ಹೊತ್ಸಾಕ ಏನೂ ಇರೋದಿಲ್ಲಾಂತ ಅದಕ್ಕ ಗೊತ್ತೆ ಆಗೋದಿಲ್ಲಾ." "ಅಜ್ಜಿ ಹಬ್ಬ" ಎದ್ದವನೆ ಕಿಟಕಿಯಾಚೆ ನೋಡಿದ, ಹಂದಿಯೊಂದು ಕಾಗದಗಳ ರಾಶಿ ನಡುವೆ ಮೂತಿ ತೂರಿಸಿ, ಕಾಲೇಜು ಹಾಸ್ಟಲಿಂದ ಸಾಂಬಾರು ತಂದು ಉಂಡರಾತು ಅಂತೇಳಿ ಭಟ್ಟನಿಗೆ ರಿಕ್ವೆಷ್ಟ್ ಮಾಡಿಕೊಂಡು ತಂದಿದ್ದ ಮುದ್ದಿ, ಸಾಂಬಾರು ಸಿಗದಕ್ಕ ಅಲ್ಲಿ ಬಿಸಾಕಿದ್ದು ನೆಪ್ಪಾತು. "ಹೈ ತ್ ಹೈತ್ ಥು." ಗದರಿಸಿದ, ಕನಸು ನೆನಪಾತು ನಾನು ಹಿಂಗೆ ಅರಬಾಡಿಸಿ ಹೊಳಗಿ ಬಾಚಿಕೊಂಡಿದ್ದೆ. "ನಾಳೆ ಪರೀಕ್ಷೆ ಪಾಸಾದ್ನೆಪ್ಪ ಅಂತಂದ್ರ ಇಂಥ ಹೊಳಗಿ ಹೊಟ್ಟಿ ತುಂಬ ಉಂಡೇನು, ನಮ್ಮಪ್ಪ ಅವ್ವ ಅಂಡ ಮುರದು ದುಡದು ನಾಕೆಂಟಣಿ ಕೊಡ್ತಾರ ಅವರ ರಿಣಾ ತೀರಿಸಾಕಾರು ನಾನು ಓದಬೇಕು" ಅಂದವನೆ ಪುಸ್ತಕ ತಗೊಂದು ಜೋರಾಗಿ ಪ್ರಶ್ನೆಗಳನ್ನ ಕಂಠಪಾಠ ಮಾಡತೊಡಗಿದ. "ಈ ಅಮೀಬಾದ ಚಿತ್ರ ಥೇಟ್ ದೊಡ್ಡ ಹೊಳಗಿ ತರಾನೆ ಐತಿ" ಅಂದ್ಕೊಂತಲೆ ಬಾಯಿ ಪಾಠ ನಡಸಿದ.

ಹುಡ್ರೆಲ್ಲಾ ಹರಕು ಅಂಗಿಯನ್ನೆ 'ಇನ್ಸರ್ಟ್' ಮಾಡ್ಕೊಂದು ಚಂದಪ್ಪನ್ನ ನೋಡಿ ಅವರಿಗ ಗೊತ್ತಿರೋ ಮನಿಗಳಿಗ ಹೋಗಿ ಹಿರಿಯರ ಕಾಲಿಗ ಬಿದ್ದು ಅವರು ಕೊಟ್ಟ

ಚೂರುಪಾರು ಹೊಳಗಿ ರುಚಿನೋಡಿ ಬರ್ತಿದ್ರು, ಒಂದೂರ ಕ್ಯಾಂಪ ಬಂಬೂ ಬಜಾರದಾಗ ಶೇಂಗಾ ಮಾರ್ಕೆಟನೊಳಗ ಹಮಾಲಿ ಮಾಡೊ ಕೆಲವರು ಹುಡ್ರಿಗ ಸಂಬಂಧಿಕರಾಗಿದ್ದರಿಂದ ಒಬ್ಬೊಬ್ಬರೆ ಪರೀಕ್ಷೆಯನ್ನೂ ಲೆಕ್ಕಿಸದೆ ಹೊಳಗಿ ರುಚಿ ನೋಡಾಕ ಹೊಂಟ್ರು, ತನ್ನ ಸಂಬಂಧಿಕರು ಯಾರೂ ಇಲ್ದಿದ್ರು ಯಾವುದಾರ ಹುಡ್ರಕೂಡ ಹೋಗೊ ವಿಚಾರ ಬಂತು. ಅವರ ಹೋಗಲಿ ಬಿಡು ಬಸವನತಾವ ಕೇಳಿ ಒಂದ ಹೊಳಗಿ ತಿಂದರಾತು, ಉಗಾದಿ ಹಬ್ಬದ ಆಚರಣೆ ಮಾಡಕೊಂಡಂಗಾರ ಆಕೈತಿ, ಅಂತ ನಿರ್ಧಾರ ಮಾಡಿಕೊಂಡ, ಹೋಗೋರನ್ನೆಲ್ಲಾ ನೋಡ್ತಾ ನಿಂತ ಬಸವ ಅವಾಗ ಹೊಳಗಿ ಕೊಡ್ತೀನಿ ಅಂದೋನು, ಮಂಗ್ಯಾನ ಮಗ ಎಲ್ಲರಿಗಿಂತ ಮುಂಚೆ ಹೊರಟ ನಿಂತಿದ್ದ, "ಹೊಗಲಿ ಮಗ ಅವನ ಟ್ರಂಕಿನ ಬೀಗ ಹೆಂಗಾರು ಬರತೈತಿ ತಗದು ತಿಂದ್ರಾತು" ಅಂತ ಪ್ಲಾನ್ ಮಾಡಿದವನೆ ಎಲ್ಲರೂ ಹೋಗೊವರಿಗ ನೀರ ಕಡಿಗ ಹೋದ.

ಕೈ ಕಾಲು ನಡಗಾಕ ಹತ್ತಿದ್ವು, ಗೇಟಿನ ತನಕ ಬಂದು ನೋಡಿದ ಯಾರು ಕಾಣಲಿಲ್ಲಾ. ವಾರ್ಡನ್ ಅಣ್ಣಿಯ ಅಪ್ಪ ಪೆಪ್ಪರಮೆಂಟ್ ಚಿಪ್ಪೊಂತ ಚಸ್ಮಾ ಹಾಕೊಂಡು ತರಪರಾಂತ ಪೇಪರ ಓದಾಕ ಹತ್ತಿದ್ದ. ಆತನ್ನ ಬಿಟ್ರ ಮತ್ಯಾರು ಇರ್ಲಿಲ್ಲಾ, ಬಸವನ ರೂಮಿಗ ಹೊದವನೆ ಕದ ಹಾಕಿದ, ಕಿಟಕಿ ಮುರದಿದ್ದು, ಮರಿ ಮಾಡಿದ, ಎದಿ ಡವ ಡವ್ ಅಂತ ಬಡಕೊಳ್ಳಾಕ ಹತ್ತು ರೂಪಾಯಿ ಕದಿದ್ದು. ಹಿಂದಕ ಅವನವ್ವ ಅಂಗಡಿ ಇಟ್ಟಾಗ ಒಂದೊಂದರ ಗಟ್ಟಿಗಳನ್ನ ನೆಲ್ದಾಗ ಹುಗಿದಿದ್ದ ಕುಡಕಿಯಿಂದ ಕದ್ದದ್ದು ನೆನಪಾದ್ವು, ಸಣ್ಣಗ ಬೆವತ್ತಿದ್ದ, "ಛೆ ಯಾಕೋ ಧೈರ್ಯ ಸಾಲದು, ಅಡಕಿಗ ಹೋದ ಮಾನ ಆನಿಕೊಟ್ರೂ ಬರಂಗಿಲ್ಲಂತ ಪಾಂಡರಂಗ ಮೇಷ್ಟ್ರ ಹೇಳಿದ್ರು" ತಾನೊಬ್ಬನೆ ಮಾತಾಡಿಕೊಳ್ಳ ತೊಡಗಿದ. ಕೈ ನಡಗ ತೊಡಗಿತು ಬಾಗಲ ತಗದ ಹೊರಗ ಹೋಗಿ ನೋಡಿದ. ಕಾಂಪೊಂಡ ಗ್ವಾಡಿ ಮ್ಯಾಲ ಕುಂತ, "ಥೂ ನಾನು ಅವರಕುಟಾಗ ಹೋಗಿದ್ರ ಚೂರಪಾರು ಉಗಾದಿ ಹೊಳಗಿ ರುಚಿ ನೋಡಿ ಬರ್ತಿದ್ದೆ ಬಸವನ ಅಕ್ಕನ ಗಂಡ ಭೀಮನಾಯ್ಕ ಹಮಾಲಿ ಮಾಡ್ತಾನ ಅವರ ಮನಿಯೊಳಗಂತು ಖಂಡಿತ ಸಿಕ್ಕಿ ಸಿಗತಿತ್ತು." ಯೋಚನೆ ಮಾಡಿದ. ಮನಸು ತಳಮಳಿಸ ತೊಡಗಿತು ಮತ್ತೊಂದ ಸಲ ಒಳಗ ಬಂದ, "ಅಲ್ಲಾ ಹಾಸ್ಟಲಿನ್ಯಾಗ ಉಳ್ಕೊಂಡಿರೊನು ಅಂದ್ರ ನಾನೊಬ್ಬನೆ, ತಗದು ತಿಂದ್ರ ಎಲ್ರೂ ಸೇರಿ ಒದಿತಾರ, ಒಂದ ತಿಂದ್ರ ಯಾರಿಗೂ ಗೊತ್ತಾಗೊದೇ ಇಲ್ಲ" ಅಂದವನೆ ಗಟ್ಟಿ ಮನಸು ಮಾಡಿಕೊಂಡು ಬಾಗಲ ಹಾಕಿದ, ಜಾಮಿಟ್ರಿ ಬಾಕ್ಸಿನೊಳಗಿಂದ ತಂದಿದ್ದ ಡಿವೈಡರ್‌ನ್ನ ಮಡಚಿಕೊಂಡು ಬೀಗದೊಳಗ ಸೇರ್ಸಿದ, ಒಂದ ಸಲ ತಿರುವಿ ಬೀಗದ ಸಿಡಿಗ ತಾಗಿದ್ದೆ ಚಟಂತ ತಕೊಂತ್ತು. ಜೋರಾಗಿ ನಡಗ ತೊಡಗಿದ, ಚಿಲಕದೊಳಗಿಂದ ಬೀಗ ತಗದವನೆ,

ಟ್ರಂಕ್ ತೆರದ ಕಟರಂತ ಶಬ್ದ ಮಾಡ್ತು, “ಥು ಇವ್ನವ್ವ ಹಾಳ್ ಸೌಂಡ ಮಾಡತ್ತೈತಿ” ಅಂದವನೆ, ಮ್ಯಾಲಿದ್ದ ಹೊಳಗಿ ಗಂಟನ್ನ ಹೊರಗ ತಗದ. ಬಿಚ್ಚಿ ನೋಡಿದ ನಾಕ ದೊಡ್ಡಹೊಳಗಿಗಳಿದ್ವು, “ತಿನ್ನೋದು ಸಮಸ್ಯೆ ಆತಲ್ಲಾ ಅವನೇನಾರ ಎಣಿಸಿ ಇಟ್ಟು ಹೋಗಿದ್ರ? ಅವನಿಗೆಲ್ಲ ನೆನಪಿರಬೇಕ ಬಿಡು.” ಅಂದವನೆ ಒಂದ ಹೊಳಗಿ ತಗದು ಪಕ್ಕದ ಟ್ರಂಕಿನ ಮ್ಯಾಲಿಟ್ಟ. ಇನ್ನೇನು ಬಾಗಲಮುಚ್ಚಿ ಬೀಗ ಇಕ್ಕಬೇಕು ಯಾರೋ ಬಾಗಲ ಬಡದಸದ್ದು ಡೊಕಳಿಯಗ ಜೀವ ಹೋದಂಗಾತು.



# ೧೪. ಸೇಡು

ಅದೊಂದು ಕಾರ್ತೀಕದ ಸಂತೆ ಇವತ್ತಿಗೆ ಸುಮಾರು ಹತ್ತು ವರ್ಷಗಳಾಗಿರಬಹುದು. ಹಕ್ಕಿಗಳು ಗೂಡು ಸೇರಲು ತವಕಿಸುತ್ತಿದ್ದವು. ಊರ ಮುಂದಿನ ದೊಡ್ಡಮರದ ಮೇಲಣ ಜೋತಾಡುವ ಬಾವಲಿಗಳಂತ ಹಕ್ಕಿ ಮರಬಿಟ್ಟು ಹಾರಲನುವಾಗಿದ್ದವು. ಅಂದರೆ ಕತ್ತಲು ಬೆಳಕಿನ ಘರ್ಷಣೆ ಸುರುವಾಗಿತ್ತು, ದನಗಳು ಮನೆ ಬಂದು ಸೇರಿದ್ದವು. ಮಾಗಿಯ ಕಾಲವಾಗಿದ್ದರಿಂದ ಹಿತವಾದ ಮಳೆಯಾಗಿದಕ್ಕ, ತಗರಿ ಅಕ್ಕಡಿಯೊಳಗ ನೇಗಿಲು ಹೊಡದು, ಮುಂಗಾರಿಗಾಗಿ ಮಾಗಿ ಪ್ರಾರಂಭವಾಗಿತ್ತು. ಮಳೆ ಇಲ್ಲದೆ, ಮಳೆಗಾಳಿ ತಣ್ಣಗೆ ಬೀಸುತ್ತಿತ್ತು. ಅಂದು ಕಾರ್ತಿಕವಾಗಿದ್ದರಿಂದ ಊರ ಗುಡಿಗಳೆಲ್ಲಾ ದೀಪಗಳಿಂದ ಅಲಂಕೃತಗೊಂಡಿದ್ದವು. ಸಕ್ಕಿರಾಜನ ಬಜನಾಮೇಳ ಪ್ರಾರಂಭಿವಾಗಿತ್ತು. ಸಿದ್ದವೀರ ಮಾತ್ರ ಊರ ಉಸಾಬರಿಗೆ ಹೋಗದೆ ಮೈತೊಳೆಯಲು ಬಚ್ಚಲಿಗೆ ಇಳಿದಿದ್ದ. ವಾರದ ಹಿಂದೆ ಪ್ರಾಣ ಸ್ನೇಹಿತ ಪರಮೇಶಿ ಜೊತೆಗಾದ, ಮಾತಿನ ಚಕುಮುಕಿಯೊಳಗ ದಾರಿಕೊಪ್ಪ ಬಿಟ್ಟು ದಾವಣಗೇರಿ ಸೇರಾಕ ಎಲ್ಲಾ ಏರ್ಪಾಡುಗಳನ್ನ ಮಾಡ ಹತ್ತಿದ್ದ.

ಪತ್ತೂರ ಸಾಹುಕರ ನಂಜರೆಡ್ಡಿ ಮಗಳನ್ನ ಮದುವಿ ಆಗಿದ್ದ ಸಿದ್ದವೀರ ಸ್ಥಿತಿವಂತನಾಗಿದ್ದ. ಆರು ಅಡಿ ಎತ್ತರ ಎಣ್ಣೆಗೆಂಪು ಬಣ್ಣ. ಜೋಡುಗುಂಡಿಗೆ ಅದಾವು ಅದಕ್ಕ ಈ ಆಳು ಹಿಂಗೈತಿ ಅಂತ ಊರ ಮಂದಿ ಆಗಾಗ ಆಡಕೊಳ್ತಿದ್ರು. ಯಾರ ಗೊಡವಿಗೂ ಹೋಗದೆ ತನ್ನ ಪಾಡಿಗೆ ತಾನೆ ತನ್ನದೊಂದು ಲೋಕ ಸೃಷ್ಟಿಸಿಕೊಂಡಿದ್ದ ಸಿದ್ದ ವೀರ, ಅವಿಭಕ್ತ ಕುಟುಂಬ ವಿಭಜನೆಗೊಂಡ, ತನ್ನ ಹೆಂಡತಿಯೊಂದಿಗೆ ಬ್ಯಾರೆ



ಮನೆಯೊಳಗ ವಾಸವಾಗಿದ್ದ. ನಂಜೆಗೌಡ್ರು ಊರ ಮಂದಿಗ ಧಮಕಿ ಕೊಟ್ಟಾಗ ಊರ ಜನ ಯಾಪ್ಪ ಈ ದುಮ್ಮ್ಯಾನ ಸವಾಸ ಅಂತ, ಬಾಲ ಮುದರಿ ಕೊಂಡಿದ್ರ, ಸಿದ್ದವೀರ ಒಬ್ಬನೆ ಸೆಡ್ ಹೊಡೆದು ನಿಂತಿದ್ದ, ಗೌಡ್ರಿಗ ವಿರುದ್ದವಾಗಿ, ಅವನ ವ್ಯಕ್ತಿತ್ವಕ ಸಹಜವಾದ ಧೈರ್ಯ ಅವನತ್ರ ಇತ್ತು. ಆವಾಗಲೆ ಶಕುನಿ ಬುದ್ದಿ ಪರಮೇಶಿ ಸಿದ್ದವೀರನ್ನ ಸಂಗಾತಿಯಾದದ್ದು. ಗೌಡ್ರ ಹುಡುಗಿನ ಕೆಣಕಿ ಮೆಟ್ಟಿನೇಟು ತಿಂದಾಂಗಿಂದ, ಗೌಡ್ರ ವಿರುದ್ಧ ಆಗಾಗ ಪ್ರತಿಕ್ರೀಯಿಸುತ್ತಿದ ಪರಮೇಶಿ, ದಾರಿ ಕೊಪ್ಪದಲ್ಲೇ ಹೆಚ್ಚ ಜನರಿರೋ ಪಂಗಡಕ್ಕ ಸೇರಿದ ಸಿದ್ದವೀರ ಮತ್ತು ಪರಮೇಶಿ ಒಂದಾಗಿ ಗೌಡ್ರ ವಿರುದ್ದ ನಿಂತಿದಕ್ಕ, ಗೌಡ್ರು ಗುರ್ ಅನ್ನದಂಗಾದ್ರು, ಅಲ್ಲಿಂದ ಅವರಿಬ್ರನ್ನ ಮಂದಿ ಸಂಗ್ಯಾಬಾಳ್ಯ ಅಂತಾ ಕರಿಯಾಕ ಹತ್ತಿದ್ರು, ಸಿದ್ದವೀರ ಮನಿಕೆಲ್ಸಕ ನಿಂತಿಂದ. ಹೊಲಬೆಳದವು, ಮನಿತನ ಸುದಾರಸ್ತು.

ಅವಾಗಲೇ ಹನಮಿ ಪ್ಯಾಟಿಯಿಂದ ಬಂದು ಹದನೆಂಟು ವರಸದ ಮಗಳು ಲಕಮಿ ಜೊತಿಗ ಊರಾಗ ಟೆಂಟ ಹಾಕಿದ್ಲು ಊರ ಮಂದಿ ಬಾಯಾಗೆಲ್ಲಾ ಲಕಮಿಗೆ ಗುಣಗಾನ. ಅದೇ ತಾನೆ ಊರ ಜನರ ಬಾಯಿಯೊಳಗ ಪ್ರಸಿದ್ಧಿಯಾಗಿದ್ದ ಸಿದ್ದವೀರ ಪರಮೇಯರ ಸುದ್ಧಿ ಹನಮಿಗೆ ತಲುಪಿದಾಗ, ಗೌಡರ ಗುಂಡಿಗೆ ನಡುಗಿಸಿದ. ವೀರರನ್ನ ನೋಡುವ ಆಸೆ ಆತು, ತನ್ನ ಮಗಳ ರೂಪಕ್ಕ ಮಳ್ಳದ ಮಂದಿಸುದ್ದಿ ಮುಟಿಸ್ಯಾರು. ಇಂದಿಲ್ಲ ನಾಳೆ ಒಂದ ರಾತ್ರಿ ಅಳಿಯಂದರಾದರೆಂದು ನಂಬಿಕೊಂಡಿದ್ದಳು, ಅವರನ್ನ ಆಕರ್ಷಿಸಿಸಲು ಪ್ರಯತ್ನಗಳನ್ನ ನಡೆಸಿದಳು, ಸಿದ್ದವೀರ ಅಂತಹ ಸಹವಾಸಕ ಹೋಗುವನಲ್ಲವಾದರೂ ಲಕಮಿ ಯೌವ್ವನ ರೂಪದ ಮುಂದ ಅವನ ಮನಸು ಶ್ವಾಸ್ತ ಕಳಡದುಕೊಂಡಿತು ಅವನಿಗರಿವಿಲ್ಲದೇ ಹನಮಿ ಮನಿ ಅತಿಥಿಯಾಗಿದ್ದ. ಕದ್ದು ಮುಚ್ಚಿ ವ್ಯವಹಾರ ಬಹಳ ದಿನಗಳಿಂದ ನಡೆಯುತ್ತ ಬಂದಿತು. ಸಿದ್ದವೀರ ಲಕಮಿ ತನ್ನೊಬ್ಬನಿಗೆ ಮೀಸಲಿರಬೇಕೆಂದು ತಾಕೀತು ಮಾಡಿದ್ದ. ಆತ ಸಾವಕಾರ್‍ರ ನಿಮ್ಮಿಚ್ಚೆ ಅಂದಿದ್ಲು ಹನಮಿ.

ಒಂದು ದಿನ ಅಚಾನಕ್ ಪರಮೇಶಿ ಹನಮಿ ಮನಿಯಿಂದ ಹೊರ ಬಂದಿದ್ದ ನೋಡಿದ ಸಿದ್ದವೀರ, ಕೆಂಡಕಾರುತ್ತಾ ಹನಮಿಯನ್ನ ಕೊಂದು ಬಿಡುವಷ್ಟು ಸಿಟ್ಟಿನಿಂದ ವಿಚಾರಿಸಿದಾಗ ಗುಳ್ಳೆ ನರಿ ಬುದ್ಧಿ ಪರಮೇಶಿ, ತನ್ನ ಮಿತ್ರ ಸಿದ್ದವೀರನ ಗಳಕ್ಯಾತಿ ಲಕಮಿಯನ್ನ ನೋಡಿ ಬಿಡಲು ಹವಣಿಸಿ, ಹನಮಿಗ ಬೆದರಿಕೆ ಹಾಕಿದ್ದು ತಿಳದು ಸಿದ್ದವೀರ ಪರಮೇಶಿಯನ್ನ ಸಿಗದು ಬಿಡುವುದಾಗಿ ಹೇಳಿ ಹೊರಟ ಲಕಮಿ ತಡಿಯಲಿಲ್ಲಾ.

ಸಿದ್ದವೀರ ಅಂದೇ ಪರಮೇಶಿಗೆ ಎಚ್ಚರಿಕೆ ಕೊಟ್ಟ ಮಿತ್ರದ್ರೋಹಿ ಗೆಳೆಯನಿಗೆ ಮೋಸಮಾಡುವ ಮಂದಿ ನೀವು ಎಂದೆಲ್ಲಾ ಬಾಯಿಗೆ ಬಂದಂತೆ ಆಡಿದ್ದು ಪರಮೇಶಿಯ

ಸ್ವಾಭಿಮಾನಕ್ಕ ಧಕ್ಕೆ ತಂದಿತ್ತು. ಅಂದೇ ಪರಮೇಶಿ ಸಿದ್ದವೀರನ ಮ್ಯಾಲ ಹರಿ ಹಾಯ ತೊಡಗಿದ. ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದ. ಆ ಮಾತಿನ ಚಕಮುಕಿಯ ನಂತರವೇ ಸಿದ್ದವೀರ ಊರು ಬಿಟ್ಟ ಪಟ್ಟಣಕ್ಕೆ ಬಂದು ಮಾವನ ಸಹಾಯದಿಂದ ವ್ಯವಹಾರ ನಡೆಸುವ ಯೋಜನೆಯಲ್ಲಿ ಊರ ಮುಂದಿನ ಗದ್ದೆಯಲ್ಲಿನ ಬತ್ತ ಕೊಯ್ದು ಮಾರಿ ಎಲ್ಲವನ್ನು ವ್ಯಾಪಾರಕ್ಕೆ ತೊಡಗಿಸುವ ಯೋಜನೆಯಿಂದ ಬತ್ತದ ರಾಶಿ ಮಾಡಿಸಿದ್ದ.

ಸಂಜೆಯಾಗುತ್ತಿದ್ದರಿಂದ ಗಡಿಬಿಡಿಯಿಂದ ಸ್ನಾನ ಮುಗಿಸಿ, ಹೊರಡಲನುವಾದಾಗ ಎಡಗಣ್ಣೀಕೊ ಹಾರುತಿತ್ತು. ಹೆಂಡತಿ ಗಂಗವ್ವ ಇವತ್ತು ಯಾಕೋ ನನಗ ಹೆದರಿಕಿ ಆಗಾಕತ್ಯತಿ ಅಂದ್ರೆ, ಹೊಲಕ ಒಬ್ರ ಹೋಗಬ್ಯಾಡ್ರಿ ಅಂದ್ಲು. ಮೊದ್ಲಿಂದ್ಲು ದರ್ಪದಲ್ಲೆ ಬಂದಿದ್ದ ಸಿದ್ದವೀರ ಅವಳ ಮಾತನ್ನ ತುಂಡರಿಸಿ ಹೊಲ್ದಾಗ ಬತ್ತದರಾಶಿ ಹಾಕಿವಿ, ಯಾರರ ತುಂಬಕೊಂಡು ಹ್ವಾದರ ಗತಿ ಏನು ಗಂಗಿ ನಂಗೇನು ಅಗೋದಿಲ್ಲಾ, ನೀ ಏನ ಹೆದರ ಬ್ಯಾಡ ನಾಕ ಮಂದಿನ ಸರಳ ನೀರ ಕುಡಸೋ ತಾಕತೈತಿ ನನ್ನ ಹತ್ರ ಅಂದು ಶಾಸ್ತ್ರಕ ಬಂದಿಷ್ಟು ಉಂಡು ಜೋಡನ್ನ ಮೆಟ್ಟಿ ಹೊಂಟ.

ಊರ ದಾಟಿ ಗೌಡ್ರ ಬಾವಿ ಮಾವಿನ ತೋಪು ಕೆರಿಏರಿ ದಾಟಿ ಚೆಂಗ್ರಳ್ಳಿ ರಸ್ತಿಗ ಬಂದಾಗ ಯಾರೋ ಒಂದಿಬ್ಬರು ಮುಂದಿಂದ ಬಂದಂಗಾತು. ಎರಡು ಇಕ್ಕೆಲಗಳಲ್ಲಿ ಆಳೆತ್ತರಕ್ಕೆ ಬೆಳದ ರಗಸಪಟಿ, ಮಧ್ಯ ಬಂಡಿ ಜಾಡು ಯಾರೂ ಇರಬಹುದೆಂದು ಕ್ಯಾಕರಿಸಿ ಉಗಳಿ ಸರಸರನೆ ದಾಟಲು ನೋಡಿದ ಮತ್ತಿಬ್ಬರು ಅವರ ಹಿಂದಿಂದ ಬರುವುದು ಕಾಣಿಸಿತು. ಕಾರ್ತಿಕ ನೋಡಾಕ ಮಂದಿ ಹೊಂಟಿರಬಹುದು ಎಂದು ದುಡ್ಡಿನ ಧರ್ಪ ನಾಟಕದ ಹಾಡೊಂದನ್ನ ಹಾಡ್ತಾ, ಮುನ್ನಡೆದ.

ಹೆಜ್ಜಿ ಇಡ್ತಿದ್ದಿಂಗ, ಜನ ಆಕಡೆ ಈ ಕಡೆಯಿಂದ ಬರುತ್ತಲೆ ಇದ್ರು ಸಿದ್ದವೀರಗ ಯಾಕೊ ಧೈರ್ಯ ಸಾಲದಾತು. ಪಕ್ಕದಲ್ಲಿದ್ದ ಜಾಕು ತಗಿಯಾಕ ನೋಡ್ದಾ ಜಳಕದ ಗಡಿಬಿಡಿಯೊಳಗೆ ಬಚ್ಚಲ ಮ್ಯಾಲೆ ಬಿಟ್ಟು ಬಂದಿದ್ದ. ಹದಿನೈದು ಹದಿನಾರು ಮಂದಿ, ಹಿಂದ ಮುಂದ ಸುತ್ತು ವರಿದಿದ್ದರು, ಮಾತಿಲ್ಲಾ ಕತಿ ಇಲ್ಲಾ, ಸಿದ್ದವೀರ ತಪ್ಪಿಸಿಕೊಳ್ಳಲು ಆ ಕಡೆ ಹವಣಿಸುತ್ತಿದ್ದ ಸಾಧ್ಯವಾಗುತಿಲ್ಲಾ. ಅವರ ಕೈಯೊಳಗ ಸೈಕಲ್ ಚೈನು, ದೊಣ್ಣಿಗಳು ಸಜ್ಜಾಗೆ ಬಂದಿದ್ದರು. ಸಿದ್ದವೀರಗ ದಿಕ್ಕು ತಿಳಯದೆ ಒಂದಿಬ್ಬರನ್ನ ಹಿಡದು ತದಕಿದ. ಆದ್ರ ಅವರು ಹದಿನೈದು ಜನ ಒಂದೇ ಸಲಕ ಮೈಮ್ಯಾಲ ಬಿದಿದ್ದರಿಂದ ತಪ್ಪಿಸಿ ಕೊಳ್ಳಾಕ ಆಗದ ಒದ್ದಾಡಿದ, ಆಳಿಗೊಂದು ಗುದ್ದ ಹೇರ ತೊಡಗಿದರು. ಆದರು ಕೊಸರಿ ಕೊಂಡು ಮೇಲೆದ್ದ ಸಾಧ್ಯವಾಗಲಿಲ್ಲಾ ಎಲ್ಲರು ಮೈ ಮ್ಯಾಲ ಬಿದ್ದು ಮತ್ತೆ ಕೆಡವಿದರು. ಅವರ ಭಾರ ತಾಳಲಾರದೆ ಪಕ್ಕದಲ್ಲಿದ್ದ ಮೊದೆಯೊಂದಕ್ಕೆ ಹಾಕಿ



ಬೇರು ಸಹಿತ ಕಿತ್ತು ಬಿಟ್ಟ. ಅದ ಸಮಯಕ್ಕ ಯಾರೊ ಒಬ್ಬ ಸಿದ್ದವೀರನ ಮರ್ಮಾಂಗಕ್ನ ಕೈ ಹಾಕಿ ಜೋರಾಗಿ ಹಿಚುಕಿ ಬಿಟ್ಟ. ನೋವು ತಾಳಲಾರದೆ ಜೋರಾಗಿ ಅರಚಿಕೊಂಡ ಸತ್ನೊಯಪ್ಪಾ. ಎಂದು ಕನಿಷ್ಠ ಪಕ್ಷ ಒಂದು ಹತ್ತ ಕಿ.ಮಿ. ದೂರವಾದರೂ ಅವನ ಧ್ವನಿ ಪ್ರತಿ ಧ್ವನಿಸಿರಬೇಕು. ಕಾರ್ತಿಕ ಮಾಸದಸಂಭ್ರಮ ಊರಲ್ಲಿ ಬಜನೆ ಹರಿಕತೆ ಕೋಲಾಟದ ಮೋಜು ಸಕ್ಕಿರಾಜನ ಎತ್ತರದ ಹಾಡಿನಲ್ಲಿ ಸಿದ್ದವೀರನ ಧ್ವನಿ ಕೇಳಿಸಲೇ ಇಲ್ಲಾ.

❖

## ೧೫. ಅಪಘಾತದಾಚೆಯ ಆಘಾತವೊ....

ನಿಲುಕದ ವಿಚಾರದೊಳಗ ಹೋಗಿದ್ದ ನಂಜೂರ ಹೇಣ್ತಿ ರುಕ್ಕಿ ಎಂಥ ಪಿಲಾನ್ ಮಾಡ್ತೀರಿ ನೀವು ಮದ್ಲು ರೊಕ್ಕ ಏಟ ಬಂದೈತಿ ಅನ್ನೋ ವಿಚಾರ ತಿಳ್ಕೊಬಾರ್ದ ನಮ್ಮ ಮಾಡಿ ಮ್ಯಾಲಿನ ಮನೆ ಸಂಕವ್ವ ಮೂರ ಮೂರ ಬಂಗಾರ ಸರ ಹಕ್ಕೊಂಡಾಳ, ಕೆಳಗಿನ ಮನಿ ಕಲ್ಲುನ ಹೆಣ್ತಿ ಸಂಪಿ ಎಲ್ಡು ಕೈಗ ನಾಕ ನಾಕ ಬಳ್ಳಿ ಹಾಕ್ಕೊಂಡು ಸಂಜಿ ಮುಂದ ತಮ್ಮನಿಯೊಳಗ ಅದೈತಿ ಇದೈತಿ ಅಂತ ಲೀಸ್ಟ್ ಒಪ್ಪಸೋದನ್ನ ನೋಡಬೇಕು ಬಾಯಿ ಮುಚ್ಚದೆ ಮಾತಾಡಿದನ್ನ ಕಂಡು ಬೆರಗಾದ ನಂಜೂರ "ಹಂಗಲ್ಲಾ ಕೇಳಬಾರ್ದು ಕಣೆ ರೊಕ್ಕ ಬಂದೈತೋ ಇಲ್ಲೊ ಯಾವನ ಬಲ್ಲ ಹತಿಕತ್ ಏನೂಂತ ತಿಳ್ಕೊಳ್ಳದೆ ದುಡ್ಡಿನ ವಿಷಯ ಕೇಳ ಬಾರ್ದು" ಅಂದು ಬಾಯಿಮುಚ್ಚಿಸಿದ. ನಂಜೂರನ ತಮ್ಮ ಡಿಬರ ಪೋನ್ ಮಾಡಿದ್ದ "ಯಣ್ಣ ಇಪ್ಪತ್ಮೂರಕ ಕೋರ್ಟಿಗ ಬರಾಕಂತ ಚಮನ್ ಕಳಸ್ಯಾರ ಪೋಲಿಸ್ನೋರು" ಅಂತ ನಂಜೂರ ಗಾಬರಿಯಾಗಿದ್ದ, ಎ ನೀ ಏನ ಹೆದರ ಬ್ಯಾಡ ಹಿಂದ್ಕ ಬಸ್ ಬಿದ್ದಿತಲ್ಲಾ ಆ ವಿಷಯಕ ಅಂತ ಪೋನಿನ ರೊಕ್ಕ ಹೆಚ್ಚಾ ದೀತಂತ ಇಟ್ಟಿದ್ದ.

ಮೂರ ವರ್ಷದ ಹಿಂದ ನಂಜೂರ ಹೇಣ್ತಿ ರುಕ್ಕಿ ಕೂಡ ಅವನ ತಮ್ಮ ಡಿಬರನ ಮದ್ವಿಗಂತ ಊರಿಗ ಹೋಗಿದ್ದ. ಆರ ಮಂದಿಯೊಳಗ ಸಣೋರಿಬ್ಬರ ಮದ್ವಿಗ ಮುಂಚೆ ಮೂರ್ಕಡಿಯಾಗಿದ್ದ ಸಂಸಾರದಾಗ ಅವನಿಗೂ ಅಕ್ಕಿ ಕಾಳ ಹಾಕಿ ಲಗ್ನ ಮಾಡಾಕು ಅಂತ ನಿರ್ಧರಿಸಿದ ಮ್ಯಾಲ, ನಂಜೂರ ಸಿದಾ ಮದ್ವೀಗ ಮುಂದ ವಾರ ಇದ್ದಂಗ ಹೋಗಿದ್ದ. ಲಗ್ನ ಎಲ್ಡದಿನ ಐತಿ ಅಂದಾಗ ಡಿಬರ ನಿದ್ದ ಬಸ್ ಆಕ್ಸಿಡೆಂಟಾಗಿತ್ತು

ಅವನ ತುಟಿ ಹರದು ಆರ ಹೊಲಗಿ ಬಿದಿದ್ವು ದವಾಖಾನಿಗ ತೊರ್ಸಿ "ಮದ್ವಿ ಗಂಡಾಗೋನ್ರಿ ಡಾಕ್ಟ್ರ ಪೆಂಗಾರ ಮಾಡಿ ಅವನ ಗಾಯ ಕಾಣದಂಗ ಮಾಡ್ರಿ ಅಂದಿದ್ದ. ಎಲ್ಲ ತಯಾರಿ ಆತು ಸಂಜಿ ಆರಗಂಟಿಗ ಮದುಮಗನ್ನ ಕರ್ರೊಂಡು ಟ್ರಾಕ್ಟರ್ ಹೊಂಟಿತು. ಹಿಂದಿಂದೆ ಚಪರದ ಕಂಬ ಮುರದು ಇಡಿ ಚಪ್ಪರ ಬಿತ್ತು. ಮುಂದ ಹೋಗಿ ಟ್ರಾಕ್ಟರ್ ಅಪಘಾತಕ್ಕೀಡಾತು ಹಿಂಗ ಸುರುವಾದ ಅನೀಷ್ಠ ಮಾರನೆ ದಿನ ತಾಳಿಗಂತ ಹೊಂಟಿದ್ದ ನಂಜೂರ ಮತ್ತ ಅವನ ಹೆಣ್ತಿ ರುಕ್ಕಿಗೂ ತಟ್ಟದೇ ಇರ್ಲಿಲ್ಲಾ. ಮುಂಜಾನಿ ಎಂಟಕ್ಕ ಊರ ಬಿಟ್ವಾಗ ಅವರ ಹಿಂದ ಅವನ ಅಣ್ಣನ ಮಗ ಜಂಬ ಹೊಂಟನಿಂತ್ತಿದ್ದ. ಹನ್ಮಂತ ದೇವ್ರ ಗುಡಿದಾಟಿ ಕೈಬೋರ ಹತ್ರ ಬಂದು ದೀಪಮಲಿ ಕಂಬದಾಟಬೇಕನ್ನೊದ್ರಾಗ ಕುಲ್ಡ ರಾಮನ ಹೆಣ್ತಿ ಕಟಕಿ ಹೊರಿ ಹೊತ್ಕೊಂಡ ಅಡ್ಡಾದ್ಲು" ಎ ನಿಲ್ರೊ ಮಾರಾಯ್ರ ಗಂಗವ್ವ ಮಿನೀಟ ನಿಲ್ಸಿ ಅಕಿ ಹೊರಿಯಾಗಿಂದ್ದ ಒಂದ ತುಂಡ ಕಟಿಗಿ ಮುರ್ಕೊಂಡು ನಂಜೂರನ ಕೈಯಾಗ ಕೊಟ್ಲು. ನಂಜೂರ ಹೇಣ್ತಿ ರುಕ್ಕಿಗ ಹೋಗೋದು ಇಷ್ಟ ಇರ್ಲಿಲ್ಲಾ. ಮದಲ ದಿನ ಹೋಗಿ ಕಾರ್ಯದಾಗ ಕಾರಭಾರ ಮಾಡಬೇಕು ಅಂದ್ಕೊಂಡಿದ್ಲು. ಮೈದನ ಬೋಯ್ದು ಮನಿಕಾದು ಬರ್ರಿ ಅಂದಿಂದ ತಣ್ಣೀರ ಎರಚದಂಗಾಗಿ ತೆಪ್ಪಗಾಗ್ಲಿದ್ಲು. ದುಗ್ಗತ್ತಿ ತೆಲಗಿ ದಾಟ ಚಿರಸ್ತೆಳ್ಳಿ ಅಡ್ರರಸ್ತಿಗ ಬಂದಾಗ ಹಲವಾಲಿಗ ಹೋಗೋ ಟೆಂಪೊ ಸಿಗ್ತು. ಹಲವಾಗಲದಾಗ ಎಷ್ಟೊತ್ತ ಕಾದ್ರು ಬಸ್ಸಿಲ್ಲ ಲಾರಿ ಇಲ್ಲಾ ಗುಡದ ತಾಂಡಕ. ಡಿಬರಗ ಎಲ್ಲೂ ಹುಡುಗಿರಿರಲ್ಲೇನೊ ಅನಿಸಿತು, ಮಾಲಿಕಟ್ಟಿನ್ಯಾಗ ಬಂದು ಹುಡುಗಿ ನೋಡ್ಯಾನ, ಮೂರ್ತಕ ಹೊತ್ತಾಗಿತ್ತು ಕಾದು ಕಾದು ಸುಸ್ತಾಗಿ ಹಲವಾಗಲ ಪೋಲೀಸ್ ಠಾಣೆ ಮುಂದ ಬೇನ್ಮರದ ಕಟ್ಟಿಮ್ಯಾಲ ಕುಂತು ಕಾಯ ತೊಡಗಿದ್ರು. ಹನಂದ ದಾಟಿ ಹನೆಲ್ಡ ಘಂಟಿಗ ಹರಹರ ಶಿವಶಿವಾಂತ ಸರ್ಕಾರಿ ಬಸ್ಸು ಬಂತು. ರುಕ್ಕಿ ನಂಜೂರ, ಜಂಬ, ನಂಜೂರ ಗೆಳೆಯ ನುಗ್ಗೇಶಿ ಹತ್ತಿದ್ರು. ಕಾಲಿಡಾಕ ಜಾಗ ಇಲ್ಲದೆ ಮಂದಿಹತ್ತಿದ್ರು. ಅರ್ಧ ಗಂಡಸರು ಬಸ್ಸಿನ ಮ್ಯಾಲ ಹತ್ತಿ ಆರಾಮದಿಂದ ಕುಂತಿದ್ರು.


ಹಲವಾಗಲ ದಾಟಿ ಗುಡ್ಡದ ತಾಂಡಕ ಹೋಗಾಕ ತುಂಗಾ ಭದ್ರ ನದಿ ಸೇತುವೆ ಹತ್ತಬೇಕಾದ್ರ, ಗುಡ್ಡದ ನಳಕಿನ ಒಂದು ದೊಡ್ಡ ತೆಂಬ ಹತ್ತ ಬೇಕಿತ್ತು. ನಂಜೂರ ರುಕ್ಕಿ ಅವನ ಗೆಳೆಯ ಹಿಂದಿನ ಬಾಗಿಲದ ಹತ್ರ ನಿಂತ್ಕೊಂಡಿದ್ರು. ಅರ್ಧ ತೆಂಬಕ್ಕ ಬಂದಿರಬಹುದು ಬಸ್ಸು ಮ್ಯಾಲ ಹೋಗೋದ ಬಿಟ್ಟು, ಹಿಂದಿಕ ಓಡಿತು, ನಂಜೂರ ಹೆಣ್ತಿಗ ಹೇಳಿ ನಗ ತೊಡಗಿದ. ಬಸ್ಸಿನೊಳಗಿದ್ದ ಮಂದಿ 'ಎ ಯಾಕ ನಗ್ತೀರಿ ಬಸ್ಸ ಬಿಳಾಕಹತ್ತೈತಿ ಅನ್ನಾಕು' ದಡ್ ಅಂತೇಳಿ ಬಸ್ಸು ಬಿದ್ದೆ ಬಿಡ್ತು

ಕಿಚೋ ಅಂತ ಮಂದಿ ಕೂಗಿಕೊಂಡ್ರು ಎಡಗಡಿಗ ಬಿದ್ದಿತ್ತು ಬಸ್ಸು ನಿಂತ ಮಂದಿ ಕುತೋರ ಮ್ಯಾಲ ಬೋರಲಾಗಿ ಬಿದ್ಕೊಂಡಿದ್ರು. ಹೆಂಗಸರು, ಗಂಡಸರು, ಮುದಕರು, ಮುಂಡ್ರು ಯಾರೋಬ್ರ ನೋಡ್ದಂಗೆ ಗಾಯಗಳಾಗಿದ್ವು. ಬಸ್ಸ ಬಿದ್ದಿದ್ದೆ, ಹೊಲ್ದಾನ ಮಂದಿ ಬದಕು ಬಿಟ್ಕೊಟ್ಟು ಉಸರು ಬಿಗಿಹಿಡಿದು ಓಡಿ ಬಂದಿದ್ರು, ಹಿಂದಿನ ಗಾಜು ಮುಂದಿನ ಗಾಜು ಹೊಡ್ದು, ಮಂದಿ ಹೊರಾಗ ಬರಾಕ ನೋಡಿದ್ರು. ನಂಜೂರ ಎಲ್ಲರ ಅಡಿಗ ಸಿಕೊಂಡಿದ್ದ ಹೆಣ್ತಿ ರುಕ್ಕಿಯನ್ನ ಎಬ್ಬಸಾಕ್ ಪ್ರಯತ್ನ ಪಡ್ತಿದ್ದ. ಅವನ ಗೆಳೆಯ ಮತ್ತ ಅಣ್ಣನಮಗನ ದ್ಯಾನ ಇರ್ಲಿಲ್ಲಾ, ಅಕಿಯನ ಹುಡುಕಿ ಎಬ್ಬಿಸಿದ, ಹೊರಗ ಕಳಿಸಿ, ಬಿದ್ದೋರನೆಲ್ಲಾ ಒಬ್ಬೊಬ್ರನ್ನಾಗೆ ಹೊರಗ ಹಾಕಿಂದ ಅವನಿಗ ಹೆದರ್ಕಿ ಆತು. ಬಸ್ಸು ಮತ್ತೊಂದು ಉಲ್ಡಕಿ ಆದ್ರ? ತಡಮಾಡದೇ ಹೊರಗ ಜಿಗದ.

ಬಸ್ಸು ಬಿದ್ದಿದ್ದೆ, ಚಾಲು ಇದ್ದ ಮಿಷನ್ ಬಂದ ಮಾಡದೆ ಮಂದಿ ಧೂಳ ಹರಿತಾರ ಅಂದ್ಕೊಂಡು ಡ್ರೈವರ್ ಹಲವಾಗಲ ಸ್ಟೇಷನಿಗ ಓಡಿ ಹೋಗಿದ್ದ. ತೆಲಿಗ ಪೆಟ್ಟಾಗಿದ್ದ ಕಂಡಕ್ಟರ್ ಮಂದಿಗ ಏನೂ ಹೆಳ್ದಂಗ ಕುಂತ್ತಿದ್ದ. ಹಲವಾಗಲ ಸರ್ಕಾರಿ ಆಸ್ಪತ್ರೆ ಜೀಪು, ಟ್ರಾಕ್ಟರ್‌ಗಳು ವ್ಯಾನಗಳು ಬಂದ್ವು, ಮಂದಿ ನದಿಯಿಂದ ನೀರ ತಗೊಂಬಂದ್ರ. ಗಾಯಾ ಆದವನ್ನ ಎತ್ತಿ ಜೀಪಿನೊಳಗ ಹಾಕಿದ್ರು ಕೆಲವರ ತಲಿ ಹೊಡ್ದಿತ್ತು ಮತ್ತೆ ಕೆಲವರ್ದು ತುಟಿ ಹರದಿತ್ತು, ಕಾಲುಕೈ ಸೊಂಟ ಮುರ್ಕೊಂಡೋರು ಯಾರು ಸುಮಾರು ನೂರ ಮಂದಿ ಇದ್ದ ಬಸ್ಸಿನೊಳಗ ಪ್ರತಿಯೊಬ್ಬರಿಗೂ ಗಾಯಗಳಾಗಿದ್ವು. ಯಾರು ಸತ್ತಿರಲಲ್ಲಾ. ಇಡಿ ಆಸ್ಪತ್ರಿ ಗುಜು ಗುಜು ಅನ್ತಿತ್ತು ಪೋಲೀಸರು ಡಾಕ್ಟರು ಜೋರಾಗಿ ಅಡ್ಡಾಡಿ ಕೆಲ್ಸ ಮಾಡ್ತಿದ್ರು.

ನಂಜೂರಗ ಎಲ್ಲಾನೂ ನೆಪ್ಪಾಗ ತೊಡಗಿತ್ತು. ಆ ಭಯಾನಕ ದುರಂತ ನೆನಸ್ಕೊಂಡ್ರ ಮೈ ಜುಂ ಅನ್ತಿತ್ತು ಅವನ್ದು. ಮದ್ವಿ ಆಗ್ತಿರೊ ತಮ್ಮನ ಬಿಟ್ಟು ಉಳದ ನಾಕಮಂದಿ ಅಣ್ಣಂದಿರು ಗುಡ್ಡತಾಂಡದಾಗಿಂದ ಓಡಿ ಬಂದಿದ್ರು. ಬಾಯಿಗೊಂದ ಮಾತಾಡ್ತಿದ್ರು, ಬರಬಾರದಾಗಿತ್ತಂತ ಕೆಲವರು ಹೇಳಿದ್ರ, ನಿನ್ನೆ ಬರ್ತೀನಂತ ಹೇಳಿದ್ರ ನಾವ ವ್ಯವಸ್ಥೆ ಮಾಡ್ತಿದ್ವಿ. ಅಂದ್ರು ನಂಜೂರ ಮಾತ್ರ ಭಯದಿಂದ ಹೊರಾಗ ಬರಾಕ ಹೆಣಗಾಡ್ತಿದ್ದ.

ಅದೆಲ್ಲಾ ನಡದು ಮೂರು ವರ್ಷಗಳಾದ್ವು, ತಿರಗಿ ಅವನಿಗೊಬ್ಬ ಮಗ ಹುಟ್ಟಿದ. ಬಸ್ಸ್ ಬಿದ್ದಿತು ಅಮ್ಮೋದೇ ಮರ್ತು ಹೋಗಿತ್ತು ಯಾವಾಗೋ ಒಂದ ಸರ್ತಿ ಅವನಪ್ಪ ಅದರ ಬಗ್ಗೆ ಸುದ್ದಿ ತಗದಿದ್ದ ಒಂದೆಲ್ಡ ಸಲ ರೊಕ್ಕ ಬರ್ತೈತಿ ಸರ್ಕಾರದಿಂದ ಅಂತೇಳಿ ಡಿಬರ ಹಲಗಲಿಗೆ ಹೋಗಿ ಅವನ ಅತ್ತಿ ಪರಿಚಯದ ತಿಮ್ಮಪ್ಪನ ಹೇಳಿ ಡಾಕ್ಟರ್ ಸರ್ಟಿಪಿಕೇಟ್ ತಗದು ಸ್ಟೇಷನಗ ಕೊಂಟ್ಕೊಂಡು ಏನೇನೊ ಮಾಡಿದ್ನಂತ. ದವಾಖಾನಿ



ಖರ್ಚಿಗಂತ ಕೊಟ್ಟು ಐನೂರು ರೂಪಾಯಿಯನ್ನ ನಂಜೂರನ ಅತ್ತಿ ಗೆ ಗ್ರಾಮಪಂಚಾತಿ ಮೆಂಬರ ಮಿಶ್ರವ್ವ ಯಾರಿಗೂ ಹೇಳ್ದಂಗ ಖರ್ಚ ಮಾಡಿದ್ಲಂತ, ನಂಜೂರನ ಮುಂದ ಹೇಳಿದಕ ಅಕೀನ ಉದ್ಧಾರ ಆಗಲಿ ಬಿಡು. ಅಂತ ಸುಮ್ಮನಾಗಿದ್ದ.

ಈಗ ಮಾತ್ರ ಅವನ ಎದಿಯೊಳಗ ನೂರಾರು ಆಶೆ ಹುಟ್ಟತೊಡಗಿದ್ವು. ಏನಿಲ್ಲಾಂದ್ರ ಒಂದ ಮೂವತ್ತ ಮೂವತ್ತೈದು ಸಾವಿರ ಸಿಗತೈತಿ. ಅರವತ್ತ ಸಾವಿರ ಸಿಗತಂದ್ರ ನಲ್ವತ್ತು ಅರವತ್ತು ಸೈಟ್ ಜಾಗ ತಗೊಂದ್ರಾತು ಅಂದ್ಕೊಂಡ. ರುಕ್ಕಿ ಜಾಗ ಬ್ಯಾಡ, ನಂಗೊಂದ ಸರ ಮಾಡ್ಸಿ ಹಾಕ್ರಿ ಮದ್ಲು ಅಂದಿದ್ಲು.

ಮದ್ವಿ ಮಾಡ್ಕೊಂಡ ಏನ ಮಾಡ್ಸೀರಿ, ನಮ್ಮಪ್ಪ ಕೊಟ್ಟಿದ್ದ ಅವಲಕ್ಕಿ ಸರ ಬಿಟೇನೈತ ನನ್ನ ತಾವ. ಒಂದ ತಾಳಿ ಸಗ ಎಲ್ಡ ಬಂಗಾರ ಬಳಿ ಅಂತೇಳಿ ರಾಗ ಎಳದ್ಲು. ನಂಜೂರನ ತಲಿ ಮಾತ್ರ ಒಂದು ಮೂವತ್ತ ಸಾವರ ಹಾಕಿ ಸೈಟ್ ಬರೀದಿ ಮಾಡಿದ್ರು ಮತ್ತೊಂದ ಮೂವತ್ರಾಗ ಒಂದ ಸ್ಕೂಟರ ಬರತೈತಿ. ಸ್ಕೂಟರ್ ತಗೊಳೊ ಭಾಳದಿನದ ಆಶೆಯೂ ಈಡೇರಿದಂಗಕೈತಿ. ಅಂತ ವಿಚಾರದಾಗ ಮುಳಗಿದ್ದ. ನಾಕದಿನ ನಂಜೂರ, ಇಪ್ಪತ್ತೂರನೇ ತಾರೀಖ ಬರೋ ಮಟಕಾದ.

ಮುಂಜಾನೆ ಐದಕ್ಕ ಎಚ್ಚರಾಗಿತ್ತು. ದುಡ್ಡಹಾಕೊಂಬರಾಕ ಬಾಗ ತಗೊಳ್ಳೇನು ಅಂತ ವಿಚಾರ ಮಾಡ್ದ ದುಡ್ಡ ಬಂದಿರ್ಲಿಲ್ಲಾಂದ್ರ ಮಾಡೋದೇನು ಸುಮ್ನ ಹೋದ್ರಾತು, ಹೋದ ಮ್ಯಾಲಿನ ವಿಚಾರ ಬ್ಯಾರೆ ಅಂತೇಳಿ ಗಡಿಬಿಡಿಯಿಂದ ತಯಾರಿ ಮಾಡ್ಸಿ ಬಸ್ಸ ಹತ್ತಿದ್ರಾ, ಅವನ ಮನಸ ಮಾತ್ರ ಬಸ್ಸಿನೊಳಗಿರ್ಲಿಲ್ಲಾ ಸಿಗಬಹುದಾದ ಅರವತ್ತ ಸಾವಿರಾನ ಹೆಂಗ ಖರ್ಚು ಮಾಡ್ಲಿ, ಹೆಂಗ ಗಂಟನ್ನ ಇಟ್ಕೊಳ್ಳಿ ಅನೋದ ಮನದಾಗ ಸುಳದಾಡ್ತಿತು. ರೊಕ್ಕತಂದ ಒಂದೈದೋ ಆರ ವರ್ಷ ಪಿಕ್ಸ್ ಇಟ್ರ ಹ್ಯಾಂಗ ಅರವತ್ತು ನೂರಿಪ್ಪತ್ತ ಅಕೈತಿ ಇಲ್ಲಾಂದ್ರ ಅರವತ್ತನ ತಗೊಂದು ಮೂವತ್ತ ಮಂದಿಗ ಕೊಟ್ಟು ಕಾಫಿ ಸೀಮಿಗ ಆಳಕಟ್ಟಿದೆ ಅಂತಂದ್ರ, ಒಂದ ವರ್ಷದಾಗ ಒಂದ ಲಾಕ್ ಮಾಡ್ಕೊತೀನಿ. 'ಅಪ್ಪ' ಅಂತ ಅವನ ಮಗ ಕೂಗಿದ್ಕ ನಂಜೂರಗ ಎಚ್ಚರಾತು "ಏನಪ್ಪ, ನಿನ ಭವಿಷದ ಕನಸ ಕಾಣ್ತಿದ್ದೆ" ಅಂದ, ತಲಿಬುಡ ಅರ್ಥ ಆಗದ ಮೂರ ವರ್ಷದ ಮಗ ಮುಗಳ್ ನಕ್ಕಾಗ ನಂಜೂರಗ ಅವಮಾನ ಆದಂಗಾತು. ಬಸ್ ಯಾಕೊ ನಿಧಾನಕ ಹೊಂಟಿರೊ ಹಂಗ ಅನಿಸಿತು. ನಾಳೆ ಬೆಳಕಹರದ್ರ ಕೋರ್ಟು ತೀರ್ಮಾನ ಏನಾಗಬಹುದು? ಊಹಿಸದಾದ. ಅವನ ಹೇಣ್ತಿ ರುಕ್ಕಿ ಸಿಟಿಗ ತಲಿ ಆನಿಸಿ ಗುಸ್ ಪುಸ್ ಅಂತ ಗೊರಕಿ ಹೊಡಿಯಾಕ ಹತ್ತಿದ್ಲು. ಪಕ್ಕದಾಗಿನ ಆಸಾಮಿ ಪೆಪರ ಹಿಡ್ಕೊಂಡು ಅವನ ಕೈಯಾನ ಬಂಗಾರ ಸರ ತೊರ್‍ಸೊ ಹಂಗ ನಾಟಕ ಮಾಡ್ತಿದ್ದ. "ಐ ಅದೇನ ಮಾ ನಾ ಮನಸ ಮಾಡಿದ್ರ

ಅರವತ್ರಾಗ ಹತ್ತ ಖರ್ಚ ಮಾಡಿ ಎಲ್ಲುಕ್ಕೈಗ ಒಂದೊಂದು ಹಾಕಿಸಿಕೊಂಡೇನು" ಅಂದಕೊಂಡ.

ಅವನ ಪಕ್ಕದ ಹೆಣಮಗಳು ಚೆಂದನ ರೇಷ್ಮೆ ಸೀರಿ ಉಟ್ಕೊಂಡಿದ್ಲು "ನನ ರುಕ್ಕಿಗೊಂದ ಕೊಡಸ್ಬೇಕು, ಮದ್ವಿ ಆದಂದಿನಿಂದ ಹಿಡದು ಇವತ್ತಿನ ತಂಕ ಬರಿ ಗುದ್ದಾಟದಾಗ ಕಳದ್ವಿ, ಒಂದ ಸೀರಿ ಒಂದ ಜಾಕಿಟಿಲ್ಲಾ, ಪಾಪ." ಅಂದ. ಶಿರ್ಶಿ ಊರ ಬಂದಾಗ 'ಚಾ ಕುಡಿರಿ' ಅಂದ ಕಂಡಕ್ಟರ್, ಗೊರಕಿಯಿಂದ ಎದಿದ್ದ ರುಕ್ಕಿಗ ಒತ್ತರಿಸಿ ಬಂದಿತ್ತು, ಸಾಲ ಹಿಡಿದು ನಿಂತು ಚಾ ಕುಡದು ಏಳೋದ್ರಾಗ ಯಾರ್ರಿ ಮುಂದೋಗೋರು ಬರ್ರಿ'ಅಂದಿದ್ದ ಕಂಡಕ್ಟರ್.

ಬಸ್ ಚಾಲು ಆದೊಡನೆ ಚಾಲು ಆಗಿತ್ತು ಅವನ ಕನಸು. ಅವನ ಮನಸಿನ ತುಂಬ ತುಂಬಿಕೊಂಡಿದ್ದ ಒಂದೇ ವಿಷ್ಯ ಅರವತ್ತ ಸಾವಿರ ಇಲ್ದಿದ್ರೂ ನಲವತ್ತು ಸಾವರ ಸಿಕ್ಕೆ ಸಿಗ ತೈತಿ, ಇಡಿ ಬಸ್ಸೆ ಬಿದ್ಯೆತಂದ್ರ ಅಷ್ಟು ಕೊಡಾಕಿಲ್ಲೇನು. ನಂಜೂರನ ವಿಚಾರ ಲಹರಿಗ ಕೊನೆ ಇರ್ಲಿಲ್ಲಾ. ಹೀರೋ ಹೊಂಡಾ ಗಾಡಿ ಹತ್ತಿ ಅರವತ್ತೈದು ಕಿಲೋ ಮಿಟರ್ ವೇಗದಾಗ ಹೊಂಟಿದ್ದ, ಗಾಳಿಯೊಳಗ ತೇಲಾಡ್ತಾ ಹೋಗಿರೊ ಅನುಭವ ಆಗಾಕತ್ತಿತ್ತು. ಕಣ್ಣಿಗ ಕಪ್ಪಗಾಜ ಹಾಕೊಂಡ, ತಲಿಗ ಹೆಲ್ಮಟ್, ಹಾಕೊಂಡು ಮಂದಿ ಇಲ್ದಿದ್ರು ತನ್ನ ಗಾಡಿ ತೊರ್ಸಾಕಾದ್ರು ಸುಮ್ಮಸುಮ್ಮೆ ಹಾರನ್ ಹಾಕ್ತಾ ಹೊಂಟಿದ್ದ. ಇದ್ದಕಿದ್ದಂಗ ಬಸ್ಸು ಗಕ್ಕಂತ ನಿಂತಿದ್ಕ, ಅವನ ಹಣಿ ಮುಂದಿನ ಸೀಟಿಗ ಬಡದು ನೋವಾತು, ಅವಾಗ್ಲೆ ಅವನಿಗ ನೋವಾತು. ಬಸ್ಸಿನೊಳಗ ಮೈ ಸಡ್ಲು ಬಿಡ್ಕೊಂಡು ಕುಂದ್ರಬಾರ್ದು ಅಂತ, ಆವಾಗ ತಿಳಿತು ಅವನ ಗಾಡಿ ಮಾಯ ಆಗಿತ್ತು.

ಅವನ ತಮ್ಮ ಡಿಬರ ಅವನ ದಾರಿಯನ್ನೆ ಕಾಯ್ತಿದ್ದ ಅವರು ಸೈನ್ ಮಾಡಿ ಹೋದ್ರಂದ್ರ, ರೊಕ್ಕ ತನಗ ಸಿಗತೈತಿ ಅಂತ ಅವನ ಅನಿಸಕೆ. ಭಾರಿ ಖುಷಿ ಆಗಿತ್ತು ಹರಿಹರದಿಂದ ಮೀನ ತರ್ಸಿದ್ದ. ಕೋಡಿಹಟ್ಟಿಯಿಂದ ಸರೆತರ್ಸಿ ಭಾರಿ ಅರೆಂಜಮೆಂಟ್ ಮಾಡ್ಸಿದ್ದ. ನಂಜೂರಗ ಅನುಮಾನಾತು, ಯಾವತ್ತು ಇಷ್ಟೊಂದು ಮೆಹರಬಾನಿ ಮಾಡದೋನು ಇವತ್ತ್ಯಾಕ ಹಿಂಗ ಮಾಡ್ಯಾನ, ತನ್ನ ಪಾಲಿನ ಹೊಲದ ಪಾಯ್ದೆ ತಿಂದ್ರೂ ಯಾವತ್ತು ಎಲ್ಡ ತೆಂಗಿನ ಕಾಯಿ ಒಯ್ಯಿ ಅಂದೋನಲ್ಲ ಅಂತ ವಿಚಾರ ಮಾಡಿದ.

ಹರಪನಳ್ಳಿ ಬಸ್ ಇಳದ ತಕ್ಷಣ, ನಂಜೂರನ ಹಳೆ ಗೆಳೆಯ ಜಗ್ಗೇಶಿ ಸಿಕ್ಕ, ಅವನಿಗೆ ವಿಷಯ ತಿಳಿಸಿದ. ಜಗ್ಗೇಶಿಗ ಹುರುಪು ಬಂದ ಬಿಡ್ತು, "ಯಾರಿಗ ಹೇಳ್ಲಿ ಜಡ್ಜ್ ಸಾಹೇಬ್ರು ನಮ್ಮ ನೇಬರು ಅವರಿಗ ಹೇಳ್ಲೊಲ್ಲಾ, ನನ್ನ ಗೆಳೆಯ ವಕೀಲ

ಪ್ರಕಾಶ. ಅದಾನ ಅವನಿಗ ಹೇಳ್ತಿನಾಕ ಕರ್‍ಕೊಂದ ಹೊಂಟೆ ಬಿಟ್ಟ ವಕೀಲ ಪ್ರಕಾಶ ಬಾ ಪ್ರಕಾಶನ ಹತ್ರ ಬಂದಾಗ ಅವರ ಕೇಳಿದ ಪ್ರಶ್ನೆ ಕೇಳಿ ನಂಜೂರ ದಂಗಾದ, "ಇಲ್ಲ ಬಿಡ್ರಿ ಸಾಹೇಬ್ರ ನಾವ್ಯಾರಿಗೂ ಹೇಳಿಲ್ಲ," "ನೋಡ್ರಿ, ತಲಿ ಹೊಡೆದು ಗಾಯ ಆಗಿದ್ರ ಮೂವತ್ತ ಸಾವಿರ, ಒಂದು ಹೊಲಿಗೆ ಬಿಳೋವಷ್ಟ ಗಾಯ ಆಗಿದ್ರ ಹತ್ತ ಸಾವಿರ, ಕಾಲ ಮುರದಿದ್ರ ಐವತ್ತ ಸಾವಿರ ಹಿಂಗ ಒಂದೊಂದ ಭಾಗ ಒಂದೊಂದು ರೇಟ ಅದಾವು, ನಿಮಗೇನಾಗಿತ್ತು ತಲಿ ಹೊಡದಿತ್ತೊ, ಕಾಲ ಮುರದಿತ್ತು ದಾಖಲೆ ಪತ್ರ ಅದಾವೇನು, ಯಾವ ವಕೀಲ್ರಿಗಿ ಹೇಳಿರಿ ಪರಿಹಾರ ಧನ ಪಡಿಯಾಕ" ಅಂದ. ನಂಜೂರ ಗಾಬಾದ. ಮೂರವರ್ಷದ ಹಿಂದ ಬಿದ್ದು ಮೂಲೆ ಗುಂಪಾಗಿದ್ದ ಹಳೆ ನೆನಪನ್ನ ಮರಿಯೋದೆ ವಾಸಿ ಅನಿಸಿತು. ಯಾವತ್ತೊ ನಡದು ಹೋದ ಘಟನೆ ನೆನಪು ಅವಾಗ್ಲೆ ಮಾಸಿ ಹೋಗಿತ್ತು, ಆದ್ರ ಅದರ ಹಿಂದಿನ ವೇದನೆ ಮಾತ್ರ ತಾಜಾ ತಾಜಾ ಇತ್ತು. ನಂಜೂರಗ ಇದ್ದಕ್ಕಿದಂಗ ಅರವತ್ತ ಸಾವರದ ನೆನಪಾತು. ಅವನು ಗಾಜ ಹೊಡೆದು ಹೊರಗ ತಗದ ವಯಸ್ಸಾದ ಮುದುಕಿ ಸಣ್ಣಮಗು ಟಾಪ್ ಮ್ಯಾಲ ಕುಂತಿದ ಹುಡುಗ ಹಾರಾಕ ಹೋಗಿ ಸೊಂಟಮುರ್‍ಕೊಂಡಿದು. ಸಾವನ್ನ ಹತ್ತರದಿಂದ ಕಂಡ ಅನುಭವ. ಭಯಾನಕ ಅವನ ಹೆಣ್ತಿ ರುಕ್ಕಿ ಬಿಗಿಯಾಗಿ ಕಣ್ಣು ಮುಚಿದ್ಲು. ಕಣ್ಣ ತಗದಾಗ ಹೊಸ ಬದುಕು ಒಂಬತ್ತ ತಿಂಗಳ ಕತ್ತಲ ಗರ್ಭದಿಂದ ಹೊರಗ ಬಂದಂಗ ಆಗಿತ್ತು.

ಸಾವು ಅನ್ನೋ ಶಬ್ದ ಎಂತ ಧೈರ್ಯಸ್ಥನ ಎದಿ ನಡಗಸೋದ ಸಹಜ, ವಯಸ ಕಳದು ಸಹಜ ಸಾವು ಸಾಯೋದಂತು ಇದ್ದೆ ಐತಿ ಹಿಂಗ ಹರೆದ ವಯಸ್ಸಿನೊಳಗ ಸತ್ತ ಹೋದ್ರ? ರುಕ್ಕಿ ಕಣ್ಣು ಮುಚ್ಕೊಂಡು ಆ ಒಂದ ಕ್ಷಣ ಅನುಭವಿಸಿದ ವೇದನೆ ನೆನಸ್ಕೊಂಡು ಮುಸಿ ಮುಸಿ ಅಳ್ತಿದ್ಲು.

ಹರಪನಳ್ಳಿ ಕೋರ್ಟಿನೊಳಗ ಜನಜಾತ್ರಿ ಕೋರ್ಟಿಗ ಹೋಗೋದಂದ್ರ ಮರ್ಯಾದಿ ಪ್ರಶ್ನೆ, ಕೋರ್ಟು ಅಂದ್ರ ಮಂದಿ ಬಾಯಿ ಮ್ಯಾಲ ಬೆಟ್ಟಿಡ್ತಿದ್ರು. ನಂಜೂರ ಕೂಡ ಕಲ್ತ ರಂಗನಾಥ ವಕೀಲನಾಗಿ ಅಲ್ಲೆ ಪ್ರಾಕ್ಟೀಸ್ ಮಾಡ್ತಿದ್ದ. ನಂಜೂರ ನೊಡ್ಕೊಂಡೋನೆ ಓಡಿ ಬಂದ ಜಗ್ಗೇಶಿ ಗೆಳೆಯ ಗುಮಾಸ್ತ ಗೌರೇಶಿ ಸಾ ನಿಮ್ದು ಪೈ ಇಲೈತಿ ಬರಿ ಸಾಕ್ಷಿ ಮಾತ್ರ ಅಂದಾಗ ಅವನ ಆಶೆ ಮ್ಯಾಲ ತಣ್ಣೀರು ಎರಚಿದಂಗಾತು. ಏನೂ ಬ್ಯಾಡ ಅನಿಸಿತು. ಸುಮ್ಮನೆ ನಿಂತ. ಅವನ ಕೂಡ ಬಸ್ಸಿನೊಳಗ ಡ್ರೈವರ ಹನಮೇಶಿ ವಿರುದ್ಧ ಸಾಕ್ಷಿ ಹೇಳಿ ಪರಿಹಾರ ತಗೊಳಕ ಹಲವಾಗಲ ನಾಗರಾಜ ವಕೀಲರನ ನೆಮಕ ಮಾಡಿದ್ರು. ಬಸ್ ಬಿದ್ದಾಗ ತಪಾಸಣೆ ಮಾಡಿದ ಡಾಕ್ಟರ ನಂಜೆಗೌಡ ಬಲವಾದ

ಸಾಕ್ಷಿ.ನಂಜೂರನ ನಿರಾಶೆ ಬೆಳಿತಾ ಹೊತು. ರೊಕ್ಕದ ಆಶಿ ಬಿದ್ದ ಅಷ್ಟದೂರದಿಂದ ಕೆಲ್ಸಕ ರಜಾ ಹಾಕ್ಕೊಂದ ಬಂದಿದ್ದ. ಗುಂಪಿನೊಳಗಿಂದ ಒಬ್ಬ ಯಜಮಾನ ನಂಜೂರನನ್ನ ಗುರ್ತಿಸಿದ "ನೋಡ ತಮ್ಮಾ ನೀನವತ ಇದ್ದಿ ನೀ ಕಲ್ತೋನು. ನಮ್ಮ ಹೊಟ್ಟಿಮ್ಯಾಲ ಹೊಡಿಬ್ಯಾಡ," ಅಂತ ಗೊಗರದ ನಾಗರಾಜ ವಕೀಲ್ರು. "ನೋಡ್ರಿ ನಂಜೂರಪ್ಪ ನೀವು ಒಬ್ರೆ ಸರಿಯಾಗಿ ಸಾಕ್ಷಿ ಹೇಳಬೇಕು, ಅವತು ನಾನು ಹಿಂಗ ಹೇಳ್ರೊ ಅಂದ್ರ ಇವರು ಏನೇನೊ ಹೇಳಿ ಕೇಸು ಸ್ಟ್ಯಾಂಡ್ ಆಗದಂಗ ಮಾಡ್ಯಾರ" ಅಂದ್ರು. ಪೋಲೀಸೊಬಾತ ಬಂದು, ದಾಖಲಿಸಿಕೊಂಡಿದ್ದನ್ನ. ಒದಾಕ ಕೊಟ್ಟ. "ನ್ಯಾಯಾದೀಶರ ಮುಂದ ನೀವು ಹಿಂಗೇ ಹೇಳ ಬೇಕು." ಅಂದು ಹೋದ.

ದೂರದಿಂದ ಎಲ್ಲವನ್ನೂ ಪಿಳಿ ಪಿಳಿ ನೋಡ್ತಿದ್ದ ಡ್ರೈವರ ಹನಮೇಶಿ. ನಂಜೂರನ ಹತ್ರ ಬಂದ, "ಸಾಹೇಬ್ರ ನನ್ನ ನೌಕರಿ ನಿಮ್ಮ ಕೈಯಾಗೈತಿ, ಹೆಂಡ್ರೂ ಮಕ್ಕಳ ಜೀವನ ನಿಮ್ಮ ತಾವ ಐತಿ. ಅವತ ನಾನು ಬೇಕಂತ ಮಾಡಿರಲಿಲ್ಲಾ, ಬಸ್ಸಿನ ಗೇರು ಬಿಳಲಿಲ್ಲಾ ಮ್ಯಾಲ ಹತ್ತೊದ ಬಿಟ್ಟು ಕೆಳಗ ಬಂತು ಹಿಂಗೆ ಬಿಟ್ರ ಉಲ್ಡಕಿ ಹೊಡೆದು ಭಾರಿ ಅನಾಹುತ ಅಕೈತಂತ ಮೆಲ್ಲಗ ಪಲ್ಟಿ ಹೊಡಿಸಿದೆ. ಬೆನ್ನ ಮ್ಯಾಲ ಹೊಡಿರಿ ಆದ್ರ ಹೊಟ್ಟಿ ಮ್ಯಾಲ ಹೊಡಿಬ್ಯಾಡ್ರಿ." ಅನ್ನೊ ಮುಂದ ಅವನ ಕಣ್ಣು ನೀರ ತುಂಬಿಕೊಂಡಿದ್ವು. ನಂಜೂರಗ ಏನ ಮಾಡಬೇಕೋ ತಿಳಿಲಿಲ್ಲಾ. ಒಂದ ಕಡಿ ಸರ್ಕಾರದ ರೊಕ್ಕ ತಗೊಂದ ಮಜಾಮಾಡಾಕ ಕಾಯ್ತಿರೋ ಜನ. ಬರೋದ್ರಾಗ ಹತ್ತ ಪರ್ಸೆಂಟ್‌ಗಾಗಿ ಬಾಯಿ ಬಿಡ್ತಿರೊ ನಾಗರಾಜ ವಕೀಲ್ರು. ಚಾ ಕ್ಕೆ ನಾದ್ರು ಸಿಕ್ಕಿತಂತ ಮುಂದ ಮುಂದೆ ಬಂದು ಕೇಸಿನ ಹಾಳೆ ಕೊಡೋ ಪೋಲೀಸ್ ನಿರಪರಾಧಿಯೋ ಅಪರಾಧಿಯೋ ಕೆಲಸ ಕಳ ಕೊಳ್ಳಲಿರೋ ಹನಮೇಶಿ ಡ್ರೈವರ್. ನಂಜೂರನ ತಲಿಯೊಳಗ ಎಲ್ಲಾ ಚಕ್ರದಂಗ ತಿರಗಾಕ ಹತ್ತು ಅವನ ಸ್ಕೂಟರ್ ಹೆಂತ್ತಿ ಕೊಳ್ಳ ಸರ ಹರಿಹರದ ಜಾಗೆ, ಮೂಲ್ಯಾಗ ಹೋಗಿ ಕುಂತ್ಕೊಂಡ.

ಪಾಪ ಡ್ರೈವರಂದು ತಪ್ಪಿರಲಿಕ್ಕಿಲ್ಲಾ. ಹಳೆ ಬಸ್ಸು ಅವನಾದ್ರು ಏನ ಮಾಡ್ಯಾನು ಗೇರೆ ಬಿಳದಿದ್ರೆ? ಹೆಂಗಾನ ಮಾಡಿ ಅವನಿಗೆ ಪರವಾಗೆ ಹೇಳಬೇಕು. ಇನ್ನೊಂದ ಮೂಲಿಂದ ಗುಂಪ ಮಂದಿ ನಂಜೂರನ ಹತ್ರ ಡ್ರೈವರ ಮಾತಾಡೋದನ್ನ ಕುತೂಹಲದಿಂದ ಕೇಳಿದ್ರು ಒಳಗೊಳಗೆ ಮಾತಾಡ್ತಿದ್ದ. ನಾನೇನಾರು ಅವನ ಪರ ಹೇಳಿದೆ ಅಂದ್ರ, ಈ ಮಂದಿ ನನ್ನ ಹೆಣ ಎತ್ತಾರ ಬಾಯಿಗ ಬಂದಿದ್ದನ ಕಸ್ಕೊಂಡ ಅಂತ. ನನೊಬ್ಬನಿಗಲ್ಲ. ಹೇಂತ್ತಿ ಮಗನ್ನೂ ಉಳಿಸೋದಿಲ್ಲಾ ಅವರಿಗ ನ್ಯಾಯ ಅನ್ಯಾಯ ಬೆಕಿಲ್ಲಾ, ಕಷ್ಟ ಇಲ್ದೆ ಸರ್ಕಾರದಿಂದ ಸಾವರಗಟ್ಲೆ ಹಣ ಬರತೈತಿ ನಾನೇಸಾರ ಕಲ್ಲು

ಹಾಕಿದೆ ಅಂದ್ರ ಕೆಂಡ ಮಂಡಲ ಆಕ್ಕಾರ. ಹಿಂಗಲ್ರಪ್ಪ, ನಾವು ಮಾಡ್ತಿರೋದು ಅನ್ಯಾಯ ಬಡವನ ನೌಕರಿ ಹೊಕ್ಕೈತಿ ಅಂದ್ರ ಕೇಳಂಗಿಲ್ಲಾ ಯಾರ ನೌಕರಿ ಯಾರ ಹೆಣ್ತಿ ಮಕ್ಕಳು, ಯಾರು? ಯಾರಿಗೆ? 'ಛೇ' ಮೇಲೆದ್ದ ಆ ಕಡಿಂದ ಈಕಡಿಗಡ್ಡಾಡಿದ. ಪೋಲೀಸ್ ಮತ್ತೊಂದ ಸಲ ಹತ್ರ ಬಂದು ಗಿಳಿಪಾಠ ಒಪ್ಪಿಸಿದ. ನಾಗರಾಜ ವಕೀಲ್ರು "ನಂಜೂರಪ್ಪ ಕೇಸು ನಿಮ್ಮ ಮ್ಯಾಲೈತಿ" ಅಂದ್ರು ಗುಂಪಿನೊಳಗಿಂದ ಕೆಲಧ್ವನಿಗಳು ಎಚ್ಚರಿಕೆ ಕೊಟ್ಟು. "ಇದೇ ಬೌಂಡರಿಯೋಳಗ ಅಡ್ಡಾಡ್ತೀರಿ ಸಾಹೇಬ್ರ" ಅಂತ ಒಂದ ಸಾರಿ ಎಲ್ಲಿರನ್ನು ನೋಡಿದ, ಮಕಗಳೆಲ್ಲಾ ಭಯಾನಕವಾಗಿ ಕಂಡ್ವು ದೂರದಾಗ ಸರ್ಕಾರಿ ವಕೀಲರ ಹತ್ರ ಏನೇನೋ ಮಾತಾಡ್ತಾ ನಿಂತಿದ್ದ ಹನಮೇಶಿಯನ್ನ ನೋಡಿದ ಕೋರ್ಟಿನ ಅಂಗಳದಾಗ ಆಡ್ತಿದ್ದ ಮಗ ಬಂಗಾರದ ಆಶೆಯಿಂದ ಕುತೂಹಲದಿಂದ ಕಾಯ್ತಿದ್ದ ಹೆಣ್ತಿ ರುಕ್ಕಿ.

ನಂಜೂರಪ್ಪ ನಂಜೂರಪ್ಪ. ಆತ ಕೂಗಿದ ಜೀವನದಾಗ ಮದಲ ಸಲ ಕಟ ಕಟಿ ಹತ್ತಾಕ ಹೊಂಟಿದ್ದ. ನಂಜೂರ ಚಪ್ಪಲಿ ಹೊರಗ ಬಿಟ್ಟು, ಕಟಕಟಿ ಕಡಿಗ ಹೋದ. ಒಂದ ಸಾರಿ ಸುತ್ಲು ನೋಡಿದ ಒಂದ ಬಾಗಿಲೊಳಗ ಕುತೂಹಲದಿಂದ ಕಾಯ್ತಿದ ಮಂದಿ, ಅಪರಾಧಿ ಸ್ಥಾನದೊಳಗ ಕೈ ಕಟ್ಕೊಂಡು ನಮ್ರನಾಗಿ ನಿಂತಿದ್ದ ಹನಮೇಶಿ. ಎದರಿಗಿದ್ದು ಕಣ್ಣಿಂದ್ಲೆ ಎಲ್ಲಾ ಸೂಚನೆ ಕೊಡ್ತಿದ್ದ ನಾಗರಾಜ ವಕೀಲರು. ಗಂಭೀರವಾಗಿ ಕುಂತಿದ್ದ ನ್ಯಾಯಾದೀಶರು. ನಂಜೂರನ ಎದಿಯೊಳಗ ನೂರಾ ಎಂಟ ಅಲೆಗಳು ಏಳಾಕತ್ತಿದ್ವು, ಓದಿದ್ದೆಲ್ಲಾ ಉಲ್ಟಾ ಪಲ್ಟಿಯಾಗಿತ್ತು. ಹನಮೇಶಿಯ ಕರುಣೆ ತುಂಬಿದ ದೃಷ್ಟಿ ಕೊಲ್ಲಾಕ ಹತ್ತಿತು. ಹೊರಗ ತಿಂದ ಬಿಡೋ ಹಂಗ ಮಂದಿ ನೋಡ್ತಿದ್ರು. ಹೊರಗ ಆಡ್ತಿದ್ದ ಮಗ ನೆನಪಾದ. ವಕೀಲರು ಪ್ರಶ್ನೆ ಕೆಳ ತೊಡಗಿದರು. ಅವನ ತಲಿಯೊಳಗ ಎನೂ ಹೋಗಲಿಲ್ಲಾ, ನ್ಯಾಯಾಧೀಶರು ಕೇಳಿದರು, ಮಾತಾಡಲಿಲ್ಲಾ. ವಕೀಲರು ಪ್ರಯತ್ನಿಸ ತೊಡಗಿದರು ಅವನ ಎದುರಿಗಿದ್ದ ನಾಗಾರಾಜ ವಕೀಲ ತಲೆ ಅಲ್ಲಾಡಿಸಿ ಉತ್ತರ ಹೇಳಾಕ ಪೀಡಿಸುತಿದ್ರು. ನಂಜೂರ ಬೆವರ ತೊಡಗಿದ ನಾಲಿಗೆ ತುದಿ ಮ್ಯಾಲ ಬಂದ ಮಾತುಹೊರಗ ಬೀಳಲಿಲ್ಲಾ."ಮಾತಾಡ್ರಿ" ಸರ್ಕಾರಿ ವಕೀಲರು ಗದರಿಸಿದ್ರು. ನಂಜೂರನ ಗಂಟಲು ಒಣಗಿತ್ತು ಅವನ ಗೆಳೆಯ ರಂಗನಾಥ ಅವನನ್ನೆ ನೋಡ ತೊಡಗಿದ. ನಂಜೂರ ಯಾವ ನಿರ್ಧಾರಕ್ಕೂ ಬರಲಿಲ್ಲಾ ಒಂದ ಮಾತು ಜೋರಾಗಿ ಒದರಿದ, "ಮೈಲಾರ್ಡ್ ನಾನೇನು ಹೇಳಲಾರೆ" ಅಂದವನೆ ತಲಿ ಹಿಡ್ಕೊಂಡು ಕುಂತ ಬಿಟ್ಟ.

❖



## ೧೭. 'ನನ್ನೊಳಗಿನ ನಾನು'

ನನ್ನೊಳಗೆ ಕೊಳೆತು ನಾರುತ್ತಿರುವ ಭಾವನೆಗಳನ್ನ ಹೊರತೆಗೆದು ಪದರು ಪದರುಗಳನ್ನಾಗಿಸಿ ಬಿಚ್ಚಿ ಇಡಬೇಕೆಂಬ ಬಯಕೆ ಗರಿಗೆದರಿ ಕುಣಿದು ಕುಪ್ಪಳಿಸುವ ಬಯಕೆಗಳಿಗೆ ರೆಕ್ಕೆ ಕೊಟ್ಟು ಹಾರಿ ಬಿಡಬೇಕೆಂದು ಕೊಳ್ಳುತ್ತೇನೆ. ಆದರೆ ಪೊಳ್ಳು ಭಯ ಎಲ್ಲೋ ಒಂದು ಕಡೆ ಪರಿಸರದ ಶಿಶುವಾಗಿ ಕಲಿಯುತ್ತಾ ಬಂದ ಎಲ್ಲಾ ಕೆಟ್ಟ ಒಳ್ಳೆಯಯ ವಿಚಾರಗಳಿಗೆ ನಾನೊಬ್ಬನೆ ಹೊಣೆಯೇ? ಎಂಬ, ಪ್ರಶ್ನೆ ಉದ್ಭವಿಸಿದಾಗ ನನ್ನಂತರಂಗದಲ್ಲಿ ಉತ್ತರವಿಲ್ಲ. ಎಷ್ಟೊಸಲ ಸುಳ್ಳು ಹೇಳಿದ್ದುಂಟು, ಸುಳ್ಳನ್ನೇ ಸತ್ಯವನ್ನಾಗಿಸಿ ಸತ್ಯವನ್ನೇ ಸುಳ್ಳಾಗಿಸಿದ ಅವೆಷ್ಟೋ ಸಂದರ್ಭಗಳನ್ನ ನೆನಪಿಸಿಕೊಂಡಾಗ. ಮೈನಡಗುತ್ತದೆ ಮಾಡುತ್ತಿರುವುದು ತಪ್ಪೆಂದು ಗೊತ್ತಿದ್ದರೋ ಮತ್ತೆ ಅದೇ ಹಾದಿ ತುಳಿದಾಗ ಆತ್ಮಸಾಕ್ಷಿ ಒಪ್ಪುತ್ತಿರಲಿಲ್ಲ. ಬದುಕು ಕೇಳಬೇಕಲ್ಲಾ ಬದುಕಿಗಾಗಿ ಅನಿವಾರ್ಯತೆಯನ್ನ ಸೂತ್ರ ಮಾಡಿಕೊಂಡಿದ್ದೇನೆ. ಮನಸು ಒಪ್ಪದ ಕಾರ್ಯವನ್ನ ಮಾಡಲೇ ಬೇಕಾಗಿ ಬಂದಾಗ ಮನಸು ಸತ್ತು ಹೋಗುವ ಅನುಭವ. ಶ್ರೀಯ ತಂದೆ ಅಂದು ಹೇಳಿದ್ದು ನಿಜಾ ನನ್ನ ಕೈಲಾಗದಕ್ಕೆ ನಾನು, ಬುದ್ಧಿ ಜೀವಿ ಎಂಬ ಮುಖವಾಡವನ್ನ ಹಾಕಿ ನನ್ನ ಅಸಾಹಕತೆಯನ್ನ ಮುಚ್ಚಲು ಪ್ರಯತ್ನಿಸುತ್ತೇನೆ. ಅಂದು ನಾನಿನ್ನು ಅರಿಯದ ಹುಡುಗ ಸಾವು ಎಂಬುವ ಕಲ್ಪನೆ ಕೂಡ ಇರಲಿಲ್ಲ. ಅಜ್ಜ ಸತ್ತಿದ್ದ. ಅವ್ವ ಅಪ್ಪ ಅಳುತ್ತಿದ್ದರು. ನಾನು ಆಟವಾಡುತ್ತಿದ್ದೆ ನನಗೂ ಸಾವಿಗೂ ಸಂಬಂಧವಿಲ್ಲ ಎಂಬಂತೆ ವರ್ತಿಸುತ್ತಿದ್ದೆ. ಗೆಳೆಯ ಮಹೇಶ ಸತ್ತಾಗ, ಶಾಶ್ವತವಾಗಿ ಮರೆಯಾದ ಮುಖವನ್ನ ನೋಡಲು, ಆತ್ಮೀಯ ಕ್ಷಣಗಳನ್ನ ಕಳೆಯಲು ತವಕಿಸುವ ನನಗೆ, ಮಹೇಶನ ಸಾವು ನರನಾಡಿಗಳನೊಮ್ಮೆ ಅಲುಗಾಡಿಸಿತು.

ಭಯಾನಕ ಅನುಭವವಾಗ ತೊಡಗಿತು ಸಾವಿನಿಂದ ಬಚ್ಚಿಟ್ಟುಕೊಳ್ಳಲು ಸಾದ್ಯವೇ ಎಂಬ ಹುಚ್ಚು ವಿಚಾರಗಳತ್ತ ಓಡತೊಡಗಿದೆ. ಸಾವು ಅನಿವಾರ್ಯ ಎಂಬುದು ಖಚಿತವಾದಂದಿನಿಂದ ಅಷ್ಟೊಂದು ಕಾಡಲಿಲ್ಲಾ. ಅಜ್ಜನ ಸಾವು ಮಹೇಶನ ಸಾವಿನ ನಡವಿನ ಅಂತರಮನ್ನ ತಾಳೆ ಹಾಕ ತೊಡಗಿದೆ. ಅಜ್ಜ ಸತ್ತಾಗ ಮನೆಯಲ್ಲಿ ಬೆಂಕಿ ಹೊತ್ತಿಸಲಿಲ್ಲಾ, ಹೊತ್ತಸಲು ಮನೆಯಲ್ಲಿ ಇದಿದ್ದಾರೂ ಏನು ಬಡತನ, ಅದರಲ್ಲಿ ಬರಗಾಲ ಮಣ್ಣು ತುಂಬಿದ ರಾಗಿಯನ್ನ ಅಪ್ಪ ಬೀಸಿಕೊಂಡು ಬರುತ್ತಿದ್ದ ಅವ್ವ ಕೂಲಿಯಿಂದ ಬಂದವಳೆ ಅಂಬಲಿ ಬೇಯಿಸಿ ತಟ್ಟೆಗಳಿಗೆ ಸುರಿಯುವುದೇ ತಡ ಸೊರ್ ಅಂತ ಎಳೆದು ಬಾಯಿ ಸುಟ್ಟುಕೊಂಡು, ಅವ್ವನ ಕೈಯಾಗ ಹೊಡ್ತಾ ತಿಂದು ತಗದ ದಿನ ಕಣ್ಣ ಮಂದ ಕಟ್ಟಿದಂಗ ಆಗುತ್ತದೆ ಸಾವಿಗೂ ಹಸಿವಿಗೂ ಏನು ಸಂಬಂಧ ಅಜ್ಜ ಸತ್ತರೆ ನಾನೇಕೆ ಉಪವಾಸವಿರಬೇಕು. ಪ್ರಶ್ನೆ ಕಾಡುತಿತ್ತು. ಆದರೆ ಕೇಳಿ ಅಪ್ಪನಿಂದಿ ಹೊಡೆತ ತಿನ್ನಲು ಹಿಂಜರಿದು ಪದ್ದಿಕೊಟ್ಟ ಒಣಮೀನು, ರೊಟ್ಟೆ ಗಬಗಬನೆ ತಿಂದು ನೀರು ಕುಡಿದಾಗ ಕಣ್ಣುಗಳಲ್ಲಿ ಒಂದಿಷ್ಟು ಜೀವ ಬಂದ ಅನುಭವವಾಗಿ ತೊಡಗಿತ್ತು.

ನೆನಪಿದೆ ನನಗೆ ಆ ಕ್ಷಣ ಹೌದು ಅವಳೆ ಕಬ್ಬಿನ ಗದ್ದೆಯಲ್ಲಿ,ಬೆಂಡಿಕಾಯಿ ಗಿಡಗಳನ್ನ ಕಾಯಲು ಹೋದಾಗ ಗುಡಸಲಲ್ಲಿ ನನ್ನೊಂದಿಗೆ ಕಣ್ಣ ಮುಚ್ಚಾಲೇ ಆಡಿದ್ದಳು. ಇವತ್ತಿಗೂ ಅವಳು ಕಲಿಸಿದ ಆಟ ಅತಿರೇಕಕ್ಕೆ ಹೋಗಿದೆ. ಅವ್ವ ಅಂಗಡಿ ಇಟ್ಟಿದ್ದು.ಯಾರಿಗೂ ಕಾಣದಂತೆ, ಡಬ್ಬಿಯೊಂದನ್ನ ಹುಗಿದು, ಒಂದೊಂದು ರೂಪಾಯಿ ನಾಣ್ಯಗಳನ್ನ ಕೂಡಿಸಿ ಇಡುತ್ತಿದ್ದಳು ನನ್ನ ಹದ್ದಿನ ಕಣ್ಣು ಅದನ ಶೋಧಿಸಿ, ಅದರಿಂದ ದುಡ್ಡು ತೆಗೆದು ತೆಗೆದು, ಅನ್ನೊದಕ್ಕಿಂತ ಕದ್ದು ಎಂಬುದೇ ಸೂಕ್ತ. ಕದ್ದು ಸಿನೀಮಾ ನೋಡಿದ್ದು. ಹಾಸ್ಟಲಲ್ಲಿ ಓಮ್ಮೆ ಗಣಿತ ಪುಸ್ತಕವನ್ನ ಮಾರಿ ಪಜೀತಿಯಿಂದ ಸಿನೀಮಾನೋಡಿ ಪುಸ್ತಕದವನು ಹುಡುಕಿ ಕೊನೆಗೆ ನಾನೇ ಕದ್ದಿದ್ದು, ಎಂದು ಸಾಬೀತು ಪಡಿಸಿದಾಗ ಅವಮಾನಗೊಂಡ ಕ್ಷಣ, ಇಂದು ನೆನಪಗುತ್ತದೆ. ಅಪ್ಪ ಹಣ ಇಟ್ಟ ಜಾಗ ನೋಡಿಕೊಂಡು ೧೦ ರೂಪಾಯಿ ಕದ್ದಾಗ ತಮ್ಮ ಹೆದರಿಸಿದ್ದು ನೆನಪಾದಾಗ ನನ್ನ ಕಾರ್ಯದ ಬಗ್ಗೆ ನಾಚಿಕೆ ಆಗುತ್ತದೆ.

ಅಂದು ಇಂದಿನ ಸೂಕ್ಷ್ಮಭಾವನೆಗಳು ನಾನು ಬೆಳೆದಂತೆ ಕೆಲವೊಂದು ಕಳಚಿಕೊಂಡು ಹೊಸದೊಂದು ಅಂಟಿಕೊಂಡು ಬಿಡುತ್ತವೆ. ಅಂದು ಮಾಡಿದ ಸಣ್ಣ ಪುಟ್ಟ ಕೈ ಚಳಕಗಳು ಕಳ್ಳತನವೆನಿಸಲಿಲ್ಲಾ ನನಗೆ ಅಂದು ಅವಶ್ಯವಾಗಿದ್ದವು. ನಾನು ಒಬ್ಬ ಮನುಷ್ಯ. ನನಗೂ ಆಸೆ. ಆಕಾಂಕ್ಷೆಗಳಿವೆ. ಅಪ್ಪ ಹೊಲದಲ್ಲಿ ಸಿಕ್ಕ ಅಣಬೆಗಳನ್ನ ಮಾರಿ ಇಪ್ಪತ್ತೈದು



ಪೈಸೆಕೊಟ್ಟಾಗ, "ಬತ್ತಿಹೋದ ಕಂಗಳಿಂದ ತಿಣುಕಿ ಬಂದ ಕಣ್ಣೀರನ್ನ ಕಾಣದಂತೆ ಒರೆಸಿಕೊಂಡು." ಅಪ್ಪ ಆಶಾವಾದ ಭಾವಕ್ಕೆ ಪೆಟ್ಟಾಗದಂತೆ ನಗುಮುಖದಿಂದ ಪಡೆದುಕೊಂಡ, ಆ ಆತ್ಮೀಯ ಕ್ಷಣ ಇಂದು ರಣ ಬಿಸಲಲ್ಲಿ ಕಣ್ಣು ಕಾಣದೇ ತಡಕಾಡುತ್ತಾ ಹೊಲದಲ್ಲಿ ಕೆಲಸ ಮಾಡುವ ಅಪ್ಪ, ನನಂತರಂಗವನ್ನ ಒಂದೊಂದು ಸಾರಿ ಕಲಕಿ ಬಿಡುತ್ತಾರೆ. ಬೆವರೇ ಬಾರದ ದೇಹ ಸುಕ್ಕು ಗಟ್ಟಿ ಸೊರಗಿ ಬೆನ್ನು ಬಾಗಿಸಿಕೊಂಡು ಕೆಲಸ ಮಾಡುತ್ತಾನೆ. ಎಷ್ಟೊಂದು ದೂರ ನಡೆದು ಬಿಟ್ಟಿದ್ದೇನೆ ಮನ್ನೆ ಮನ್ನೆ ಎತ್ತುಗಳ ತಿಂದು ಬಿಟ್ಟ, ಸೊಪ್ಪಿ ಹುಲ್ಲು ಆಯ್ದು ತಂದು ಬೆಂಕಿ ಹಾಕಿಕೊಂಡು, ಕೊರಿ ಬೀಡಿ ಸೇದಿದ ಅದೇ ಹುಡ್ಗ, ಮುಖದ ಮೇಲೆ ಮೀಸೆ ಒಡೆದು ಎಷ್ಟು ಎತ್ತರಕ್ಕೆ ಬೆಳದ ಬಿಟ್ಟನೇ.

ಅಂದೊಂದು ದಿನ ಅವಳ ಜೊತೆ ಹೋಟೆಲಿಗೆ ಹೋದಾಗ ಹಾಳು ಜನ ಪದೇ ಪದೇ ನಮ್ಮತ್ತಲೇ ನೋಡುತ್ತಿದ್ದರೂ ರಸ್ತೆಯಲ್ಲಿ ಬರುವಾಗಲೂ ಸಹ ನೂರಾರು ಕಂಗಳು ನಮ್ಮ ಬೆನ್ನ ಹಿಂದೆ ನಡೆದು ಬರುತ್ತಿದ್ದವು. ಅವು ಸುಮ್ಮನೆ ನನ್ನ ಹಿಂದೆ ಬಂದರೆ ಒಳ್ಳೆಯದು, ಆದರೆ ಮನಸನ್ನ ಇರುಯುತ್ತವೆ ಸಹಿಸಲಾಗದಿದ್ದರೂ ಮಾತಾಡುವಂತಿಲ್ಲಾ. ಅವಳು ಆ ನೋಟಗಳನ್ನ ಎದುರಿಸಲಾರದೇ, ಅಯ್ಯೋ ಇವರೆಲ್ಲಾ ನಮ್ಮ ಅಣ್ಣನ ಗೆಳೆಯರು ನೀವು ಹೀಗೆ ಎಷ್ಟು ಹುಡುಗಿಯರ ಜೊತೆಗೆ ಹೊಟೇಲುಗಳಿಗೆ ಹೊಕ್ಕಿರಾ, ಎಲ್ಲ ಹೋಟೆಲ್ಲುಗಳಲ್ಲಿನ ಕೆಲಸ ಮಾಡೋ ಹುಡುಗರು ನಿಮ್ಮನ್ನ ಕಂಡಾಗ ನಗುತ್ತಾರೆ. ಎಂದಳು ಅಂದರೆ ಅವಳ ಮಾತಿನರ್ಥ, ನಾನು ತಿರುಗಾಡಿದ ಎಲ್ಲಾ ಹುಡುಗಿಯರು, ನನ್ನ ದೃಷ್ಟಿಯಲ್ಲಿ ಅಥವಾ ಅವಳ ಅನಿಸಿಕೆಯಲ್ಲಿ ನಾನು ಬಯಸಿದವರೇ? ಅವಳ ಮಾತಿಗೆ ನಕ್ಕು ಉತ್ತರಿಸಿದೆ. ಸುಮ್ಮನಾಗುತ್ತೇನೆ.

ಶ್ರೇಣಿಕೃತ ಸಮಾಜ ಕಲ್ಮಷಗೊಳ್ಳತ್ತಾ ಅಸ್ತಿತ್ವವನ್ನೆ ಸಾಮಾಧಿ ಮಾಡುತ್ತಿದೆ ಎನಿಸಿದಾಗ ನಾನು ಪ್ರತಿಕ್ರೀಯಿಸಲಾರದಷ್ಟು ಒಗ್ಗಿ ಹೋಗಿದ್ದೆನೆ. ಅಂದೊಂದು ದಿನ ಆ ಗುಳಿಬಿಳುವ ಕೆನ್ನೆಯ ಹುಡುಗಿಯ ಜೊತೆ ಮಾತಾಡಿದ್ದಕ್ಕೆ ನನ್ನ ಮೇಲೊಂದು ಕವನವನ್ನೇ ಬರೆದು ಬಿಡುವುದೇ! ಹಾಗಂತ ನಾನೇನು ಸುರದ್ರೂಪಿಯಲ್ಲ ಆದರೆ ಕುರುಪಿಯಂತೂ ಅಲ್ಲ, ಅವಳ ಕವನಗಳಿಗೆ ವಸ್ತು ಏನೊ ಆಗಿದ್ದೆ, ಆದರೆ ಅವಳ ಅಂತರಂಗದಲ್ಲಿ ನೆಲೆಸಿ ಬಿಡುವ ಸಾಮರ್ಥ್ಯ ನನಲ್ಲಿರಲಿಲ್ಲ. ನೀವು ತುಂಬಾ ಚೆನ್ನಾಗಿ ಮಾತಾಡ್ತಿರಿ ಅಂದ ಹುಡುಗಿಯ ಹಿನ್ನೆಲೆಯನ್ನು ಅರಿಯಲು ನಿಘಂಟು ಹುಡುಕುತ್ತಾ ಹೋಗಿ, ಉತ್ತರ ಹೇಳುವ ಮೊದಲೇ ಅವಳು ಕಾಣೆಯಾಗಿದ್ದಳು. ಇವರೆಲ್ಲರ ಭಾವುಕತೆಗೆ ಮೀರಿ

ಮಗದೊಬ್ಬಳು ನನ್ನ ಮೂಲಕ್ಕೆ ಕೈ ಹಾಕಿದಾಗ ಅಸ್ಥಿರ ಬದುಕಲ್ಲಿ ಅವಳ ಬಯಕೆಗಳ
ಗಾಳಿಗೆ ತೂರುವಂತೆ ಹೇಳಿ ನುಣಚಿಕೊಂಡಿದ್ದೆ.

ನನ್ನ ಕವನದ ಸಾಲನ್ನ ಓದಿದ್ದ ಹುಡುಗಿಯೊಬ್ಬಳು ಸಾರ್ ನಿಮ್ಮ ಕನಸಿನ ಕ
ಯಾರು ಎಂದು ಪೀಡಿಸುತ್ತಿದ್ದಳು. ಬಹುಶಃ ಅವಳು ತಾನಾಗ ಬೇಕೆಂದ
ಅಂದುಕೊಂಡಿದ್ದಳೋ ಏನೋ ಯಾರಾದರೇನು ನೀವು. ಅಲ್ಲಾ ಬಿಡಿ ಏಂದು ಹೇ
ಬಿಡಬೇಕೆಂದುಕೊಂಡಿದ್ದೆ, ಆದರೆ ಅವಳ ಮನ ನೋಯಿಸಬಾರದೆಂದು ಯಾರ
ಇಲ್ಲಾ ಎಂದು ಚುಟುಕಾಗಿ ಉತ್ತರಿಸಿದ್ದೆ. ನನ್ನ ಗೊಂದಲದ ಬದುಕಲ್ಲಿ ಅಂದೊಂದ
ದಿನ ದಾರಿತಪ್ಪಿದೆ ಅದೇ ದಿನ ನಾನು ಮೃಗವಾಗಿದ್ದೆ. ನನಲ್ಲಿ ಅಂದು ಯಾವ ಭಾವನೆಗಳು
ಇರಲಿಲ್ಲ ಕಲ್ಲಾಗಿದ್ದೆ. ಆ ಘಟನೆಯ ನಂತರದ ದಿನಗಳಲ್ಲಿ ನಾನು ನಾನಾಗಿಲ್ಲಾ. ನನ
ನೈಜತೆಯನ್ನ ಮರೆಮಾಚಿ ನಾನಲ್ಲದ ನಾನಾಗಿ ಮೃದು ಹೃದಯಿಯಾಗಿ, ಮೋ
ಮಾಡುವ ಕಲೆಯೊಂದನ್ನ ಕರಗತ ಮಾಡಿಕೊಂಡಿದ್ದೇನೆ. ಈಗ ಬದುಕಿನಲ್ಲಿ ಎಲ್ಲ
ನಾನಲ್ಲದ ಕೃತಕತೆಯೇ ಆಳುತ್ತಿದೆ.

ಹುಡಕುತ್ತಾ ಹೊರಟಿದ್ದೇನೆ, ನಾನು ದಾರಿಯಲ್ಲಿ ಒಮ್ಮೊಮ್ಮೆ ನನ್ನಲ್ಲಿಯ ನಾನ
ಹೊರಬಂದು ವಿಶ್ಲೇಷಿಕೊಳ್ಳಲು ಪ್ರಯತ್ನಿಸಿ ಸೋಲುತ್ತೇನೆ. ನನ್ನವ್ವ ಅಂದು ನಡೆಯಲಾಗ
ಅಸಾಹಯಕಳಾಗಿ ಮಲಗಿದಾಗ, ನನ್ನಣ್ಣನ ಮಗ ಕುಮ್ಮಿಯ ಕೈಯೊಳಗಿನ ಬ್ರೆಡ್ಡಿ
ತುಂಡನ್ನ ಆಸೆ ಗಣ್ಣಿನಿಂದ ಸಣ್ಣ ಹುಡುಗಿಯಂತೆ ನೋಡುತ್ತಿದ್ದನ್ನ ನೋಡಿದಾ
ಹೃದಯನಿಂತ ಅನುಭವವಾಗುತ್ತದೆ. ನನ್ನ ಹುಡುಕಾಟದ ಒಂದು ಅಂಶ ಸಿಕ್ಕಿತು
ಹೌದು ಅದೇ ಅಸಾಹಯಕತೆ. ಇಂದು ಅವ್ವ ನಾಳೆ ನಾನು ಇಂತ ಎಷ್ಟೊ ಸತ್ಯಗಳನ
ಮಗ್ಗಲಲ್ಲೆ ಮುಚ್ಚಿಟ್ಟುಕೊಂಡು ನಾನಲ್ಲದ ನಾನಾಗಿ ಬದುಕಿದ್ದೇನೆ. ನನ್ನೊಳಗಿನ ನನ್ನನ
ಅಡಗಿಸಿಕೊಂಡು ಬದುಕಿದ್ದೇನೆ ಬದುಕಿನ ಕೊನೆಯನ್ನ ನೆನೆಯುತ್ತ.

ಕಥೆ ಎನ್ನುವುದು ಸ್ಮೃತಿಪಟಲದಲ್ಲಿ ಹೆಪ್ಪುಗಟ್ಟಿದ ಹಿಮದಂತೆ ಘನೀಭೂತವಾಗಿ ಕುಳಿತಿರುತ್ತದೆ, ಭಾವದ ಕಾವು ತಾಕಿದೊಡನೆ ಅದು ಅಕ್ಷರರೂಪಿ ಹನಿಯಾಗಿ ತೊಟ್ಟಿಕ್ಕುತ್ತದೆ. ಅದು ಅನೇಕ ಸಾರಿ ಕಥೆಗಾರನೊಬ್ಬನ ಒಳಕುದಿತವಾಗಿರುತ್ತದೆ. ಬಹುಕಾಲ ಆ ಕುದಿಯನ್ನು ಒಳಗಿಟ್ಟುಕೊಳ್ಳಲಾಗದ ಕಥೆಗಾರ ಅದನ್ನು ಹೊರಹಾಕಲು ಪ್ರಯತ್ನಿಸಿದಾಗ ಅದು ಕಥೆಯಾಗುತ್ತದೆ. ಜೀವನಸಾರವನ್ನು ಕಸಿಮಾಡಿ ಅನುಭವದ ಪಡಿಪಾಟಲನ್ನು ಹೊರಹಾಕುವಲ್ಲಿ ಯಶಸ್ವಿಯಾದರೆ ಅಲ್ಲೊಂದು ಕಥೆ ಅವತರಿಸುತ್ತದೆ. ಸಣ್ಣ ಕಥೆಯ ಹುಟ್ಟುವಿಕೆಗೆ ಸಂಬಂಧಿಸಿದಂತೆ ಒಬ್ಬೊಬ್ಬ ಕಥೆಗಾರರದೂ ಅಲ್ಪಸ್ವಲ್ಪ ವ್ಯತ್ಯಾಸದಿಂದ ಕೂಡಿದ ಅಭಿಪ್ರಾಯಗಳಿವೆ. ಅದೇನಾದರೂ ಇರಲಿ, ಶಾಂತನಾಯ್ಕರಿಗೆ ಅವರ ಕಥೆಗಳನ್ನು ವಿಮರ್ಶಾವಲಯ ಸರಿಯಾದ ರೀತಿಯಲ್ಲಿ ಪರಿಗಣನೆಗೆ ತೆಗೆದುಕೊಳ್ಳದಿರುವ ವಿಚಾರದಲ್ಲಿ ಕೊಂಚ ಅಸಮಾಧಾನವಿದೆ. ಸಂವೇದನೆಯ ಹಿನ್ನೆಲೆಯಲ್ಲಿ ಕಥೆಗಳನ್ನು ಚರ್ಚೆಗೊಳಪಡಿಸುವಾಗ ಅದು ಯಾರ ಬಳಿಗೋ ಬಂದು ನಿಂತುಹೋಗುತ್ತದೆ. ಅವರನ್ನೇ, ಅವರ ಕಥೆಗಳನ್ನೇ ಮತ್ತೆ ಮತ್ತೆ ಉಲ್ಲೇಖಿಸುವುದು ವಿಮರ್ಶಕರ ಪಕ್ಷಪಾತ ಮನೋಭಾವವನ್ನು ತೋರಿಸುತ್ತದೋ, ಸೀಮಿತ ಜ್ಞಾನವನ್ನು ಸೂಚಿಸುತ್ತದೋ, ಹೊಸಬರನ್ನು ಅಷ್ಟು ಸುಲಭವಾಗಿ ಸ್ವೀಕರಿಸಬಾರದೆನ್ನುವ ಧಾರ್ಷ್ಟ್ಯವನ್ನು ತೋರುತ್ತದೋ- ಅಂತಿಮವಾಗಿ ಅನ್ಯಾಯದ ಖಡ್ಗ ಎರಗುವುದು ಹೊಸ ಕಥೆಗಾರನ ಮೇಲೆಯೇ. ಈ ಸಂಕಲನದಲ್ಲಿರುವ ಹದಿನಾರು ಕಥೆಗಳನ್ನು ಲಂಬಾಣಿ ಸಂವೇದನೆ ಮತ್ತು ಅದಕ್ಕೆ ಪೂರಕವಾದ ಬದುಕಿನ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದಲ್ಲಿ ಕಥೆಗಾರನ ಶ್ರಮಕ್ಕೆ ನ್ಯಾಯ ದೊರೆತಂತಾಗುತ್ತದೆ.

₹ 80/-

ISBN-93-81977-45-3

9 789381 977453

ಸಿವಿಜಿ